ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 7

ಫೆಬ್ರವರಿ 17 2008

ಕನ್ನಡ ವಾರಪತ್ರಿಕೆ

ರೂ. 5/-




ಕೋಲಾರ : ಕಲ್ಲು ಗಣಿಗಾರಿಕೆಯ ಅಕ್ರಮ



ಕಂಗಾಲಾದ ಕಬ್ಬು ಬೆಳೆಗಾರ ಜೀವ ಹಿಂಡುವ ಸರ್ಕಾರ

ಬಜೆಟ್ ಅಂದ್ರ ಹ್ಯಾಂಗಿರಬೇಕ ?



'ಜೀವನಕಲೆ' ಎಂಬ ಫ್ರಾಡ್!



ಇದ್ದದ್ದು ಇದ್ದಾಂಗ.....



ಹೊರೆ ಬೇಡ

"ತೈಲ ಬೆಲೆ ಏರಿಕೆ ಬದಲಿಗೆ ತೆರಿಗೆಯ ಸ್ವರೂಪ ಬದಲಾಯಿಸಿ, ಜನತೆಯ ಮೇಲೆ ಹೊರೆ ಹೇರಬೇಡಿ"

– ಸೀತಾರಾಮ ಯೆಚೂರಿ, ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರು

★

ದೇಶದ ಶೇ.78 ರಷ್ಟು ಜನರು ಅಂದರೆ 86.3 ಕೋಟಿ ಜನರು ಕೇವಲ ದಿನಕ್ಕೆ 20 ರೂ.ಗಳ ಆದಾಯದಲ್ಲಿ ಬದುಕುತ್ತಿದ್ದಾರೆ.

– ಎ.ಬಿ.ಬರ್ಧನ್, ಸಿಪಿಐ ಪ್ರಧಾನ ಕಾರ್ಯದರ್ಶಿ

★


ಕೂಲಿ ಕುಸಿತ

"ರಾಜ್ಯದಲ್ಲಿ ರಾಜ್ಯಪಾಲರ ಆಡಳಿತ ಜಾರಿಯಲ್ಲಿದ್ದು, ಅಧಿಕಾರಿಗಳ ಅಟ್ಟಹಾಸ ಮಿತಿ ಮೀರಿದೆ. ನೌಕರರ ದಿನಗೂಲಿಯನ್ನು ಶೇ.34 ರಷ್ಟು ಕಡಿತಗೊಳಿಸಲಾಗಿದೆ. ಕಾರ್ಮಿಕರ ದುಡಿಯುವ ವರ್ಗಗಳ ಜನರ ಬವಣೆ ಕೇಳುವವರೇ ಇಲ್ಲವಾಗಿದೆ."

ಎಸ್.ಪ್ರಸನ್ನಕುಮಾರ್ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು

★

ಅಧಿಕಾರವೇ ಸಿದ್ಧಾಂತ!?



"ಬದಲಾದ ರಾಜಕೀಯ ಪರಿಸ್ಥಿತಿಯಲ್ಲೀಗ ರಾಜ್ಯದ ಯಾವುದೇ ಪಕ್ಷಗಳಿಗೂ ತತ್ವ ಸಿದ್ಧಾಂತಗಳಿಲ್ಲ. ಕೇವಲ ಅಧಿಕಾರ ಹಿಡಿಯುವುದೇ ಆಯಾ ಪಕ್ಷಗಳ ತತ್ವ ಸಿದ್ಧಾಂತಗಳಾಗಿವೆ."

ಎಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿಗಳು

★

ವ್ಯತ್ಯಾಸ

"ಗಾಂಧೀಜಿ ಆರಾಧಿಸುತ್ತಿದ್ದ ರಾಮನಿಗೂ ರಾಜಕೀಯ ಪಕ್ಷಗಳು ತಮ್ಮ ಲಾಭಕ್ಕಾಗಿ ಆರಾಧಿಸುವ ರಾಮನಿಗೂ ವ್ಯತ್ಯಾಸವಿದೆ."

– ಡಾ: ಸಿ.ಬಿ.ಲಕ್ಷ್ಮಿಪತಿ, ಬೆಂ.ವಿ.ವಿ. ರಾಷ್ಟ್ರೀಯ ಸೇವಾ ಯೋಜನಾ ಘಟಕದ ಸಂಯೋಜನಾಧಿಕಾರಿ

ಇಎಂಎಸ್ ಭವನ ನಿಧಿ

ಎರಡನೇ ಹಂತದ ಸಂಗ್ರಹ



ಹಿಂದಿನ ಸಂಚಿಕೆಯಿಂದ	ರೂ. 14,53,756
ವಿಮಾ ಸಂಗಾತಿಗಳು-,ರಾಯಚೂರು ವಲಯ	21641
ಎಂ.ನಾಗಚಂದ್ರ ನಾಯಕ ಹೊಸಪೇಟೆ	5000
ಆನಂದ ಬೆಂಗಳೂರು	200
ವಿಮಾ ಸಂಗಾತಿಗಳು, ಬೆಂಗಳೂರು	3800
ಸಿಪಿಐ(ಎಂ) ಗುಲ್ಬರ್ಗಾ ಜಿಲ್ಲಾಸಮಿತಿ ಮೂಲಕ	
ಚನ್ನಪ್ಪ ಆನೆಗುಂದಿ	
ಶಾಂತಾಘಂಟೆ	1000
ಶ್ರೀಮಂತ ಬಿರಾದಾರ	250
ಅಂಗನವಾಡಿ ಶಾಖೆ - ಅಫಜಲಪುರ	250
ಎಲ್.ಆರ್.ಅಂಗಡಿ, ಹುಬ್ಬಳ್ಳಿ	500
ಡಿ.ಲೋಕೇಶ್ವರ, ಭದ್ರಾವತಿ	1000
ದಿ ಆವಗಳ್ಳಿ ಮಹಾಲಿಂಗ ಶೆಟ್ಟರ ನೆನಪಿನಲ್ಲಿ ಅವರ ಮಗನ ಕೊಡುಗೆ	10,000
ವಿಮಾ ಸಂಗಾತಿಗಳು, ಬೆಳಗಾವಿ ವಿಭಾಗ	10,000
ವಿಮಾ ಸಂಗಾತಿಗಳು, ಧಾರವಾಡ ವಿಭಾಗ	5000
ಬೆಂಗಳೂರು ಜಿಲ್ಲಾ ಸಮಿತಿ ಮೂಲಕ	5000
ಒಟ್ಟು	5,00,000
	ರೂ. 20,17397.00

28.12.07ರ ಸಂಚಿಕೆಯಲ್ಲಿ ಕೃಷ್ಣಪ್ಪ ಶೆಟ್ಟಿ ರೇಗೋ ಕಂಪೌಂಡ್, ಮಂಗಳೂರು ಇವರು ನೀಡಿದ ರೂ.200 ಬದಲಿಗೆ ರೂ.100 ಎಂದು ಮುದ್ರಿತವಾಗಿದೆ ತಪ್ಪಿಗಾಗಿ ವಿಷಾಧ.

ಚುಚ್ಚುಮದ್ದು

ಪ್ರವೇಶ ನಿರ್ಬಂಧ

■ "ವಿಜ್ಞಾನ, ತಂತ್ರಜ್ಞಾನ ಹಾಗೂ ಮಿಲಿಟರಿ ಸೇರಿದಂತೆ ನಾನಾ ಕಡೆ ಮುಸ್ಲಿಮರಿಗೆ ಪ್ರವೇಶ ನಿರ್ಬಂಧಿಸಿ ಮುಂದಾಗುವ ಅನಾಹುತಗಳನ್ನು ತಡೆಗಟ್ಟಬೇಕು."

★

ಬೀಗ ಹಾಕುತ್ತೇವೆ

■ "ರಾಜ್ಯಾದ್ಯಂತ ಇರುವ ಮದರಸಾಗಳು ಭಯೋತ್ಪಾದಕರ ತರಬೇತಿ ಮತ್ತು ಶಸ್ತ್ರಾಸ್ತ್ರ ಸಂಗ್ರಹ ತಾಣಗಳಾಗಿವೆ. ರಾಜ್ಯ ಸರ್ಕಾರದ ಎಲ್ಲ ಮದರಸಾಗಳಲ್ಲಿ ಶೋಧನೆಯ ಕಾರ್ಯವನ್ನು ಕೈಗೊಳ್ಳದಿದ್ದಲ್ಲಿ ಸ್ವಯಂ ತನಿಖೆ ಕೈಗೊಳ್ಳುವುದಲ್ಲದೆ, ಎಲ್ಲ ಮದರಸಾಗಳಿಗೆ ಬೀಗ ಹಾಕುತ್ತೇವೆ"

– ಪ್ರಮೋದ್ ಮುತಾಲಿಕ್,
ಅಧ್ಯಕ್ಷ, ಶ್ರೀರಾಮಸೇನೆ

→ ಅಬ್ಬಬ್ಬ ಜನಾಂಗ ದ್ವೇಶದ ವಿಷ ಇನ್ನೂ ಎಷ್ಟು ಇದೆಯಪ್ಪಾ ನಿನ್ನ ತಲೆಯಲ್ಲಿ?

★

ಭರತ ಖಂಡದ ಮಹಿಮೆ!!

■ "ಈ ಭರತ ಖಂಡದ ಮಣ್ಣಿನ ಮಹಿಮೆಯೇ ಅಂಥದ್ದು. ಇಲ್ಲಿ ಅನೇಕ ಶಿರೋಮಣಿಗಳು ಸ್ತ್ರೀಕುಲಕ್ಕೆ ಕಳಶಪ್ರಾಯರಾಗಿದ್ದಾರೆ. ಸೂರ್ಯನನ್ನೇ ತಡೆದ ಸತಿ ಅನುಸೂಯೆ, ಯಮನನ್ನೇ ಗೆದ್ದ ಸಾವಿತ್ರಿ, ಶ್ರೀಕೃಷ್ಣನ ಅನನ್ಯ ಭಕ್ತೆ ಸಕ್ಕೂಬಾಯಿ. ಇವರೆಲ್ಲರೂ ಅಸಾಮಾನ್ಯ ಸ್ತ್ರೀಯರಾಗಿದ್ದರು. ಪತಿಯೇ ಪ್ರತ್ಯಕ್ಷ ದೈವ ಎಂದು ಬಗೆದು, ಆತನಿದ್ದರೆ ಜೀವನ ಇಲ್ಲದಿದ್ದರೆ ಬದುಕೇ ಬೇಡ ಎಂದು ವಾದಿಸುವವರು. ಆಕಸ್ಮಾತ್ ಪತಿ ಇಹಲೋಕ ತ್ಯಜಿಸಿದರೆ ತಾವೂ ಆತನೊಡನೆ ಚಿತೆಯೇರಿ ಸಹಗಮನ ಮಾಡುತ್ತಿದ್ದರು.

ಇಲ್ಲೊಂದು ಸೋಜಿಗದ ಕಥೆಯಿದೆ. ಅಂತಹ ಸ್ತ್ರೀರತ್ನವೊಂದು ಪತಿಯೊಡನೆ ಸಹಗಮನ ಮಾಡಿದ್ದ ಚಿತೆ ಇಂದಿಗೂ ಉರಿಯುತ್ತಿದೆಯಂತೆ"....!

'ಸಂಯುಕ್ತ ಕರ್ನಾಟಕ' ಪತ್ರಿಕೆಯ 'ಸುದ್ದಿ ಸ್ವಾರಸ್ಯ' ಅಂಕಣದಲ್ಲಿ – 1788ರಲ್ಲಿ ಚಿತೆಯೇರಿದ್ದರು ಎನ್ನಲಾದ ಧಾರಾಕೋಟೆಯ ರಾಜಾಸಾಹೇಬ್ ಕೃಷ್ಣಸಿಂಗ್‌ರ ಪತ್ನಿರಾಣಿ ಚಂದ್ರಮಾದೇವಿ 'ಸತಿ' ಪ್ರಕರಣದ ಕುರಿತು.

→ 'ಸಂಯುಕ್ತ ಕರ್ನಾಟಕ'ಕ್ಕೆ ಬಂದಿರೋ ದುರ್ಗತಿ ಏನೂಂತ ಅರ್ಥ ಮಾಡ್ಕೊಳ್ಳೋಕೆ ಒಳ್ಳೆ ವರದಿ ಇದು.

★

ಯಾಕೆ ಬಡಿದಾಟ?

■ ಹಾಸನ : ಬಿಜೆಪಿ ಸಭೆಯಲ್ಲಿ ಮಾರಾಮಾರಿ ಜಿಲ್ಲಾಧ್ಯಕ್ಷರ ಮೇಲೆ ಹಲ್ಲೆ

- ಸುದ್ದಿ

→ ಮುಂದಿನ ಮಂತ್ರಿ ಮಂಡಳದ ಖಾತೆ ಹಂಚಿಕೆ ವಿವಾದವಾ?

★

ಗಾಂಧೀಜಿಯನ್ನು ಹೀಗೂ ಕೊಲ್ಲಬಹುದೇ?

■ ಗಾಂಧೀಜಿ ಕನಸು ನನಸಾಗಲಿ

– ಹಾರನಹಳ್ಳಿ ರಾಮಸ್ವಾಮಿ, ಕಾಂಗ್ರೆಸ್ ಮುಖಂಡರು

→ ಊದುವುದು ಆರೆಸ್ಸೆಸ್ ತುತ್ತೂರಿ ಕಾಣುವುದು ಗಾಂಧೀಜಿ ಕನಸು. ಭಲೆ...

★

ಈಗ್ಯಾಕೆ ಈ ಮಾತು

■ "ನಾನು ಯಾವ ರಾಜಕೀಯ ಪಕ್ಷದ ಪರವಾಗಿಯೂ ಇಲ್ಲ; ಪ್ರಚಾರಕ್ಕೂ ಹೋಗಿಲ್ಲ"

ಪೇಜಾವರ ಶ್ರೀ

→ ಹೌದೇ, ಈ ವಿಚಾರ ನಮ್ಮ ಜನತೆಗೆ ಒಂಚೂರು ಗೊತ್ತಿಲ್ವಲ್ಲಾ ಪಾಪ!!

★

'ಸಾಕಪ್ಪ ಸಾಕು'

■ "ಸಾಕಪ್ಪಾ ಸಾಕು... ಈ ಕೋರ್ಟ್ ಈ ವಿವಾದದ ಜಂಜಾಟದಲ್ಲಿ ಟೆನಿಸ್ ಸಹವಾಸ ಬೇಡವೇ ಬೇಡ! ರಾಷ್ಟ್ರಧ್ವಜಕ್ಕೆ ಅವಮಾನಿಸಿದೆ ಎಂದು ಆರೋಪಿಸಿ ಕೋರ್ಟ್ ಮೆಟ್ಟಿಲೇರುವಂತೆ ಮಾಡಲಾಗಿದೆ. ಆದರೆ ಎಲ್ಲರಂತೆ ನನಗೂ ನಾನು ಭಾರತೀಯಳು ಎಂಬ ಕಲ್ಪನೆ ಸಾಕಷ್ಟು ಇದೆ. ನನ್ನ ದೇಶದ ಮೇಲೆ ನನಗೂ ಸಾಕಷ್ಟು ಪ್ರೀತಿ ಇದೆ."

ಸಾನಿಯಾ ಮಿರ್ಜಾ
ಖ್ಯಾತ ಟೆನಿಸ್ ಆಟಗಾರ್ತಿ

→ ಹೆದರಬಾರದು ಸಾನಿಯಾ. ಹೆದರಿದರೆ ಕೋಮುವಾದಿಗಳೂ, ಮೂಲಭೂತವಾದಿಗಳೂ ಇನ್ನೂ ಹೆದರಿಸುತ್ತಾರೆ.

ಸಂಪಾದಕೀಯ

ಸಾಮಾಜಿಕ ನ್ಯಾಯದ ವಿಸ್ತರಣೆ ಹಾಗೂ ಚುನಾಯಿತ ಸರ್ಕಾರದ ಅಗತ್ಯತೆ

ರಾಷ್ಟ್ರಪತಿ ಆಳ್ವಿಕೆಯಡಿಯಲ್ಲಿರುವ ಕರ್ನಾಟಕದ ವಿಧಾನಸಭಾ ಚುನಾವಣೆಯನ್ನು ಯಾವಾಗ, ಯಾವ ಆಧಾರದಲ್ಲಿ ನಡೆಸಬೇಕು ಎಂಬ ಬಗ್ಗೆ ರಾಜ್ಯದ ರಾಜಕೀಯ ವಲಯದಲ್ಲಿ ಚರ್ಚೆಯೀಗ ಎದ್ದು ಬಂದಿದೆ. ಮೇ ತಿಂಗಳಲ್ಲಿ ರಾಷ್ಟ್ರಪತಿ ಆಳ್ವಿಕೆಯ ಅವಧಿಯು ಮುಗಿಯುತ್ತಲಿದೆ ಯಾದ್ದರಿಂದ ಚುನಾಯಿತ ಪ್ರತಿನಿಧಿತ್ವದ ಸರ್ಕಾರದ ಸ್ಥಾಪನೆಗೆ ಚುನಾವಣೆಗೆ ಹೋಗಬೇಕಾದ್ದು ಸಹಜವೂ ಆಗಿದೆ. ಆದರೆ ಈ ಸಂದರ್ಭದಲ್ಲಿಯೇ ಇಂತಹ ಚುನಾವಣೆಯನ್ನು ಮುಂದೂಡ ಬೇಕಾಗುವುದು ಎಂಬ ವಿಷಯದ ಸುತ್ತಲೂ ಚರ್ಚೆ ನಡೆದಿರುವಲ್ಲಿ ವಿಧಾನಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯ ಪ್ರಶ್ನೆಯೂ ತಳುಕು ಹಾಕಿಕೊಂಡಿರುವುದೂ ಅತಂತ್ರದ ಸ್ಥಿತಿಯನ್ನು ನಿರ್ಮಿಸಿದೆ.

ರಾಜ್ಯದ ಮತದಾರರ ಪಟ್ಟಿಯಲ್ಲಿ ಸುಮಾರು 50 ಲಕ್ಷದಷ್ಟು ಖೋಟಾ ಮತದಾರರ ಹೆಸರುಗಳು ನುಸುಳಿದ್ದು ಅವುಗಳನ್ನು ಉಚ್ಚಾಟಿಸಲು ಆಯೋಗದ ಕ್ರಮ ವಹಿಸಿರುವುದು, ಮೇನಲ್ಲಿ ಚುನಾವಣೆಯಾದರೂ ತಾನು ಸಿದ್ಧ ಎಂಬುದನ್ನು ಪ್ರಕಟಿಸಿದೆ. ಇದರಿಂದ ಒಂದು ಪ್ರಾಥಮಿಕ ಅಡಚಣೆಯ ನಿವಾರಣೆಯಾದಂತಾಗಿದೆ. ಆದರೆ ಬಹುಮುಖ್ಯವಾಗಿ ಈಗಿರುವ ಕ್ಷೇತ್ರವ್ಯಾಪ್ತಿಯ ಅಥವಾ ಪುನರ್ ವಿಂಗಡಣೆಯಾದ ಕ್ಷೇತ್ರಗಳ ಆಧಾರದಲ್ಲಿ ಚುನಾವಣೆ ನಡೆಸುವ ವಿಷಯವೇ ಪ್ರಧಾನವಾಗಿದೆ. ಈಗಿನ ಕ್ಷೇತ್ರಗಳು ವಿಂಗಡಣೆಯಾದಾಗ ಇದ್ದ ಆಗಿನ ಜನಸಂಖ್ಯೆಗಿಂತ 2001ರ ಜನಗಣತಿಯಂತೆ ಜನಸಂಖ್ಯೆಯು ಹೆಚ್ಚಳವಾಗಿದೆ. ಸಾಮಾಜಿಕವಾಗಿ ವಿವಿಧ ಜಾತಿ, ಜನಾಂಗಗಳ ಸ್ಥಾನಮಾನಗಳೂ ಬದಲಾಗಿದೆ. ಉದ್ಯೋಗದಂತಹ ಬದುಕಿನ ನೆಲೆ ಅರಸಿ ನಗರಗಳತ್ತ ವಲಸೆ ಹೊರಟವರ ಪ್ರಮಾಣವೂ ಗಮನಾರ್ಹವೇ. ಹೀಗಿರುವಾಗ ಕ್ಷೇತ್ರಗಳ ವಿಂಗಡಣೆ ಅನಿವಾರ್ಯ ಎಂಬುದರಲ್ಲಿ ಭಿನ್ನಾಭಿಪ್ರಾಯ ಇರಬೇಕಿಲ್ಲ. ಈ ಹಿನ್ನೆಲೆಯಲ್ಲಿಯೇ ಕಳೆದ ನಾಲ್ಕಾರು ವರ್ಷಗಳಿಂದ ಇಂತಹ ಚರ್ಚೆಗಳು ಹಾಗೂ ವಿಂಗಡಣೆಯ ಕಸರತ್ತುಗಳು ನಡೆದೇ ಇವೆ. ಇಂತಹ ವಿಂಗಡಣೆಯಲ್ಲಿ 'ಆಳುವ' ರಾಜಕೀಯ ಪಕ್ಷಗಳ ಹಿತಾಸಕ್ತಿ ಪರಿಗಣನೆಯ ಪ್ರಯತ್ನಗಳೂ ಇಲ್ಲದಿಲ್ಲ. ಆದಾಗ್ಯೂ ಈ ವಿಂಗಡಣೆಯ ಪ್ರಕ್ರಿಯೆ ಅಂತಿಮಗೊಂಡು ರಾಷ್ಟ್ರಪತಿಗಳ ಅಂಕಿತಕ್ಕೆ ಕಾದು ಕುಳಿತಿದೆ. ಇದರ ವಿರುದ್ಧ ಎರಡು ಮೊಕದ್ದಮೆಗಳು ಸುಪ್ರಿಂ ಕೋರ್ಟ್‌ನಲ್ಲಿ ದಾಖಲಾಗಿದ್ದು ಆ ತೀರ್ಪಿನ ಬಳಿಕವೇ ರಾಷ್ಟ್ರಪತಿಗಳು ಅಂಕಿತ ಹಾಕುವ ಅನಿವಾರ್ಯತೆಯೂ ಇದೆ. ಕ್ಷೇತ್ರಗಳ ವಿಂಗಡಣೆಯನ್ನು ಪರಿಗಣಿಸಿದಲ್ಲಿ ಬಹುಮುಖ್ಯವಾಗಿ ಈಗಿರುವ ಪರಿಶಿಷ್ಟ ಜಾತಿಗಳಿಗೆ (ಎಸ್.ಸಿ) ಮೀಸಲಾದ ಕ್ಷೇತ್ರಗಳು 32ರಿಂದ 35ಕ್ಕೂ, ಪರಿಶಿಷ್ಟ ಪಂಗಡ (ಎಸ್.ಟಿ) ಮೀಸಲಾದ ಕ್ಷೇತ್ರಗಳು 3ರಿಂದ 15ಕ್ಕೆ ಹೆಚ್ಚಳವಾಗಿರುವುದು ಸಾಮಾಜಿಕ ನ್ಯಾಯದ ಸಾಧನೆಯಲ್ಲಿ ಅತ್ಯಂತ ಮಹತ್ವದ ಸ್ವಾಗತಾರ್ಹ ಅಂಶವಾಗಿದೆ. ಹಾಗೆಯೇ ಬೆಂಗಳೂರಿನಂತಹ ನಗರ ವ್ಯಾಪ್ತಿಯಲ್ಲಿ 16ರಿಂದ 28ಕ್ಕೆ, ಇದೇ ರೀತಿ ಇತರ ನಗರ ವ್ಯಾಪ್ತಿಯ ಕ್ಷೇತ್ರಗಳ ಸಂಖ್ಯೆ ಹೆಚ್ಚಿರುವುದು ಗ್ರಾಮೀಣ ಬದುಕಿನ ಬಿಕ್ಕಟ್ಟು ಮತ್ತು ಉದ್ಯೋಗವನ್ನರಸಿ ನಗರಮುಖಿಯಾಗಿ ಜನತೆ ಹರಿದಿರುವ ವಾಸ್ತವಾಂಶಗಳನ್ನು ತೋರಿಸುತ್ತದೆ. ಹೀಗಾಗಿ ಕ್ಷೇತ್ರ ವಿಂಗಡಣೆಯ ಕಾರ್ಯವನ್ನು ವಿರೋಧಿಸುವುದು ಅಗತ್ಯವಿಲ್ಲ.


'ಈಗಿರುವ ಕ್ಷೇತ್ರಗಳ ವ್ಯಾಪ್ತಿಯಲ್ಲಿಯೇ ಚುನಾವಣೆಗಳು ಈ ಕೂಡಲೇ ನಡೆಯಬೇಕು (ಫೆಬ್ರವರಿಯೂ ಆದೀತು....)' ಎಂಬ ಬಿಜೆಪಿಯ ಒತ್ತಡದಲ್ಲಿ ತಾನು ಭಾವಿಸಿರುವ 'ಅನುಕಂಪದ' ಅಲೆಯನ್ನು ಮತವಾಗಿ ಪರಿವರ್ತಿಸಿ ಅಧಿಕಾರ ಹಿಡಿದುಕೊಳ್ಳ ಬಹುದು ಎಂಬ ದುರಾಸೆಯಿದೆ. ತಡಮಾಡಿ ಚುನಾವಣೆಗಳಾದರೆ ತನಗೆ ಲಾಭವಾಗಬಹುದು ಎಂಬ ಲೆಕ್ಕಾಚಾರವೂ ಕಾಂಗ್ರೆಸ್‌ಗೆ ಇಲ್ಲದಿಲ್ಲ.

ಇಲ್ಲಿ ಪ್ರಮುಖ ಪ್ರಶ್ನೆಯೆಂದರೆ ಯಾವ ಪಕ್ಷಕ್ಕೆ ಅನುಕೂಲವಾಗಲಿದೆ ಎಂಬ ಲೆಕ್ಕಾಚಾರದಲ್ಲಿ ಚುನಾವಣೆ ನಿಗದಿ ಮಾಡುವುದಾದರೆ ಅದು ಪ್ರಜಾಪ್ರಭುತ್ವ ವಿರೋಧಿಯಾದ ಅಂಶವಾಗಿದೆ. ಒಂದು ಅನಿವಾರ್ಯವಾದ, ಸಂದಿಗ್ಧ ಸನ್ನಿವೇಶವನ್ನು ಬಿಟ್ಟರೆ ರಾಷ್ಟ್ರಪತಿ ಆಡಳಿತದ ವಿಸ್ತರಣೆಗೆ ಸಮರ್ಥನೆಯೇ ಇಲ್ಲ. ಕೇಂದ್ರಾಡಳಿತದ ಆದರ್ಶಲ್ಲೂ ಅಧಿಕಾರಶಾಹಿ ಆಡಳಿತವು ಚುನಾಯಿತ ಜನಪ್ರಾತಿನಿಧ್ಯದ ಸರ್ಕಾರಕ್ಕೆ ಸಮನಾಗುವುದೂ ಇಲ್ಲ. ಆದ್ದರಿಂದ ಆದಷ್ಟು ಬೇಗ ಚುನಾಯಿತ ಸರ್ಕಾರ ಅಸ್ತಿತ್ವಕ್ಕೆ ಬರುವುದು ಅತ್ಯಗತ್ಯ.

ಆದರೆ ಇಲ್ಲಿ ಇಂತಹ ಚುನಾವಣೆ ನಡೆಸದಿರಲು ಅಥವಾ ಈಗಲೇ ನಡೆಸಲು ಕ್ಷೇತ್ರ ವಿಂಗಡಣೆಯ ಅಂಶವನ್ನು ನೆಪವಾಗಿ ಬಳಸುವುದು ಸರಿಯಲ್ಲ. ಒಂದೆಡೆ ರಾಷ್ಟ್ರಪತಿಗಳ ಆಡಳಿತದಲ್ಲಿ ಜನತೆಯ ಸಂಕಷ್ಟಗಳಿಗೆ ಪರಿಹಾರ ಅಥವಾ ಸ್ಪಂದನವೂ ಅಸಾಧ್ಯವಾಗುತ್ತಿರುವಾಗ, ಅಧಿಕಾರಶಾಹಿ ಆಡಳಿತ ಕೊನೆಗೊಳ್ಳಬೇಕು. ಆದರೆ ಅದೇ ಹೊತ್ತಿನಲ್ಲಿ ಸಾಮಾಜಿಕ ನ್ಯಾಯವನ್ನು ಸಮರ್ಥಿಸುವ ಹಾಗೂ ವಿಸ್ತರಿಸುವ ಕ್ಷೇತ್ರ ಪುನರ್ ವಿಂಗಡಣೆಯನ್ನು ವಿಳಂಬಿಸಲೂಬಾರದು. ಹಾಗೆ ಮಾಡುವುದೆಂದರೆ ಸಾಮಾಜಿಕವಾಗಿ ದಮನಿತ ಜನವಿಭಾಗಗಳಿಗೆ ರಾಜಕೀಯ ಪ್ರಾತಿನಿಧ್ಯದ ಹೆಚ್ಚಳವನ್ನು ನಿರಾಕರಿಸಿದಂತೆಯೂ ಆಗುತ್ತದೆ.

ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಆಳ್ವಿಕೆ ಕೊನೆಗೊಂಡು ಚುನಾಯಿತ ಸರ್ಕಾರ ಅಸ್ತಿತ್ವಕ್ಕೆ ಬರುವಂತೆ ಪುನರ್ ವಿಂಗಡಿತ ಕ್ಷೇತ್ರಗಳ ಆಧಾರದಲ್ಲೇ ಆದಷ್ಟು ಬೇಗ ಚುನಾವಣೆಗಳು ನಡೆದು ಜನಪ್ರಾತಿನಿಧ್ಯದ ಸರ್ಕಾರ ಅಸ್ತಿತ್ವಕ್ಕೆ ಬರಬೇಕು. ಈ ದಿಕ್ಕಿನಲ್ಲಿ ಅಗತ್ಯವಿರುವ ಕ್ರಮಗಳನ್ನು ರಾಷ್ಟ್ರಪತಿಗಳು ಹಾಗೂ ಕೇಂದ್ರ ಸರ್ಕಾರ ತುರ್ತಾಗಿ ಕೈಗೊಳ್ಳಬೇಕು

ತಲೆಗೇರಿರುವ ಫ್ಯಾಸಿಸ್ಟ್ ವೈರಸ್



ಹಿಂದುಳಿದ ವರ್ಗಗಳ ಸ್ಥಿತಿ ಅಧ್ಯಯನಕ್ಕೆ ತೆರಳಿದ್ದ ಆಯೋಗದ ಅಧ್ಯಕ್ಷರಮೇಲೆ ಚೆಡ್ಡಿ ಪಡೆ ನಡೆಸಿದ ದೌರ್ಜನ್ಯ ಅದರ ಹತಾಶೆಯನ್ನು,ಫ್ಯಾಸಿಸ್ಟ್ ಪೀಡಿತ ಮನಸ್ಸನ್ನು ತೋರಿಸುತ್ತದೆ.

'ತಾವು ತಂಗಿದ್ದ ವಸತಿಗೃಹಕ್ಕೆ ಬಂದಿದ್ದ ಗುಂಪೊಂದು ತಮ್ಮ ವಿರುದ್ಧ ಘೋಷಣೆ ಕೂಗಿ ಒಬ್ಬಂಟಿಗ ಹಾಗೂ ಅಸಹಾಯಕನಾಗಿದ್ದ ತಮ್ಮ ಮೇಲೆ ಬಾಟಲಿಯಲ್ಲಿ ತುಂಬಿಕೊಂಡು ಬಂದಿದ್ದ ನೀರನ್ನು ಕುಡಿಸುವ ದೌರ್ಜನ್ಯವನ್ನು ತೋರಿದ್ದಾರೆ. ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದ್ದಾರೆ. ಅಷ್ಟೇ ಅಲ್ಲ, ಅವರಲ್ಲಿ ಒಬ್ಬ ತಮ್ಮ ಹಣೆಗೆ ಕುಂಕುಮ ಇಟ್ಟ' ಹೀಗೆಂದು ಹೇಳಿದವರು ಜನ ಸಾಮಾನ್ಯರಲ್ಲಿ ಒಬ್ಬರಲ್ಲ. ಇದು ಹೇಗೋ ನಡೆದ ಒಂದು ಸಹಜ ಘಟನೆಯೂ ಅಲ್ಲ...

ಹೀಗೆ ಹೇಳಿದವರು ಶಾಸನಬದ್ಧ, ಸ್ಥಾನಮಾನ, ಕ್ಯಾಬಿನೆಟ್ ದರ್ಜೆ ಹೊಂದಿರುವ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರೂ, ಖ್ಯಾತ ವಕೀಲರೂ ಆಗಿರುವ ಡಾ. ಸಿ.ಎಸ್.ದ್ವಾರಕನಾಥ್‌ರವರು! ಘಟನೆ ನಡೆದದ್ದು ಮಡಿಕೇರಿಯಲ್ಲಿ. ಹೇಳಿಕೆ ನೀಡಿದ್ದು ಬೆಂಗಳೂರಿನಲ್ಲಿ. ಇತ್ತೀಚೆಗೆ ಕೊಡಗು ಜಿಲ್ಲೆಗೆ ಇವರಿದ್ದ ನಿಯೋಗ ಭೇಟಿ ನೀಡಿ ವಾಪಸಾಗಿದೆ. ಕರ್ನಾಟಕವನ್ನು ಏನೇನನ್ನೋ ಮಾಡುವ 'ಮಾದರಿ'ಗಳನ್ನು ಇಟ್ಟಿಕೊಂಡಿರುವ ನಕಲಿ ದೇಶಭಕ್ತ ಚೆಡ್ಡಿ ಪಡೆಯು ದ್ವಾರಕನಾಥರು ತಲಕಾವೇರಿಯಲ್ಲಿ ತೀರ್ಥ ಕುಡಿಯಲಿಲ್ಲ ಎಂದು ಕ್ಯಾತೆ ತೆಗೆದು ನೀರನ್ನು ಕುಡಿಸುವ, ಹಣೆಗೆ ಬಲವಂತವಾಗಿ ಕುಂಕುಮ ಬಳಿಯುವ 'ಭಯೋತ್ಪಾದನಾ' ಕೃತ್ಯ ನಡೆಸಿದ್ದಾರೆ. ಭಜರಂಗದಳ ಹಾಗೂ ಬಿಜೆಪಿಗಳ ಪಾನಮತ್ತ ಪುಂಡರ ಜೊತೆಗೆ ಮಾಜಿ ಶಾಸಕ ಬೋಪಯ್ಯನಂತಹ 'ಮಹಾಗಣ್ಯರು' ನೇತೃತ್ವ ವಹಿಸಿದ್ದಾರೆ. ಕೊಡಗು ಹಾಗೂ ಕರ್ನಾಟಕಕ್ಕೆ ಇವರ ಸೇವೆ ಏನೇಂಬುದನ್ನು ಕಡಿಸಿಕೊಂಡ ಕೊಡಗಿನ ಮರಗಳೂ ಮಾತನಾಡುತ್ತಿವೆ. ಜನಸಾಮಾನ್ಯರ ಕಷ್ಟ ಸುಖಗಳ ಬಗ್ಗೆ ಎಂದೂ ಧ್ವನಿಯೆತ್ತದ ಈ ಚೆಡ್ಡಿ ಚತುರರು ದ್ವಾರಕನಾಥ್ ತೀರ್ಥ ಕುಡಿಯದಿರುವುದರಿಂದ ಹಿಂದೂ ಧರ್ಮಕ್ಕೆ ಅವಮಾನವಾಗಿದೆ ಎಂದು ಬೊಬ್ಬೆ ಹೊಡೆದದ್ದು ನೋಡಿದರೆ ಇವರ ನೆತ್ತಿಗೆ ಕೋಮುವಾದಿ ಫಾಶಿಸ್ಟ್ ವೈರಸ್‌ಗಳು ಅದೆಷ್ಟು ಹಿಡಿದುಕೊಂಡಿವೆ ಎಂಬುದು ಅರ್ಥವಾಗುತ್ತದೆ.

'ಅಲ್ಲೊಂದು ದೇವಾಲಯವಿದೆ, ತೀರ್ಥ ಪ್ರಸಾದ ಹಂಚುತ್ತಾರೆ ಎಂದೇ ಗೊತ್ತಿರಲಿಲ್ಲ' ಎಂದಿರುವ ದ್ವಾರಕನಾಥ್‌ರ ಸ್ಪಷ್ಟನೆಯಿಂದ ಗೊತ್ತಾಗುವುದೇನೆಂದರೆ ಅವರು ಅಲ್ಲಿಗೆ ಹೋಗದಿರುವಾಗ ತೀರ್ಥ ನಿರಾಕರಿಸಿದ್ದಾದರೂ ಹೇಗೆ ಸಾಧ್ಯ? ಹೋಗಲಿ ಭಾಗಮಂಡಲಕ್ಕೆ ಹೋಗಿ ಬರುವವರೆಲ್ಲಾ ತೀರ್ಥ ಕುಡಿದು ಬರಲೇಬೇಕೆಂಬ ನಿಯಮವೇನಾದರೂ ಇದೆಯೇ? ದೇವಸ್ಥಾನಕ್ಕೆ ಅಥವಾ ನೀರು ಇರುವ ಜಾಗಕ್ಕೆ ಹೋಗಿರುವಾಗ ಏನು ಮಾಡಬೇಕು ಬಿಡಬೇಕು, ಎಂಬುದು ಅವರ ಆಯ್ಕೆಗೆ ಬಿಟ್ಟ ವಿಚಾರ. ಚೆಡ್ಡಿ ವೀರರು ನಂಬಿಕೆ ಇದ್ದರೆ ಇಟ್ಟುಕೊಳ್ಳಲು ಸ್ವತಂತ್ರರು. ಇನ್ನೊಬ್ಬರ ಮೇಲೆ ಇವರ ನಂಬಿಕೆ-ಆಚರಣೆ ಹೇರಲು ಇವರ್ಯಾರು? ಇಂತಹ ಗೂಂಡಾಗಿರಿ ಮೂಲಕ ತೀರ್ಥ ಕುಡಿಸಲು, ಕುಂಕುಮ ಹಚ್ಚಲು ಹೋಗಿರುವುದು ಭಕ್ತಿ ಅಥವಾ ಧಾರ್ಮಿಕ ಆಚರಣೆಯೆಂದು ಹೇಳಿಕೊಂರೆ ನಂಬುವವರಾರೂ ಇಲ್ಲ. ಪ್ರಗತಿಪರ ಚಿಂತನೆಯ, ಹಿಂದುಳಿದ ವರ್ಗಗಳ ಹಿತ ರಕ್ಷಣೆಯ ವಿರುದ್ಧ ಸಂಘ ಪರಿವಾರ ತೋರಿಸಿದ ಅಸಹನೆಯೂ ಇದಾಗಿದೆ.

ಪುಟ 4ಕ್ಕೆ

ರಾಜ್ಯಪಾಲರ ವರ್ಗಾವಣೆ ನೀತಿ

ಚುನಾಯಿತ ಸರ್ಕಾರದ ಸಂಪುಟವನ್ನು ನೇಮಿಸಿದ ಮುಖ್ಯ ಕಾರ್ಯದರ್ಶಿಯನ್ನು ರಾಜ್ಯಪಾಲರು ಬದಲಾಯಿಸುವುದು ಒಳ್ಳೆ ಪರಿಪಾಠವಲ್ಲ..

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ಬಿ.ಮಹಿಷಿಯವರನ್ನು ರಾಜ್ಯಪಾಲರು ಕರ್ನಾಟಕ ವಿದ್ಯುತ್ ನಿಗಮಕ್ಕೆ ವರ್ಗಾಯಿಸಿ, ಆ ಸ್ಥಾನದಲ್ಲಿ ಇನ್ನೊಬ್ಬ ಅಧಿಕಾರಿ ಸುಧಾಕರರಾವ್ ರವರನ್ನು ನೇಮಿಸಿದ್ದಾರೆ. ಇಂತಹ ದಿಢೀರ್ ವರ್ಗಾವಣೆಗೆ ಕಾರಣಗಳನ್ನು ಬಹಿರಂಗಪಡಿಸಿಲ್ಲ. ರಾಜ್ಯಪಾಲರ ಈ ಕ್ರಮ ಅಧಿಕಾರಿ ವಲಯದಲ್ಲಿ ಚರ್ಚೆಯನ್ನೂ, ಕೆಲವು ರಾಜಕೀಯ ಪಕ್ಷಗಳಲ್ಲಿ ಮುಜುಗರವನ್ನು ಸಾರ್ವಜನಿಕರಲ್ಲಿ ಪ್ರಶ್ನೆಯನ್ನೂ, ಉಂಟುಮಾಡಿದೆ.

ಇನ್ನೂ ಅವಧಿಯಿರುವಾಗಲೇ ಮುಖ್ಯ ಕಾರ್ಯದರ್ಶಿಯನ್ನು ಹೀಗೆ ಎತ್ತಂಗಡಿ ಮಾಡಬಹುದೇ? ಇಂತಹ ವರ್ಗಾವಣೆ ಮಾಡಬಾರದೆಂದೇನೂ ಕಾನೂನುಗಳಿಲ್ಲ ವಾದರೂ ಸಾಂಪ್ರದಾಯಿಕವಾಗಿ ಅನುಸರಿಸಿದ್ದ ನಿಯಮ ಉಲ್ಲಂಘಿಸ ಬಹುದೇ? ಈಗ ನೇಮಿತವಾದ ಸುಧಾಕರ್‌ರಾವ್ ರವರಿಗಿಂತ ಇನ್ನೂ ಕೆಲವು ಜನ ಹಿರಿಯ ಐ.ಎ.ಎಸ್ ಅಧಿಕಾರಿಗಳಿದ್ದರು. ಈ.ಬಡ್ತಿ ಸಾಧುವೇ ಎಂದೆಲ್ಲಾ ಪ್ರಶ್ನೆ ಮಾಡಲಾಗಿದೆ. ಈ ಬಗ್ಗೆ ಆಡಳಿತ ಮಂಡಳಿಯ ಮುಂದೆ ವ್ಯಾಜ್ಯ ಎತ್ತಲಾಗಿದೆ.

ರಾಜ್ಯಪಾಲರು (ರಾಷ್ಟ್ರಪತಿಗಳು) ಯಾವ ಅಧಿಕಾರಿಯನ್ನು ಬೇಕಾದರೂ ವರ್ಗಾಯಿಸುವ ಅಪರಿಮಿತ ಅಧಿಕಾರ ಸಂವಿಧಾನದಲ್ಲಿದೆ. ಹಾಗೇ ಮಾಡುವ ಅವಕಾಶಗಳನ್ನು ಆಳುವ ವರ್ಗಗಳು ಸೃಷ್ಟಿಸಿಕೊಂಡಿವೆ. ಹೀಗಿರುವಾಗಲೂ ಮು.ಕಾ ಯಂತವರನ್ನು ವರ್ಗಾವಣೆ ಮಾಡಬೇಕೆಂದಲ್ಲಿ ಅತ್ಯಂತ ಗಂಭೀರವಾದ ಕಾರಣಗಳು ಇರಬೇಕಾಗುತ್ತದೆ. ಹಾಗೆ ನೋಡಿದರೆ ಮಹಿಷಿ ಅದಕ್ಷತೆಯ ಹಿಂದೆಲ್ಲಾ ಕೇಂದ್ರ ಸರ್ಕಾರದಲ್ಲಿ ಹಾಗೂ ಮೂಲಸೌಕರ್ಯ ಯೋಜನೆಯಲ್ಲಿ, ಒರಿಸ್ಸಾದಲ್ಲಿ ಹಾಗೂ ರಾಜ್ಯ ಸರ್ಕಾರದ ಗೃಹ ಮಂಡಳಿಯಂತಹ ವಿವಿಧ ಹುದ್ದೆಗಳಲ್ಲಿ ಇರುವಾಗ ನಡೆಸಿರುವ ಭ್ರಷ್ಟಾಚಾರದ ಆರೋಪಗಳನ್ನು ಎದುರಿಸುತ್ತಿದ್ದಾರೆ. ಈಗಿನ ವರ್ಗಾವಣೆಗೆ ಇದು ಅಥವಾ ಇನ್ನಾವುದೇ ಕಾರಣಗಳಿದ್ದರೂ ಸಾರ್ವಜನಿಕರೆದುರು ಬಂದಿರುವ ಪ್ರಶ್ನೆಗೆ ರಾಜ್ಯಪಾಲರು ಸ್ಪಷ್ಟನೆ ನೀಡುವ ಅಗತ್ಯವೂ ಇದೆ.

ಮುಖ್ಯಕಾರ್ಯದರ್ಶಿಯಾಗಿದ್ದ ಮಹಿಷಿಯನ್ನು ದಿಢೀರನೇ ವರ್ಗಾಯಿಸಿದ ಕ್ರಮ ಪ್ರಶ್ನಾರ್ಹವಾಗಿದೆ. ಹಿಂದೆ ಚುನಾಯಿತ ಸರ್ಕಾರದ ಸಚಿವ ಸಂಪುಟವು ನೇಮಕ ಮಾಡಿದ್ದ ಮುಖ್ಯ ಕಾರ್ಯದರ್ಶಿಯನ್ನು ವರ್ಗಾವಣೆ ಮಾಡಬೇಕಿರಲಿಲ್ಲ. ಅಂತಹ ವರ್ಗಾವಣೆಯನ್ನು ಚುನಾಯಿತ ಸರ್ಕಾರವೇ ಮಾಡಬೇಕು ಇದು ಮಾತ್ರವಲ್ಲ. ಆಡಳಿತದ ಬಹಳಷ್ಟು ಪ್ರಮುಖ ಅಧಿಕಾರಿಗಳನ್ನು ಅತೀ ದೊಡ್ಡ ಪ್ರಮಾಣದಲ್ಲಿ ವರ್ಗಾವಣೆ ಮಾಡಿರುವುದು ಮಾಡುತ್ತಿರುವುದು ಹೊಣೆಗಾರಿಕೆಯ ಸೀಮಾರೇಖೆಯನ್ನು ಉಲ್ಲಂಘಿಸಿದಂತೆ. ಆದ್ದರಿಂದ ಇಂತಹ ಕ್ರಮಗಳನ್ನು ಇನ್ನಾದರೂ ರಾಜ್ಯಪಾಲರು ಕೈ ಬಿಡಬೇಕು.

ಆಂಧ್ರದ ನಕ್ಸಲ್ ಚಳುವಳಿಯಲ್ಲಿ ಒಂದು ನೆಗೆತ !!!

ಆಂಧ್ರಪ್ರದೇಶದ ನಕ್ಸಲ್ ಚಳುವಳಿಯಲ್ಲಿ ಒಂದು ಗುಣಾತ್ಮಕ ನೆಗೆತ ಕಂಡು ಬರುತ್ತಿದೆ. ಆಶ್ಚರ್ಯವೇ? ಆಶ್ಚರ್ಯ ಪಡುವುದೇನಿದೆ. ಈ ಬೆಳವಣಿಗೆಯನ್ನು ನೀವೇ ವಿಶ್ಲೇಷಿಸಿ ನೋಡಿ.

ಪತ್ರಿಕೆಯಲ್ಲಿ ನೀವು ಇತ್ತೀಚೆಗೆ ಆಂಧ್ರದ ನಕ್ಸಲ್ ಚಳುವಳಿಯ 'ಬೆಳವಣಿಗೆ' ಕುರಿತ ಹಲವು ವರದಿಗಳನ್ನು ಓದುತ್ತಿದ್ದೀರಿ. ಸಾಮಾನ್ಯ ದಳದ ಸದಸ್ಯರಿಂದ ಹಿಡಿದು, ತಾಲ್ಲೂಕು, ಜಿಲ್ಲೆ, ರಾಜ್ಯ ಮುಖಂಡರವರೆಗೆ ಹಲವಾರು ನಕ್ಸಲ್ ನಾಯಕರು ಸರ್ಕಾರಕ್ಕೆ ಶರಣಾಗಿದ್ದು, ಹೀಗೆ ಶರಣಾಗುವವರ ಸಂಖ್ಯೆಯಲ್ಲಿ ದೊಡ್ಡ 'ಬೆಳವಣಿಗೆ' ಯಾಗಿರುವುದು, ಹೀಗೆ ಸಾಗಿದೆ ಅಲ್ಲಿನ ನಕ್ಸಲ್ ಚಳುವಳಿಯ ಪ್ರಗತಿ.

ಹೀಗೆ ಸಾಗುತ್ತಿದ್ದ ಪ್ರಗತಿಯಲ್ಲಿ ಈಗ ಒಂದು ದೊಡ್ಡ ನೆಗೆತ ಕಂಡು ಬಂದಿದೆ. ಇದೀಗ ಶರಣಾಗುವ ಸರದಿ ಮಾವೋವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ನಾಯಕರದ್ದು. ವಿಷಯ ತಾಲ್ಲೂಕು, ಜಿಲ್ಲಾ, ರಾಜ್ಯಮಟ್ಟದಿಂದ ಕೇಂದ್ರ ಮಟ್ಟಕ್ಕೆ ಬಂದಿದೆ ಎಂದ ಮೇಲೆ ಇದು ಗುಣಾತ್ಮಕ ನೆಗೆತವೇ ತಾನೆ?!

ಅವರ ಹೆಸರು ಲಂಕ ಪಾಪಿರೆಡ್ಡಿ ಅಲಿಯಾಸ್ ರಂಗಣ್ಣ, ವಯಸ್ಸು 46. ಮಾವೋವಾದಿ ಪಕ್ಷದ ಕೇಂದ್ರ ಸಮಿತಿ ಸದಸ್ಯರು. ಮೊನ್ನೆಯವರೆಗೂ ಆಂಧ್ರ, ಮಹಾರಾಷ್ಟ್ರ, ಚತ್ತೀಸ್‌ಗಡ, ಹರ್‍ಯಾಣ ರಾಜ್ಯಗಳ ಜವಾಬ್ದಾರಿ ಹೊತ್ತಿದ್ದವರು. ಪ್ರಮುಖವಾಗಿ 'ದಂಡಕಾರಣ್ಯ'ದಲ್ಲಿ ಶಸ್ತ್ರಾಸ್ತ್ರ ಕ್ರಾಂತಿಯ ನಾಯಕತ್ವ ವಹಿಸಿದ್ದವರು. 1980ರಲ್ಲಿ ಭೂಗತರಾಗಿದ್ದವರು. ಮೊನ್ನೆ ಆಂಧ್ರದ ಗೃಹ ಮಂತ್ರಿಗಳ ಮುಂದೆ ಶರಣಾಗಿದ್ದಾರೆ. ಅವರಿಗೆ ಅನಾರೋಗ್ಯವಂತೆ. ತಾವು ಸಮಾಜದ 'ಮುಖ್ಯ ಪ್ರವಾಹ' ಕ್ಕೆ ಬರಲು ಸಹಕಾರ ನೀಡಿದ ಸರ್ಕಾರಕ್ಕೆ ಅವರು ಕೃತಜ್ಞತೆ ಅರ್ಪಿಸಿದ್ದಾರೆ ಪಾಪಿರೆಡ್ಡಿ. ಇರಲಿ. ಇದು ನಕ್ಸಲ್ ಚಳುವಳಿಯ ಗುಣಾತ್ಮಕ ನೆಗೆತ ಅಂತೀರೋ ಅಥವಾ ಅಲ್ಲ ಅಂತೀರೋ?


ತಲೆಗೇರಿರುವ ......

ಪುಟ 3 ರಿಂದ

ಇಂತಹ ಗೂಂಡಾಗಿರಿಯನ್ನು ಮಟ್ಟ ಹಾಕಬೇಕಾದುದು ಅತೀ ಅವಶ್ಯಕ. ಈ ಹಿನ್ನೆಲೆಯಲ್ಲಿ ಈ ಕೃತ್ಯಗಳಲ್ಲಿ ಭಾಗವಹಿಸಿದ ಬೋಪಯ್ಯನವರನ್ನು ಒಳಗೊಂಡು ಅವರ ಗೂಂಡಾಪಡೆಯ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕು.

ಅಧಿಕಾರ ಹಿಡಿಯುವ ಆತುರದಲ್ಲಿರುವ ಬಿಜೆಪಿ, ಅದಕ್ಕೆ ಭೂಮಿಕೆ ಸಿದ್ಧಪಡಿಸುತ್ತಿರುವ ಆರ್.ಎಸ್.ಎಸ್. ಎಷ್ಟೊಂದು ಹತಾಶೆಯಾಗಿದೆ ಹಾಗೂ ಇಂತಹ ಗೂಂಡಾಗಿರಿ, ಅಸಹನೆಯ ಮೂಲಕವೇ ಧರ್ಮ ರಕ್ಷಿಸುವ ನಾಟಕವಾಡಲು ತೊಡಗಿದೆ ಎಂಬುದನ್ನು ಈ ಘಟನೆ ತೋರಿಸುತ್ತದೆ. ಇಂತಹ ಖಾಲಿ ಬುರುಡೆ ಬಿಟ್ಟುಕೊಂಡೇ ಕಾಲ ತಳ್ಳಿದ ಕೊಡಗಿನ ಬಿಜೆಪಿ ಶಾಸಕರು ಜನ ಬೆಂಬಲ ಕಳೆದುಕೊಂಡಿರುವುದರ ಸೂಚಕವೂ ಇದಾಗಿದೆ. ಇಂತಹ ಕೃತ್ಯಗಳನ್ನು ಮಾನಸಿಕ ಆರೋಗ್ಯ ಸರಿ ಇರುವ ಎಲ್ಲರೂ ಖಂಡಿಸಬೇಕು. ಹಾಗೆಯೇ ಇಂತಹ ಸನ್ನಿವೇಶ ಎದುರಾದಾಗ ತಮ್ಮ ನಿಲುವು ಅಲ್ಲೇ ಪ್ರತಿಪಾದಿಸುವ ದೃಢತೆಯನ್ನು ದ್ವಾರಕನಾಥರು ತೋರುವಂತಾಗಬೇಕು. ಕೋಮುವಾದಿ ಕ್ರಿಮಿನಲ್‌ಗಳಿಗೆ ಸಜ್ಜನಿಕೆ ಎಂಬುದು ಇಲ್ಲವೇ ಇಲ್ಲ ಎನ್ನುವುದೂ ಅಷ್ಟೇ ಸತ್ಯ.





ಕೃಪೆ: 'ನಗೆ ಮುಗುಳು' ಮಾಸಿಕದ ವಿಶೇಷಾಂಕ

ಬಹುತೇಕ ಯಾವ ಪತ್ರಿಕೆ, ಟೀವಿ ನೋಡಿದರೂ ಕಂದಾಚಾರ, ಅವೈಜ್ಞಾನಿಕವಾದ ವಾಸ್ತುವಿನ ಪರವಾಗಿ ಪುಂಗಿ ಊದುವುದನ್ನೇ ಕಾಣುತ್ತಿದ್ದೇವೆ. ಮನೆ, ಕಛೇರಿಗಳಿಗೆ ವಕ್ಕರಿಸಿದ್ದ ವಾಸ್ತುರೋಗ ಈಗ ಶಾಲಾ - ಕಾಲೇಜುಗಳನ್ನು ಆವರಿಸಿಕೊಳ್ಳಲು ಯತ್ನಿಸುತ್ತಿರುವುದು ಕಾಣುತ್ತಿದೆ. ಈ ನಡುವೆ 'ನಗೆಮುಗುಳು' ಹಾಸ್ಯ ಮಾಸಿಕದ ವಿಶೇಷಾಂಕದಲ್ಲಿ ಬಂದ ವ್ಯಂಗ್ಯಚಿತ್ರಗಳು ಭಿನ್ನವಾಗಿವೆ. ಚಂದವಾಗಿವೆ.

ಅಸಯ್ಯ ಬಂದ್ ಬುಟ್ಟದೆ...

ಕ್ಯಾತೆ ಶ್ರೀ

"ಬಾಳ ಸೊಳ್ಳೆ ಕಣ್ಲ ಸಣ್ಣಪ್ಪ ಇಟೊಂದು ಕಚ್ಚಿ ಕಚ್ಚಿ ರಕ್ತ ಹೀರ್ತವೆ."

"ಊ ಕನ್ ದೊಡ್ಡಪ್ಪ. ಕಿವಿತನಕ ಬಂದು ಸಂಗೀತ ಆಡ್ತವೆ"

"ಮುಂಚೆ ನಮ್ಮೂರ್‍ನಾಗೆ ಈ ಈಸೊಂದು ಇರ್ಲಿಲ್ಲ ನೋಡು. ಬರ್ತಾ ಬರ್ತಾ ಜಾಸ್ತಿ ಆಗ್ತವೆ"

"ಊ ಕನ್ ದೊಡ್ಡಪ್ಪ ಗಲೀಜು ಜಾಸ್ತಿ ಆದ್ರೆ ಅವೂ ಜಾಸ್ತಿ ಆಯ್ತವಂತೆ"

"ಅಂಗಂದ್ರೇನು ದೊಡ್ಡಪ್ಪ?"

"ದೇಸದಲ್ಲಿ ಗಲೀಜುಗಳು ಜಾಸ್ತಿಯಾಗಿ, ಬಯೋತ್ಪಾದಕರೂ ಸೊಳ್ಳೆಗಳ ತರ ಹೆಚ್‌ಕೊತಾ ಅವ್ರೆ. ಅಲ್ಲಿ ಬಾಂಬು ಆಕುದ್ರಂತೆ, ಇಲ್ಲಿ ಬಾಂಬು ಆಕುದಂತೆ ಅಂತ ಕೇಳ್ತಾ ಇದ್ವಿ. ಈಗ ನೋಡುದ್ರೆ ಇಲ್ಲೆ ನಮ್ ಸುತ್ ಮುತ್ಲೇ ಹರುಡ್‌ಕೊತಾವ್ರೆ"

"ಬಯ ಆಯ್ತದಲ್ಲ ದೊಡ್ಡಪ್ಪ, ನಮ್ ತಲೆ ಮೇಲೆ ಯಾವಾಗ ಬಾಂಬು ಬೀಳ್ತವೋ ಅಂತ"

"ಈ ಮಂತ್ರಿಮಂಡಲದಲ್ಲಿ ಎಲ್ಲಾ ಜಾತಿಗಳಿಗೂ ಅವಕಾಸ ಕೊಡಬೇಕು ಅಂತಾರಲ್ಲ. ಅಂಗೇ ಈ ಬಯೋತ್ಪಾದಕರು ಎಲ್ಲಾ ಜಾತಿ ಮಠ, ದೇವಸ್ಥಾನ ಜಾತ್ರೆಗಳ ಮೇಲೆ ಬಾಂಬು ಆಕಕ್ಕೆ ಪಿಲಾನ್ ಆಕವ್ರಂತೆ ನೋಡು"

"ಥೂ... ಈ ಬಯೋತ್ಪಾದಕರೆಲ್ಲ ಆಳಾಗೋಗ. ನಮ್ ಪಾಡಿಗೆ ನಾವು ನಮ್ಮೆ ಇದ್ದಿದ್ದು ತಿನ್ಕಂಡು ನೆಮ್ದಿಯಾಗಿರೋಕು ಬಿಡಾಕಿಲ್ವಲ್ಲ. ಥೂ......,"

"ನೆಮ್ದಿಯಾಗಿರೋದೆಲ್ಲಿ ಬಂತು? ಸತ್ತೋದೋರ್ಗು ನೋಟಿಸ್ ಕೊಟ್ಟವರಂತೆ ಐಸಿಐಸಿ ಬಾಂಕೋರು. ಯಾರ್ನೂ ಬುಡಾಕಿಲ್ಲ."

"ಊ ಕನ್ಲ ಅಸ್ಟು ನಿಯತ್ತಾಗಿ ಸೊರ್ಗಕ್ಕೋ ನರಕಕ್ಕೋ ಹೋಗಿ ಅಲ್ಲಿಂದ್ಲೂ ಸಾಲ ವಸೂಲಿ ಮ್ಡಾಡೋ ವತ್ಗೆ ಆ ಬ್ಯಾಂಕ್ ಮುಕ್ಲಸ್ಥಂಗೆ ಪ್ರಸಸ್ತಿ ಕೊಟ್ಟದೆ ನಮ್ಮ ಗನ ಸರ್ಕಾರ"

"'ನ' ಮ' ಇಸ್ಸನಾತ ಅದೇನೋ ಪುಸ್ತ್ಕ ಬರದವನಂತಲ್ಲ. ಅದ್ಕೂ ಒಂದು ಯಾವ್‌ದಾರ ಪ್ರಸಸ್ತಿ ಕೊಟ್ಟಿದ್ರಾಯ್ತಿತ್ತು"

"ಯಾಕ್ಲ ಅಂಗಂತಿ?

"ಊ ಮತೆ, 'ಕಿಸ್ನ, ಕಿಸ್ನ ಅಂತ ಕಿಸ್ನಂದೇ ಸುದ್ದಿಯಾಗಿತ್ತು. ಈಗ್ಯಾಕೋ ಅಂಗೆ ತಣ್ಣಗಾಗಾಬುಡ್ತಲ್ಲ. ಎಂತ ಪರಿಣಾಮ ಬೀರ್‍ತೈತೆ ನೋಡು ಆ ಪುಸ್ತ್ಕ"

"ಮೇಲೆ ನೋಡಕ್ಕೆ ತಣ್ಣಗಾದ್ರು ಒಳೊಳಗೇ ಕುದಿತಿರ್ತವೆ ಕನ್ಲಾ. ಯಾವಾಗ ಏನಾಯ್ತದೋ...?

"ಥೂ... ಏನಂದ್ರೂ ಈ ಕಾಂಗ್ರೆಸ್‌ನವ್ರೊಕ್ಕೆ ಬುದ್ದಿ ಬರಾಕಿಲ್ಲ ಬುಡು"

"ಅದೇನ್ ಹೊಸ್ತಾಗಿ ಏಳ್ತಿದೀಯಲ್ಲ?"

"ವೊಂದ್ ಸರ್ತಿ ಇದಾನ ಸಬೆ ಅವಧಿ ಇನ್ನೂ ಇರುವಾಗ್ಲೆ ಆರೇಳು ತಿಂಗಳು ಮೊದ್ಲೇ ಎಲೆಕ್ಸನ್ ಮಾಡಿ ಮಣ್ ಮುಕ್ಕುದ್ವು. ಈ ಸರಿ ಮುಂದಕ್ಕೆ ಆಕಕ್ಕೆ ನೋಡ್ತಾವ್ರಂತೆ."

"ಎಲೆಕ್ಸನ್ ಮುಂದ್ಯಾಕ್ರು ಓಗ್ಲಿ, ಹಿಂದ್ಯಾಕ್ರು ಓಗ್ಲಿ ಮಾಡ ಕೆಲ್ಸ ನೆಟ್ಟಗೆ ಮಾಡಿದ್ರೆ ಅಲ್ವೆನ್ಲಾ ಜನ ಓಟಾಕದು?"

"ಏನ್ ಓಟಾಕದೋ ಏನೋ? ಮೂವರೊಳಗೆ ಯಾವ್ದೂ ಸುಕ ಇಲ್ಲ. ಇವು ಪರಸ್ಪರ ನಾಯಿ ಹಂದಿಗಳಂತೆ ಕಿತ್ತಾಡದೂ, ಪಕ್ಷದ ಒಳಗೊಳಗೇ ಬಡ್‌ದಾಡದೂ ನೋಡಿ ನೋಡಿ ಅಸಯ್ಯ ಬಂದ್ ಬುಟದೆ."



ರೈತ ಬೆಳೆದ ಕಬ್ಬನ್ನು ಅರೆಯುವ ವ್ಯವಸ್ಥೆ ಇಲ್ಲ, ಬೆಂಬಲ ಬೆಲೆ ಇಲ್ಲ, ನಷ್ಟ ಪರಿಹಾರವಿಲ್ಲ, ಇಲ್ಲಗಳ ಕಥೆಯೇ ಇಲ್ಲೆಲ್ಲಾ.

ಕಂಗಾಲಾದ ಕಬ್ಬು ಬೆಳೆಗಾರ ಜೀವ ಹಿಂಡುವ ಸರ್ಕಾರ



ಮಾರುತಿ ಮಾನ್ಪಡೆ

ಕರ್ನಾಟಕದಲ್ಲಿ ಕಬ್ಬು ಬೆಳೆಗಾರರ ಬಾಳು ಕಹಿಯಾಗಿದೆ. ಕಬ್ಬಿಗೆ ಬೆಂಬಲ ಬೆಲೆ ಇಲ್ಲ ದುಡಿದ ಶ್ರಮಕ್ಕೆ ಪ್ರತಿಫಲ ಇಲ್ಲವಾಗಿದೆ. ಫ್ಯಾಕ್ಟರಿಯಲ್ಲಿ ಕಬ್ಬು ಖರೀದಿಸಿ ಕಟಾವು ಮಾಡುತ್ತಿಲ್ಲ. ಬೆಲ್ಲಕ್ಕೆ ಬೆಲೆ ಇಲ್ಲ. ಹೀಗಾಗಿ ಅಲೆಮನೆ ಮಾಡಲು ಸಾಧ್ಯವಾಗುತ್ತಿಲ್ಲ. ಕಳೆದ ವರ್ಷದ ಕಟಾವು ಮಾಡದೇ ಇರುವ ಕಬ್ಬಿಗೆ ಪರಿಹಾರ ಧನ ಕೊಡಲಿಲ್ಲ. 20 ತಿಂಗಳಾದರೂ ಕಬ್ಬು ಕಟಾವು ಮಾಡುತ್ತಿಲ್ಲ. ಕಾರ್ಖಾನೆ ಉತ್ಪಾದಿಸುವ ಸಕ್ಕರೆ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ. ಹೊಸ ಕಾರ್ಖಾನೆಗಳು ಸ್ಥಾಪಿಸಲು ಸರ್ಕಾರ ಮುಂದಾಗುತ್ತಿಲ್ಲ. ಇದು ಕಬ್ಬು ಬೆಳೆಗಾರರ, ಸಕ್ಕರೆ ಉದ್ಯಮದ ಹಾಗೂ ಕರ್ನಾಟಕ ರಾಜ್ಯದ ಕಬ್ಬು ಬೆಳೆಗಾರನ ಮತ್ತು ಸಕ್ಕರೆ ಉದ್ಯಮದ ಪರಿಸ್ಥಿತಿಯಾಗಿದೆ. ಯಾಕಿಂತಹ ಪರಿಸ್ಥಿತಿ? ಸರ್ಕಾರದಿಂದ ಬಗೆಹರಿಸಲಾರದಂತಹ ಪರಿಸ್ಥಿತಿಯೇ? ಇದು ರೈತರಿಗೆ ಸವಾಲಾಗಿದೆ.

ಕಳೆದ ವರ್ಷ 85 ಜನ ಕಬ್ಬು ಬೆಳೆಗಾರರು ಆತ್ಮ ಹತ್ಯೆ ಮಾಡಿಕೊಂಡಿದ್ದಾರೆ. ಈ ವರ್ಷ ಕಬ್ಬು ಬೆಳೆಗಾರರ ಬಿಕ್ಕಟ್ಟಿನ ಪರಿಸ್ಥಿತಿ ಇನ್ನೂ ತೀವ್ರಗೊಂಡಿದ್ದು, ಇದೇ ಪರಿಸ್ಥಿತಿ ಮುಂದುವರೆದರೆ, ಇನ್ನಷ್ಟು ರೈತರು ಆತ್ಮ ಹತ್ಯೆಗೊಳಗಾಗುವ ಸಾಧ್ಯತೆಯಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮುಕ್ತ ಆರ್ಥಿಕ ನೀತಿ, ಮುಕ್ತ ಮಾರುಕಟ್ಟೆ ನೀತಿ, ಜಾಗತೀಕರಣ ನೀತಿಗಳು ಈ ರೈತರ ಸಂಕಷ್ಟಕ್ಕೆ ಕಾರಣವಾಗಿದೆ. ಸಕ್ಕರೆ ಕಾರ್ಖಾನೆ ನಡೆಸಿ ಉತ್ಪಾದನೆ ನಡೆಸುವ ಬದಲು, ಆಮದು ಮಾಡುವುದೇ ಹೆಚ್ಚು ಲಾಭಕರವೆಂದು ದೇಶಿ, ವಿದೇಶಿ ಕಂಪನಿಗಳಿಗೆ ಸಕ್ಕರೆ ಮಾರಾಟ ಮಾಡುವ ಕಂಪನಿಗಳಿಗೆ ಮುಕ್ತ ಮಾಡಿರುವುದೇ ಇಂದಿನ ರೈತರ ದುರ್ಗತಿಗೆ ಕಾರಣವಾಗಿದೆ. ಇಂತಹ ಕಷ್ಟದ ಪರಿಸ್ಥಿತಿಯಲ್ಲಿ ಕೂಡ ಪಾಠ ಕಲಿತು ಪರ್ಯಾಯ ಮಾರ್ಗಗಳನ್ನು ಹುಡುಕುವುದು ಅಗತ್ಯವಿದೆ.

ಅರೆಯುವ ಸಾಮರ್ಥ್ಯ ಹೆಚ್ಚಿಸಲಿಲ್ಲ

1. ಕರ್ನಾಟಕ ರಾಜ್ಯದಲ್ಲಿ ಈ ವರ್ಷ 38 ಲಕ್ಷ ಟನ್ ಕಬ್ಬು ಬೆಳೆಯಲಾಗಿದೆ. ಆದರೆ 253 ಲಕ್ಷ ಟನ್ ಮಾತ್ರ ಕಬ್ಬನ್ನು ಅರೆಯಲು ಕಾರ್ಖಾನೆಗಳು ಸಾಮರ್ಥ್ಯ ಹೊಂದಿವೆ. ಅಂದರೆ ಇನ್ನು 135 ಲಕ್ಷ ಟನ್ ಕಬ್ಬು ಅರೆಯಲು ಸಾಧ್ಯವಾಗಿಲ್ಲ. ಅದು ಆದ್ದರಿಂದ ಕಬ್ಬಿನ ಗದ್ದೆಗಳಲ್ಲಿ ಉಳಿಯುತ್ತದೆ. ಕಳೆದ ವರ್ಷವೇ ಈ ಪರಿಸ್ಥಿತಿ ಗೊತ್ತಿದ್ದರೂ ಕೂಡ ಬಿಜೆಪಿ-ಜೆಡಿ(ಎಸ್) ಸರ್ಕಾರ ಹೊಸ ಕಾರ್ಖಾನೆಗಳನ್ನು ಸ್ಥಾಪನೆ ಮಾಡಲು ಮುಂದಾಗದೇ ದಿನಗಳನ್ನು ಕಳೆದು ರೈತರಿಗೆ ಮೋಸ ಮಾಡಿದೆ. ಅವರಿಗೆ ಕಬ್ಬು ಬೆಳೆಗಾರರ ಸಂಕಷ್ಟದ ಬಗ್ಗೆ ಮಾತನಾಡಲು ಯಾವುದೇ ನೈತಿಕ ಹಕ್ಕಿಲ್ಲ. ಬಹುತೇಕ ಬಿಜೆಪಿ ಶಾಸಕರು ಕಬ್ಬು ಬೆಳೆಯುವ ಪ್ರದೇಶಗಳಾದ ಬೆಳಗಾಂ, ಬಿಜಾಪುರ, ಬಾಗಲಕೋಟೆ, ಶಿವಮೊಗ್ಗ, ಹಾವೇರಿ ಮುಂತಾದ ಪ್ರದೇಶಗಳಿಂದ ಗೆದ್ದು ಬಂದರೂ ಕೂಡ ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸಲಾರದೇ ರೈತರಿಗೆ ಅನ್ಯಾಯ ಮಾಡಿದ್ದಾರೆ. ಕಳೆದ ವರ್ಷ ಹೊಸ ಕಾರ್ಖಾನೆ ಸ್ಥಾಪನೆ ಮಾಡಲು ನಿರ್ಧಾರ ಕೈಗೊಳ್ಳದಿರುವುದೇ ಇಂದಿನ ಸಮಸ್ಯೆಗೆ ಕಾರಣವಾಗಿದೆ.

ರಾಜ್ಯದಲ್ಲಿ 54 ಸಕ್ಕರೆ ಕಾರ್ಖಾನೆಗಳಿದ್ದು ಅದರಲ್ಲಿ 13 ಸಕ್ಕರೆ ಕಾರ್ಖಾನೆಗಳ ರೋಗಗ್ರಸ್ತಗೊಂಡಿವೆ. 13 ಸಕ್ಕರೆ ಕಾರ್ಖಾನೆಗಳನ್ನು ಪುನಶ್ಚೇತನಗೊಳಿಸಲು ರಾಜ್ಯಪಾಲರು ತೀರ್ಮಾನ ಮಾಡಿದರೂ ಕೂಡ ಫೆಬ್ರವರಿ ಅರ್ಧ ತಿಂಗಳು ಕಳೆಯುತ್ತಾ ಬಂದರೂ ಕೂಡ ಯಾವುದೇ ರೋಗಗ್ರಸ್ತ ಕಾರ್ಖಾನೆ ಆರಂಭವಾದ ವರದಿ ಇಲ್ಲ. ರೈತರು ಬೆಳೆದ ಕಬ್ಬಿನ ಪೈಕಿ ಕಾರ್ಖಾನೆಗಳು ಅರೆಯಲಾರದೇ ಉಳಿದ 35 ಲಕ್ಷ ಟನ್ ಕಬ್ಬು ಅರೆಯಲು ಏಕೈಕ ಮಾರ್ಗವೆಂದರೆ ಬೆಲ್ಲ ಮಾಡುವುದು. ಆದರೆ ಬೆಲ್ಲದ ಬೆಲೆ ಕುಸಿತಗೊಂಡು 600 ರೂ.ಗಳಿಗೆ ಇಳಿದಿರುವುದರಿಂದ ರೈತರು ಬೆಲ್ಲ ಉತ್ಪಾದನೆ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಮಾಡಿದ ಖರ್ಚು ಕೂಡ ರೈತರಿಗೆ ಹಿಂದಿರುಗುತ್ತಿಲ್ಲವೆಂಬುದೇ ರೈತರ ಗೋಳಾಗಿದೆ. ಬೆಲ್ಲಕ್ಕೆ 1500 ರೂ.ಬೆಂಬಲ ಬೆಲೆ, ಪುಕ್ಕಟ್ಟೆ ವಿದ್ಯುತ್, ಕ್ರಷರ್ ಖರೀದಿ ಮಾಡಲು ಸಹಾಯಧನ ಬ್ಯಾಂಕ್ ಸಾಲ ಇತ್ಯಾದಿ ಕ್ರಮಗಳನ್ನು ಈ ಕೂಡಲೇ ಸರ್ಕಾರ ಘೋಷಣೆ ಮಾಡಿದಲ್ಲಿ ರೈತರನ್ನು ಸಂಕಷ್ಟದಿಂದ ಪಾರು ಮಾಡಲು ಸಾಧ್ಯವಾಗುತ್ತದೆ.

> ಬಹುತೇಕ ಬಿಜೆಪಿ ಶಾಸಕರು ಕಬ್ಬು ಬೆಳೆಯುವ ಪ್ರದೇಶಗಳಾದ ಬೆಳಗಾಂ, ಬಿಜಾಪುರ, ಬಾಗಲಕೋಟೆ, ಶಿವಮೊಗ್ಗ, ಹಾವೇರಿ ಮುಂತಾದ ಪ್ರದೇಶಗಳಿಂದ ಗೆದ್ದು ಬಂದರೂ ಕೂಡ ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸಲಾರದೇ ರೈತರಿಗೆ ಅನ್ಯಾಯ ಮಾಡಿದ್ದಾರೆ.

ಕಬ್ಬಿಗೆ ಬೆಂಕಿ



ಬೆಳೆದ ಕಬ್ಬು ನುರಿಸದೇ ಬೆಂಕಿ ಹಚ್ಚುವುದಕ್ಕೆ ಬಂಡವಾಳಶಾಹಿ, ಜಮೀನ್ದಾರಿ ಸರ್ಕಾರಗಳು ರೈತರನ್ನು ದೂಡುತ್ತಿರುವುದಕ್ಕೆ ಅವುಗಳ ರೈತ ವಿರೋಧಿ ನೀತಿಯೇ ಕಾರಣವಾಗಿದೆ. ಕಬ್ಬಿನಿಂದ ಎಥನಾಲ್ ಉತ್ಪಾದನೆ ಮಾಡುವುದು ಸುಲಭಮಾರ್ಗವಾಗಿದೆ. ಎಥನಾಲ್, ಪೆಟ್ರೋಲ್‌ಗೆ ಬದಲಿ ಇಂಧನ, ರೈತರಿಗೆ ಲಾಭದಾಯಕ ಕೂಡ. ಇಂತಹ ಲಾಭದಾಯಕ ಉತ್ಪನ್ನಗಳನ್ನು ತಯಾರಿಸಲು ಮತ್ತು ಮಾರಲು ಬೆಂಬಲ ನೀಡಬೇಕು. ಕೇಂದ್ರ ರಾಜ್ಯ ಸರ್ಕಾರಗಳು ಕಾಗದ ಉತ್ಪಾದನೆ, ಮದ್ಯಸಾರ ಉತ್ಪಾದನೆ, ಮತ್ತಿತರ ಪೂರಕ ಉದ್ಯಮಗಳನ್ನು ಸ್ಥಾಪಿಸಿದಲ್ಲಿ ಸಕ್ಕರೆ ಕಾರ್ಖಾನೆಗಳು ಲಾಭ ಮಾಡಿ ರೈತರಿಗೆ ಲಾಭ ಹಂಚಲು ಸಾಧ್ಯವಾಗುತ್ತದೆ.

ಸಕ್ಕರೆ ಮಾರಾಟವಾಗುತ್ತಿಲ್ಲವೆಂದು ಸಕ್ಕರೆ ಕಾರ್ಖಾನೆಗಳ ಮಾಲಿಕರು ಹೇಳುತ್ತಿದ್ದಾರೆ. ಸಿಹಿಯಾದ ಸಕ್ಕರೆ ಭಾರತದ ಜನತೆ ಕೊಂಡು ಕೊಳ್ಳುವುದಿಲ್ಲವೆ? ಹೌದು ಕೊಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ ಭಾರತ ದೇಶದಲ್ಲಿ ಸಕ್ಕರೆ ಬೆಲೆ ಹೆಚ್ಚಳ ಮಾಡಿರುವುದೇ ಬಡ ಜನರು ಸಕ್ಕರೆ ಖರೀದಿ ಮಾಡದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅಗ್ಗದ ಬೆಲೆಯಲ್ಲಿ ಸಕ್ಕರೆ ಮಾರಾಟ ಮಾಡಿದಲ್ಲಿ ಭಾರತದ ಬಡವರು ಸಕ್ಕರೆ ಖರೀದಿ ಮಾಡಲು ಸಾಧ್ಯವಾಗುತ್ತಿತ್ತು. ಪ್ರತಿ ಕುಟುಂಬಕ್ಕೆ ತಿಂಗಳಿಗೆ 5 ಕೆ.ಜಿ. ಸಕ್ಕರೆ ನೀಡಿದಲ್ಲಿ ಗೋಡೌನಿನಲ್ಲಿ ಸಕ್ಕರೆ ಉಳಿಯಲು ಸಾಧ್ಯವಿಲ್ಲ. ಜಗತ್ತಿನಲ್ಲಿ ಸಕ್ಕರೆ ಉತ್ಪಾದನೆ ಹೆಚ್ಚಾಗಿದೆಯೆಂದು ವಾದಿಸುವ ಕೇಂದ್ರ ರಾಜ್ಯ ಸರ್ಕಾರಗಳು ಜಗತ್ತಿನ 600 ಕೋಟಿ ಜನರ ಪೈಕಿ 110 ಕೋಟಿ ಜನ ಸಕ್ಕರೆ ತಿನ್ನುವವರು ಭಾರತದಲ್ಲಿದ್ದಾರೆಂಬುದನ್ನು ಮರೆಯಬಾರದು.

ಪರಿಹಾರ ಎಂಬ ತುಣುಕು

ಕಳೆದ ವರ್ಷ 85 ಜನ ಕಬ್ಬು ಬೆಳೆಗಾರರು ಆತ್ಮ ಹತ್ಯೆ ಮಾಡಿಕೊಂಡ ನಂತರ ಹೆಕ್ಟರ್‌ಗೆ 25 ಸಾವಿರ ಘೋಷಣೆ ಮಾಡಿದರು. 50 ಸಾವಿರ ಹೆಕ್ಟರ್ ಕಬ್ಬು ನಷ್ಟವಾಗಿ ಪರಿಹಾರ ಕೇಳಿರುವಾಗ, ಕೇವಲ 10 ಸಾವಿರ ಹೆಕ್ಟೇರ್‌ಗೆ ಪರಿಹಾರ ಘೋಷಣೆ ಮಾಡಿ, 40 ಸಾವಿರ ಹೆಕ್ಟೇರ್ ಘೋಷಣೆ ಮಾಡದೇ ಸಮ್ಮಿಶ್ರ ಸರ್ಕಾರ ಜನರ ಕಣ್ಣಿಗೆ ಮಣ್ಣೆರಚಿದೆ. ರಾಜ್ಯಪಾಲರ ಆಡಳಿತ, ಉಳಿದ ಪರಿಹಾರ ಧನ ಬಿಡುಗಡೆ ಮಾಡುವ ಮೂಲಕ ರೈತರಿಗೆ ನ್ಯಾಯಕೊಡಿಸಬೇಕಾಗಿದೆ.

> ಕಳೆದ ವರ್ಷ 85 ಜನ ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡ ನಂತರ ಹೆಕ್ಟರ್‌ಗೆ 25 ಸಾವಿರ ಘೋಷಣೆ ಮಾಡಿದರು. 50 ಸಾವಿರ ಹೆಕ್ಟರ್ ಕಬ್ಬು ನಷ್ಟವಾಗಿ ಪರಿಹಾರ ಕೇಳಿರುವಾಗ, ಕೇವಲ 10 ಸಾವಿರ ಹೆಕ್ಟೇರ್‌ಗೆ ಪರಿಹಾರ ಘೋಷಣೆ ಮಾಡಿ, 40 ಸಾವಿರ ಹೆಕ್ಟೇರ್ ಘೋಷಣೆ ಮಾಡದೇ ಸಮ್ಮಿಶ್ರ ಸರ್ಕಾರ ಜನರ ಕಣ್ಣಿಗೆ ಮಣ್ಣೆರಚಿದೆ. ರಾಜ್ಯಪಾಲರ ಆಡಳಿತ, ಉಳಿದ ಪರಿಹಾರ ಧನ ಬಿಡುಗಡೆ ಮಾಡುವ ಮೂಲಕ ರೈತರಿಗೆ ನ್ಯಾಯಕೊಡಿಸಬೇಕಾಗಿದೆ.

ಎಷ್ಟು ಜನರ ರೈತರು ಆತ್ಮ ಹತ್ಯೆ ಮಾಡಿಕೊಂಡರೂ ಕುರುಡು ಸರ್ಕಾರ ಕಬ್ಬು ಬೆಳೆಗಾರರ ಸಹಾಯಕ್ಕೆ ಧಾವಿಸುತ್ತಿಲ್ಲ. ಬೆಳೆದ ಕಬ್ಬು, ಗದ್ದೆಯಲ್ಲೇ ಒಣಗಿ ರೈತರ ಆಕ್ರೋಶಕ್ಕೆ ಆಹುತಿಯಾಗುತ್ತಿದೆ. ಬೆಂಕಿಯಲ್ಲಿ ಬೆಂದು ಹೋಗುತ್ತಿದೆ. ಸಕ್ಕರೆಯ ಸಿಹಿ ಕಾಣಬೇಕಾದ ರೈತರ ಬಾಳು ಬರಡಾಗುತ್ತಿದೆ.

ಈ ನಿಟ್ಟಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ತನ್ನ ಘಟಕಗಳಿರುವ ಕಡೆಗಳಲ್ಲಿ ಕಬ್ಬು ಬೆಳೆಗಾರರನ್ನು ಸಂಘಟಿಸಿ ಹೋರಾಟ ನಡೆಸುತ್ತಿದೆ. ಇತ್ತೀಚಿಗೆ ಮಂಡ್ಯದಲ್ಲಿ ನಡೆದ ಹೋರಾಟದ ಫಲವಾಗಿ ಬಿಡದಿಯಲ್ಲಿರುವ ಹೊಸ ಕಾರ್ಖಾನೆಯಲ್ಲಿ ಹೆಚ್ಚುವರಿ ಕಬ್ಬನ್ನು ಅರೆಯುವುದಾಗಿ ಮಂಡ್ಯ ಜಿಲ್ಲಾಧಿಕಾರಿ ಪರವಾಗಿ ಕೆ.ಪಿ.ಆರ್.ಎಸ್. ನ ಮುಖಂಡರೊಂದಿಗೆ ಮಾತನಾಡಿದ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ.

ಆದರೆ ಬೆಂಬಲ ಬೆಲೆಗಳನ್ನು ನಿಗದಿ ಮಾಡುವ ಕೆಲಸ ರಾಜ್ಯ ಸರ್ಕಾರವೇ ಮಾಡಬೇಕಾಗಿರುವುದರಿಂದ ಫೆಬ್ರವರಿ 11 ರಂದು ರಾಜಭವನ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸರ್ಕಾರ ಇದಕ್ಕೆ ಸ್ಪಂದಿಸದಿದ್ದಲ್ಲಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು.

ಕಾನೂನು ಇಲ್ಲ

ಬಂಡವಾಳ ಶಾಹಿಗಳು ಮೇಲ್ವರ್ಗ ಕೂಡಿ
ಭಾರತವ ಆಳುತ್ತ ಬಂದಿಹರು ನೋಡಿ
ಹೀಗಾಗಿ ಬಡ ದುಡಿವ ಮಂದಿಗಳು ಎಲ್ಲ
ಉಣ್ಣಲೇಬೇಕೆಂಬ ಕಾನೂನು ಇಲ್ಲ.
– ವಿಡಂಬಾರಿ



ಹೆಚ್ಚುತ್ತಲೇ ಇರುವ ಶಿಕ್ಷಣರಂಗದ ಸಮಸ್ಯೆಗಳನ್ನು ಇತ್ಯರ್ಥಪಡಿಸುವಂತೆ ಆಗ್ರಹಿಸಿದ ಸಾವಿರಾರು ವಿದ್ಯಾರ್ಥಿಗಳು ರಾಜ್ಯಪಾಲರಿಗೆ ಮನವಿ ಸಲ್ಲಿಸಿ ಚರ್ಚಿಸಿದರು. ಅಭ್ಯಾಸ ಮತ್ತು ಹೋರಾಟದ ವಿಶಿಷ್ಟ ಉದಾಹರಣೆಯ ವರದಿಯಿಲ್ಲಿ.

ರಾಜ್ಯದಲ್ಲಿ ಉಲ್ಬಣಗೊಳ್ಳುತ್ತಿರುವ ಶೈಕ್ಷಣಿಕ ಸಮಸ್ಯೆಗಳು

ರಾಜಭವನದತ್ತ ವಿದ್ಯಾರ್ಥಿಗಳು

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ರಾಜ್ಯದ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ವಿದ್ಯಾರ್ಥಿಗಳ ಬೃಹತ್ 'ರಾಜಭವನ್ ಚಲೋ' ರ್‍ಯಾಲಿ ಹಮ್ಮಿಕೊಂಡಿತ್ತು. ಉತ್ತರ ಬೀದರ್‌ನಿಂದ ಹಿಡಿದು ದಕ್ಷಿಣದ ಮೈಸೂರಿನವರೆಗೆ ರಾಜ್ಯದ ವಿದ್ಯಾರ್ಥಿ ಸಮುದಾಯವನ್ನು ಪ್ರತಿನಿಧಿಸಿ ಐದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು. ರಾಜ್ಯ ಬಡ ದಲಿತ-ಹಿಂದುಳಿದ ವರ್ಗಗಳನ್ನು ತೀವ್ರ ರೀತಿಯಲ್ಲಿ ಬಾಧಿಸುತ್ತಿರುವ ಇಂದಿನ ಶೈಕ್ಷಣಿಕ ಪರಿಸ್ಥಿತಿ ವಿದ್ಯಾರ್ಥಿಗಳನ್ನು ಆಕ್ರೋಶ ಭರಿತರನ್ನಾಗಿಸಿತ್ತು.

ರಾತ್ರಿ ಪ್ರಯಾಣ ಬೆಳೆಸಿ ಬಂದಿದ್ದ ಸಾವಿರಾರು ವಿದ್ಯಾರ್ಥಿಗಳು ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ ನಡೆಸಿ, ನಂತರ ಬೆಂಗಳೂರು ನಗರದ ವಿದ್ಯಾರ್ಥಿಗಳೂ ಜೊತೆಗೂಡಿ ರಾಜ್‌ಭವನ್‌ನತ್ತ ಹೊರಟಾಗ ವಿದ್ಯಾರ್ಥಿಗಳನ್ನು ಪೋಲೀಸರು ತಡೆದರು. ನಂತರ ಬೃಹತ್ ಬಹಿರಂಗ ಸಭೆ ರಸ್ತೆಯಲ್ಲಿಯೇ ಏರ್ಪಟ್ಟಿತ್ತು. ವಿದ್ಯಾರ್ಥಿಗಳನ್ನು ಜನವಾದಿ ಮಹಿಳಾ ಸಂಘಟನೆ ಹಾಗೂ ಡಿವೈಎಫ್‌ಐನ ಮುಖಂಡರು ಮಾತನಾಡಿ ಬೆಂಬಲ ಸೂಚಿಸಿದರು. ಎಸ್‌ಎಫ್‌ಐನ ಸಂಸ್ಥಾಪಕ ಮುಖಂಡರಲೊಬ್ಬರಾದ ಜಿ.ವಿ. ಶ್ರೀರಾಮರೆಡ್ಡಿಯವರು ಮಾತನಾಡಿ, ಆಳುವ ಸರ್ಕಾರಗಳ ವಿದ್ಯಾರ್ಥಿ ವಿರೋಧಿ ನೀತಿಯನ್ನು ಖಂಡಿಸಿದರು.

ರಾಜ್ಯಪಾಲರ ಭೇಟಿ :

ಎಸ್‌ಎಫ್‌ಐ ನಿಯೋಗದೊಂದಿಗೆ ಮಾತುಕತೆ ನಡೆಸಿದ ರಾಜ್ಯಪಾಲರು, ರಾಜ್ಯದ ಶೈಕ್ಷಣಿಕ ಸಮಸ್ಯೆಗಳನ್ನು ಒಪ್ಪಿಕೊಂಡರಲ್ಲದೆ, ಎಸ್‌ಎಫ್‌ಐ ಮುಂದಿಟ್ಟಿರುವ ಬೇಡಿಕೆಗಳನ್ನು ಹಂತಹಂತವಾಗಿ ಈಡೇರಿಸುವ ಭರವಸೆ ನೀಡಿದರು. ಎಸ್‌ಎಫ್‌ಐ ರಾಜ್ಯಾದ್ಯಂತ ನಡೆಸಿದ್ದ ಹಾಸ್ಟೆಲ್ ಸಮಸ್ಯೆಗಳ ಸಮೀಕ್ಷೆಯ ವರದಿಯನ್ನು ರಾಜ್ಯಪಾಲರಿಗೆ ಸಲ್ಲಿಸಿ ಕೂಡಲೇ ಸಮಸ್ಯೆಗಳನ್ನು ಬಗೆಹರಿಸುವಂತೆ ಆಗ್ರಹಿಸಲಾಗಿದೆ. ಹಾಗೆ ಸೆಮಿಸ್ಟರ್ ಪದ್ಧತಿಯಿಂದಾಗಿ ವಿ.ವಿ.ಗಳಲ್ಲಿ ಇನ್ನಷ್ಟು ಉಲ್ಬಣಗೊಂಡಿರುವ, ಸಮಸ್ಯೆಗಳು, ಎಲ್ಲಾ ರೀತಿಯ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಶೈಕ್ಷಣಿಕ ಸವಲತ್ತುಗಳನ್ನು ಹೆಚ್ಚಿಸಲು, ವ್ಯಾಪಾರೀಕರಣವನ್ನು ತಡೆಗಟ್ಟಲು ಮುಂಬರುವ ಬಜೆಟ್‌ನಲ್ಲಿ ಶಿಕ್ಷಣರಂಗಕ್ಕೆ ಮೀಸಲಿಡುವ ಹಣವನ್ನು ಹೆಚ್ಚಿಸುವಂತೆ ಬಲವಾಗಿ ಆಗ್ರಹಿಸಲಾಯಿತು.



ಮುಂದಿನ ತೀರ್ಮಾನಗಳು

ತದನಂತರದಲ್ಲಿ ಸಭೆ ಸೇರಿದ ಎಸ್‌ಎಫ್‌ಐ ರಾಜ್ಯ ಸಮಿತಿ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದೆ. ದಲಿತ-ಹಿಂದುಳಿದ ವರ್ಗದ ವಿದ್ಯಾರ್ಥಿಗಳನ್ನು ಬಾಧಿಸುತ್ತಿರುವ ಹಾಸ್ಟೆಲ್ ಸಮಸ್ಯೆಗಳ ಪರಿಹಾರಕ್ಕೆ ಸ್ಥಳೀಯ ಮಟ್ಟದ ಹೋರಾಟಗಳನ್ನು ತೀವ್ರಗೊಳಿಸಲು ನಿರ್ಧರಿಸಲಾಗಿದೆ. ಪದವಿ-ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ ವಿಶ್ವವಿದ್ಯಾಲಯಗಳ ವಾರ ಸೆಮಿಸ್ಟರ್ ಪರೀಕ್ಷಾ ಅವ್ಯವಸ್ಥೆಯ ವಿರುದ್ಧ ಹೋರಾಟ ರೂಪುಗೊಳಿಸಲು ಹಾಗೂ ತೀವ್ರಗೊಳಿಸಲು ನಿರ್ಧರಿಸಲಾಗಿದೆ.

ದಲಿತ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನವನ್ನು ಹಂತ ಹಂತವಾಗಿ ಸ್ಥಗಿತಗೊಳಿಸಲು ಕೇಂದ್ರ ಸರ್ಕಾರ ಹುನ್ನಾರ ನಡೆಸಿದ್ದು, ಇದೀಗ ಶೇ.60ರಷ್ಟು ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾರ್ತಿ ವೇತನ ನೀಡುವುದಾಗಿ ಆದೇಶ ಹೊರಡಿಸಿದೆ, ಗ್ರಾಮೀಣ ಪ್ರದೇಶದ ಬಡ ಶೈಕ್ಷಣಿಕವಾಗಿ ಹಿಂದುಳಿದ ದಲಿತ ಸಮುದಾಯವನ್ನು ಸಂಪೂರ್ಣವಾಗಿ ತುಳಿತಕ್ಕೊಳಪಡಿಸುವ ಕುತಂತ್ರ ಇದಾಗಿದ್ದು, ಈ ನೀತಿಯ ವಿರುದ್ಧ ಹೋರಾಟ ರೂಪಿಸಲು ತೀರ್ಮಾನಿಸಲಾಗಿದೆ.

ಫೆಬ್ರವರಿ 20 ರಂದು ಪಾರ್ಲಿಮೆಂಟ್ ಚಲೋ

ಎಸ್‌ಎಫ್‌ಐ ನಿರಂತರವಾಗಿ ಹೋರಾಟ ನಡೆಸಿ ಸರ್ಕಾರದ ಮುಂದಿಟ್ಟಿರುವ ಶೈಕ್ಷಣಿಕ ಬೇಡಿಕೆಗಳ ಈಡೇರಿಕೆಗೆ, ಶಿಕ್ಷಣರಂಗವನ್ನು ಬಲಪಡಿಸಲು ಯುಪಿಎ ಸರ್ಕಾರ ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಹೇಳಿಕೊಂಡಿರುವಂತೆ ಶಿಕ್ಷಣಕ್ಕಾಗಿ ಮೀಸಲಿಡುವ ತನ್ನ ಬಜೆಟ್‌ನ ಹಣವನ್ನು ಶೇ.10ಕ್ಕೆ ಏರಿಸಬೇಕು, ಜಿ.ಡಿ.ಪಿ.ಯ ಶೇ.60 ರಷ್ಟನ್ನು ಶಿಕ್ಷಣ ಕ್ಷೇತ್ರಕ್ಕೆ ಮೀಸಲಿಡಲು ಆಗ್ರಹಿಸಿ ಪಾರ್ಲಿಮೆಂಟ್ ಚಲೋ ಹಮ್ಮಿಕೊಳ್ಳಲಾಗಿದೆ. ಇದೇ ಸಂದರ್ಭದಲ್ಲಿ ದಲಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕಡಿತಗೊಳಿಸುವ ತೀರ್ಮಾನವನ್ನು ಕೈಬಿಡುವಂತೆ ಆಗ್ರಹಿಸಲಾಗುವುದು.

- ಯು.ಎಸ್. ಪ್ರಸಾದ್

ಅಲ್ಲಿಂದ - ಇಲ್ಲಿಂದ

ಇದು ಪ್ರಜಾವಾಣಿಯ 'ಸೀಳುನೋಟ' ಕಾಲಂನಲ್ಲಿ ಕಂಡ ಕೋಲಾರದ ಸುದ್ದಿ

[ಬಿಜೆಪಿ ಪಟಾಲಂನ] 'ರೆಡಿಮೇಡ್' ಹೋರಾಟ !

ಈಗ ಎಲ್ಲವೂ ರೆಡಿಮೇಡ್. ಅದೇ ರೀತಿ ಹೋರಾಟಗಳೂ ರೆಡಿಮೇಡ್ ಆಗಿವೆ. ಹೋರಾಟಗಳು ರೆಡಿಮೇಡ್ ಆದ ಮೇಲೆ, ಹೋರಾಟಗಾರರೂ ರೆಡಿಮೇಡ್ ಆಗಬೇಕಲ್ಲ!

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತವಿರೋಧಿ ನೀತಿಯನ್ನು ವಿರೋಧಿಸಿ ಬಿಜೆಪಿಯ ಕಿಸಾನ್ ಮೋರ್ಚಾ ಕೋಲಾರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾಲ್ನಡಿಗೆ ಜಾಥಾ ಇಂತಹ ರೆಡಿಮೇಡ್ ಹೋರಾಟಕ್ಕೆ ಸಾಕ್ಷಿಯಾಗಿತ್ತು.

ಇಲ್ಲಿನ ಗಾಂಧಿ ವನದಲ್ಲಿ ಬಿಜೆಪಿ ಅಧ್ಯಕ್ಷ ಡಿ.ವಿ.ಸದಾನಂದಗೌಡ ಜಾಥಾ ಉದ್ಘಾಟನೆ ಮಾಡಿದರು. ನಂತರ ಎಲ್ಲರೂ ಪತ್ರಿಕಾ ಛಾಯಾಗ್ರಾಹಕರಿಗೆ ಮತ್ತು ಟಿ.ವಿ. ಕ್ಯಾಮೆರಾಗಳಿಗೆ ಪೋಸು ನೀಡಿ ಬೀದಿಗೆ ಇಳಿದರು. ಸದಾನಂದ ಗೌಡರು ಕಾರು ಹತ್ತಿದ ಮೇಲೆ ಬೀದಿಗೆ ಇಳಿದವರು ತಮ್ಮ ಪಾಡಿಗೆ ತಮ್ಮ ಮನೆಗಳಿಗೋ ಮತ್ತೆಲ್ಲಿಗೋ ಹೊರಟರು. ಹಾಗಾದರೆ ಹೋರಾಟ ಮಾಡಿದವರು ಯಾರು ಎನ್ನುವುದು ಪ್ರಶ್ನೆ.

ಹೋರಾಟಕ್ಕಾಗಿ ಬೈಪಾಸ್ ರಸ್ತೆಯಲ್ಲಿ ರೆಡಿಮೆಡ್ ಹೋರಾಟಗಾರರನ್ನು ಸಿದ್ಧಗೊಳಿಸಲಾಗಿತ್ತು. ಎಲ್ಲರಿಗೂ ಹೊಸ ಪ್ಯಾಂಟ್, ಬಿಳಿ ಅಂಗಿ, ಹಸಿರು ಟವಲ್ ನೀಡಲಾಗಿತ್ತು. ಈ ರೆಡಿಮೇಡ್ ಹೋರಾಟಗಾರರಿಗೆ ಸಂಭಾವನೆ ಸಹ ನೀಡಲಾಗಿದೆಯಂತೆ. ಮೂರನೇ ತಾರೀಖು ಆರಂಭವಾದ ಈ ರೆಡಿಮೇಡ್ ಹೋರಾಟ ಬೆಂಗಳೂರು ತಲುಪುವುದಾಗಿತ್ತು. ಕೋಲಾರದಲ್ಲೇ ವಿಸರ್ಜನೆಗೊಂಡ ಈ ಸಿದ್ಧ ಅರ್ಥಾತ್ ಸಂಬಂಧವಿಲ್ಲದ ಹೋರಾಟಗಾರರು ಕೊನೆಗೆ ತಲುಪಿದ್ದೆಲ್ಲಿಗೆ ತಿಳಿಯದಾಗಿದೆ.

ಎಚ್.ಎಚ್.ದಯಾನಂದ, ಕೋಲಾರ

ಭಾರತವೆಲ್ಲಿ ಬೆಳಗುತ್ತಿದೆ? 'ಮಾಯಾ' ರಾಜ್ಯದ ಸಾಮಾಜಿಕ ನ್ಯಾಯ?


ಕುದಿವ ಎಣ್ಣೆಗೆ ಎಸೆದು ದಲಿತನ ಹತ್ಯೆ

ಇಟಾವಾ (ಪಿಟಿಐ): ಕೆಲಸ ಮಾಡಲು ನಿರಾಕರಿಸಿದ ದಲಿತ ಯುವಕನೊಬ್ಬನನ್ನು ಮಿಠಾಯಿ ತಯಾರಿಕಾ ಘಟಕದ ಮಾಲೀಕರೊಬ್ಬರು ಕುದಿಯುತ್ತಿರುವ ಎಣ್ಣೆಯ ಹಂಡೆಗೆ ಎಸೆದು ಕೊಂದ ಘಟನೆ ಉತ್ತರ ಪ್ರದೇಶ ಇಟಾವಾ ಜಿಲ್ಲೆ ಭರ್ತಾನಾ ಎಂಬಲ್ಲಿ ಶನಿವಾರ ನಡೆದಿದೆ. ಸತ್ಯವೀರ್ ಸಿಂಗ್ ಎಂಬ ನತದೃಷ್ಟ ಯುವಕ ಅನಾರೋಗ್ಯದ ಕಾರಣ ಕೆಲಸ ಮಾಡಲು ನಿರಾಕರಿಸಿದ್ದ. ಆರೋಪಿ ತಲೆ ತಪ್ಪಿಸಿಕೊಂಡಿದ್ದಾನೆ.

ಬಾಬಾಬುಡನ್ ಸ್ವಾಮಿ ದರ್ಗಾ, ಇನಾಂದತ್ತ ಪೀಠವನ್ನು ಪ್ರಜಾವಾಣಿ ಕಂಡಿದ್ದು ಹೀಗೆ...

ಬನ್ನಿ, ಸುತ್ತೋಣ ಕರ್ನಾಟಕ

ದತ್ತಾತ್ರೇಯ ಪೀಠ (ಚಿಕ್ಕಮಗಳೂರು ಜಿಲ್ಲೆ)



ಕೇಸರೀಕರಣದ ಕಾಮಾಲೆ ರೋಗವೇ? ಅಥವಾ ಮೆದುಳು ಜ್ವರವೇ?

ಮುಂಬೈ: ಪ್ರಾದೇಶಿಕ ಸಂಕುಚಿತವಾದದ ಆಟಾಟೋಪ

ಮತ್ತೆ ಪ್ರಾದೇಶಿಕ ಸಂಕುಚಿತವಾದದ ಹೊಲಸು ಮುಖ ಮುಂಬೈಯಲ್ಲಿ ಕಾಣಬರುತ್ತಿದೆ. ಈ ಬಾರಿ ಅದು ಉತ್ತರ ಭಾರತೀಯರ, ಅದರಲ್ಲೂ ಬಿಹಾರ ಮತ್ತು ಉತ್ತರಪ್ರದೇಶದಿಂದ ಬಂದು ಮುಂಬೈಯಲ್ಲಿ ಕೆಲಸ ಮಾಡುತ್ತಿರುವವರ ವಿರುದ್ಧ. ಅವರ ಮೇಲೆ ದೈಹಿಕ ಹಲ್ಲೆಗಳನ್ನು ನಡೆಸಲಾಗುತ್ತಿದೆ. ಅವರು ನಡೆಸುತ್ತಿರುವ ಟ್ಯಾಕ್ಸಿಗಳಿಗೆ ಜಖಂ ಮಾಡಲಾಗುತ್ತಿದೆ. ಎಷ್ಟೆಂದರೆ ಟ್ಯಾಕ್ಸಿ ಚಾಲಕರ ಸಂಘಗಳು ಮುಷ್ಕರ ನಡೆಸುವ ಬೆದರಿಕೆ ಹಾಕಿದವು. ಭೋಜಪುರಿ ಸಿನಿಮಾ ಪ್ರದರ್ಶನಗಳ ಮೇಲೆ ಧಾಳಿಗಳು ನಡೆಯುತ್ತಿವೆ. ಹಿಂದಿ ಚಿತ್ರೋದ್ಯಮದ ಸೂಪರ್ ಸ್ಟಾರ್ ಅಮಿತಾಭ ಬಚ್ಚನ್‌ರನ್ನೂ ಅವರು ಬಿಟ್ಟಿಲ್ಲ.

ಬಾಳ ಠಾಕ್ರೆಯ ಶಿವಸೇನೆಯಿಂದ ಪ್ರತ್ಯೇಕಗೊಂಡ ಆತನ ಅಳಿಯ ರಾಜ್ ಠಾಕ್ರೆ ತನಗೆ ಮತ್ತು ತನ್ನ ಸಂಘಟನೆ ಮಹಾರಾಷ್ಟ್ರ ನವನಿರ್ಮಾಣ ಸೇನೆ(ಎಂಎನ್‌ಎಸ್)ಗೆ ಮಹಾರಾಷ್ಟ್ರದಲ್ಲಿ ಒಂದು ರಾಜಕೀಯ ಜಾಗ ಗಿಟ್ಟಿಸಲು ಇಂತಹ ದಾರಿ ಹಿಡಿದಿರುವಂತೆ ಕಾಣುತ್ತದೆ. ಇದು ನಾಲ್ಕು ದಶಕಗಳ ಹಿಂದೆ 1960ರ ದಶಕದಲ್ಲಿ ಮೂಲ ಶಿವಸೇನೆ ಹಿಡಿದ ದಾರಿಯೇ ಎಂಬುದು ಗಮನಾರ್ಹ. 'ಮಣ್ಣಿನ ಮಗ'ನ ಘೋಷಣೆಯೆತ್ತಿ ಆಗ ಮುಂಬೈಯಲ್ಲಿ ವಾಸಿಸುತ್ತಿದ್ದ ದಕ್ಷಿಣ ಭಾರತೀಯರ ಮೇಲೆ ಗುರಿಯಿಡಲಾಯಿತು. 'ಲುಂಗಿ ಭಗಾವೋ, ಪುಂಗಿ ಬಜಾವೋ' (ಲುಂಗಿ ಓಡಿಸಿ, ಪುಂಗಿ ಊದಿಸಿ- ಲುಂಗಿ ಅಥವ ಪಂಚೆ ಆಗ ಎಲ್ಲ ದಕ್ಷಿಣ ಭಾರತೀಯರ ಸಾಮಾನ್ಯ ಲಕ್ಷಣವೆನಿಸಿತ್ತು) ಎಂಬ ಘೋಷಣೆಯಡಿ ಹಿಂಸಾಚಾರ ನಡೆಯಿತು.

ಪ್ರತಿಗಾಮಿ ಪರಂಪರೆ

ಶಿವಸೇನೆ ಈ ನಾಲ್ಕೈದು ದಶಕಗಳಲ್ಲಿ ಇನ್ನೂ 'ಮೇಲಕ್ಕೆ' ಬಡ್ತಿ ಪಡೆದಿದೆ! ಅಂದರೆ ಭಾರತೀಯ ಸಮಾಜ ಮತ್ತು ರಾಜಕಾರಣದಲ್ಲಿ ಇನ್ನೂ ಹೆಚ್ಚು ವಿಭಜನಕಾರಿಯಾದ 'ಹಿಂದುತ್ವ' ವನ್ನು ಅಪ್ಪಿಕೊಂಡಿದೆ. ಎಂಎನ್‌ಎಸ್ ಅದೇ ಪ್ರತಿಗಾಮಿ ಪರಂಪರೆಯಲ್ಲಿ ಮೊದಲ ಹೆಜ್ಜೆಗಳನ್ನಿಡುತ್ತಿದೆ, ಮತ್ತೆ ಮರಾಠಿ ಸಂಕುಚಿತತೆಯನ್ನು ಬಡಿದೆಬ್ಬಿಸುತ್ತಿದೆ. ಬಿಹಾರಿಗಳು ದೀಪಾವಳಿಯ ನಂತರ ಆರನೇ ದಿನ ಛಾಟ್ ಎಂಬ ಹಬ್ಬವನ್ನು ಬಹಳ ಸಂಭ್ರಮದಿಂದ ಆಚರಿಸುತ್ತಾರೆ. ಮುಂಬೈಯಲ್ಲಿಯೂ ಅದನ್ನು ಅವರು ಅಷ್ಟೊಂದು ಸಂಭ್ರಮದಿಂದ ಆಚರಿಸುವುದಕ್ಕೆ ಎಂಎನ್‌ಎಸ್ ಆಕ್ಷೇಪ ಎನ್ನಲಾಗುತ್ತದೆ.

> ಸಿನಿಕ ರಾಜಕಾರಣಿಗಳು, ಕೆಲವು ರಾಜಕೀಯ ಪಕ್ಷಗಳೂ ಹೇಗಾದರೂ ಚುನಾವಣಾ ನೆಲೆ ಪಡೆಯಲು ಪ್ರಾದೇಶಿಕ ಸಂಕುಚಿತವಾದದ ಅಡ್ಡದಾರಿ ಹಿಡಿಯುವುದು ನಿಜಕ್ಕೂ ದುರದೃಷ್ಟಕರ. ಅಷ್ಟೇ ಅಲ್ಲ ಅದು ವಿನಾಶಕಾರಿ ಕೂಡಾ. ಒಂದು ಆರೋಗ್ಯಕರ ಪ್ರಜಾಪ್ರಭುತ್ವವಾದಿ ರಾಜಕೀಯ ವ್ಯವಸ್ಥೆಗೆ ಇದು ತಕ್ಕುದಲ್ಲ.

ವಾಸ್ತವವಾಗಿ ಈ ಅವಧಿಯಲ್ಲಿ ಬಹಳ ದಿನ ಬಿಹಾರದ ಅಗ್ಗದ ಮತ್ತು ದಕ್ಷ ಶ್ರಮಿಕರು ಕೆಲಸಕ್ಕೆ ದೊರೆಯದಿರುವುದೇ ಅವರ ಕೋಪಕ್ಕೆ ಕಾರಣ


ಸಂಕುಚಿತವಾದಿಗಳ ಗಲಭೆ

ಭಾರತ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಭಾಷಿಕವಾಗಿ ಶ್ರೀಮಂತ ವೈವಿಧ್ಯತೆಯನ್ನು ಹೊಂದಿರುವ ದೇಶ. ಸಹಜವಾಗಿಯೇ ವಿವಿಧ ಜನವಿಭಾಗಗಳು ತಮಗೆ ಪಾರಂಪರಿಕವಾಗಿ, ಸಾಂಸ್ಕೃತಿಕವಾಗಿ ಪ್ರಮುಖವೆನಿಸಿದ ಆಚರಣೆಗಳನ್ನು ಮಾಡುತ್ತವೆ. ಇದರಲ್ಲಿ ಬೇರೆ ವಿಭಾಗಗಳು ತಮ್ಮ ಬೇಕು-ಬೇಡಗಳನ್ನು ಇತರರ ಮೇಲೆ ಹೇರುವುದು ಎಷ್ಟು ಸರಿ? ಭಾರತದ ಐಕ್ಯತೆ ಬೆಸೆದಿರುವುದು ಈ ವೈವಿಧ್ಯತೆಯಲ್ಲಿ ಏಕತೆಯ ಎಳೆಗಳನ್ನು ಬಲಪಡಿಸುವ ಕೆಲಸದಿಂದ; ಅದರ ಬದಲು ವೈವಿಧ್ಯತೆಯ ಮೇಲೆ ಯಾವುದೋ ಒಂದು ರೀತಿಯ ಸಮರೂಪತೆಯನ್ನು ಹೇರುವುದು ವಿಭಜನಕಾರಿ ಶಕ್ತಿಗಳನ್ನು ಪೋಷಿಸುತ್ತದೆ. ಇದು ಒಂದು ದೇಶವಾಗಿ ಭಾರತದ ಉಳಿವಿಗೆ ಮಾರಕ. ಪ್ರಾದೇಶಿಕ ಸಂಕುಚಿತವಾದ ಮತ್ತು ಕೋಮುವಾದ ಮಾಡುವುದು ಇದನ್ನೇ. ಈ ತಿಳುವಳಿಕೆಯನ್ನು ಅಕ್ಷರಶಃ ಪಾಲಿಸಿರುವ ನಮ್ಮ ಸಂವಿಧಾನ ಪ್ರತಿಯೊಬ್ಬ ನಾಗರಿಕನಿಗೆ ದೇಶದ ಯಾವುದೇ ಭಾಗದಲ್ಲಿ ಕೆಲಸ ಮಾಡುವ, ನೆಲೆಸುವ ಹಕ್ಕು ನೀಡಿದೆ. ಆದ್ದರಿಂದ ಮುಂಬೈಯಲ್ಲಿ ಇತ್ತೀಚೆಗೆ ಪ್ರಕಟಗೊಂಡ ಪ್ರಾದೇಶಿಕ ಸಂಕುಚಿತವಾದ ಎಲ್ಲಾ ರೀತಿಯಲ್ಲೂ ಸಂವಿಧಾನ ಬಾಹಿರ.

ಸಮತೋಲದ ಅಭಿವೃದ್ಧಿಯೇ ಪರಿಹಾರ

ಮುಂಬೈ ನಿವಾಸಿಗಳು ಅವರು ಯಾವುದೇ ಭಾಷೆ, ಧರ್ಮ, ಸಂಸ್ಕೃತಿ ಇತ್ಯಾದಿಗಳಿಗೆ ಸೇರಿದ್ದರೂ 'ಮುಂಬೈಕರ್' ಅನಿಸಿಕೊಳ್ಳುತ್ತಾರೆ. ಶಿವಸೇನೆಯ ಹಲವಾರು ಸಂಕುಚಿತವಾದಿ ಹೊಡೆತಗಳಿಂದ ಗಟ್ಟಿಯಾಗಿರುವ ಇವರು 'ಮುಂಬೈಕರ್‌ಗಳಿಗಾಗಿ ಮುಂಬೈ' ಎಂಬ ಘೋಷಣೆ ಒಪ್ಪಿಕೊಂಡಿದ್ದಾರೆ. ದೇಶದ ವಾಣಿಜ್ಯ ರಾಜಧಾನಿ ಮುಂಬೈ ನಗರದ ನಿವಾಸಿಗಳ ಈ ವಿಶ್ವಭಾವಕ್ಕೆ ಈಗ ಬೆದರಿಕೆ ಬಂದಿದೆ. ಅಷ್ಟೇ ಅಲ್ಲ, ಆಧುನಿಕ ಭಾರತದ ಪರಿಕಲ್ಪನೆಗೇ ಇದೊಂದು ಬೆದರಿಕೆ. ಇದನ್ನು ಯಾವುದೇ ಭಾರತೀಯ ಒಪ್ಪಿಕೊಳ್ಳುವುದಾಗಲೀ, ಸಹಿಸಿಕೊಳ್ಳುವುದಾಗಲೀ ಹೇಗೆ ಸಾಧ್ಯ? ಆದರೆ ಸಿನಿಕ ರಾಜಕಾರಣಿಗಳು, ಕೆಲವು ರಾಜಕೀಯ ಪಕ್ಷಗಳೂ


ಬಾಳಾ ಠಾಕ್ರೆಯವರ ಹಳೆಯ ಸಿದ್ಧಾಂತಕ್ಕೆ ಜೋತುಬಿದ್ದಿರುವ ರಾಜ್ ಠಾಕ್ರೆ

ಹೇಗಾದರೂ ಚುನಾವಣಾ ನೆಲೆ ಪಡೆಯಲು ಇಂತಹ ಅಡ್ಡದಾರಿ ಹಿಡಿಯುವುದು ನಿಜಕ್ಕೂ ದುರದೃಷ್ಟಕರ. ಅಷ್ಟೇ ಅಲ್ಲ, ಅದು ವಿನಾಶಕಾರಿ ಕೂಡಾ. ಒಂದು ಆರೋಗ್ಯಕರ ಪ್ರಜಾಪ್ರಭುತ್ವವಾದಿ ರಾಜಕೀಯ ವ್ಯವಸ್ಥೆಗೆ ಇದು ತಕ್ಕುದಲ್ಲ.

ಮಾರುಕಟ್ಟೆ ದೇವರ ಮುಂದೆ...

ನವ-ಉದಾರವಾದಿ ಧೋರಣೆಗಳು ಪ್ರಾದೇಶಿಕ ಆರ್ಥಿಕ ಅಸಮಾನತೆಗಳನ್ನು ಇನ್ನಷ್ಟು ಬೆಳೆಸುತ್ತಿವೆ. ಇದರಿಂದ ಜನ ಜೀವನೋಪಾಯ ಹುಡುಕಿಕೊಂಡು ಹಿಂದುಳಿದ ಪ್ರದೇಶಗಳಿಂದ ಅಭಿವೃದ್ಧಿಹೊಂದಿದ ಕೇಂದ್ರಗಳಿಗೆ ವಲಸೆ ಹೋಗುತ್ತಾರೆ. ಆದ್ದರಿಂದ ಪ್ರಾದೇಶಿಕ ಸಂಕುಚಿತವಾದ ಮತ್ತು ಈಗ ಮುಂಬೈಯಲ್ಲಿ ಕಾಣುತ್ತಿರುವಂತಹ ಅದರ ವಿನಾಶಕಾರೀ ಪರಿಣಾಮಗಳನ್ನು, ಪ್ರತ್ಯೇಕ ರಾಜ್ಯಗಳ ಬೇಡಿಕೆಗಳನ್ನು ತಪ್ಪಿಸಬೇಕಾದರೆ ಅದಕ್ಕಿರುವ ಏಕೈಕ ದಾರಿಯೆಂದರೆ ಒಂದು ಸಮತೋಲನದ ಬೆಳವಣಿಗೆಯ ಕಾರ್ಯತಂತ್ರ ಅನುಸರಿಸುವುದು. ನಿಜ, ಇದೊಂದು ದೀರ್ಘಾವಧಿಯ ಪರಿಹಾರ. ಅಲ್ಲದೆ ಇದು ಜ್ಯಾರಿಗೆ ಬರಬೇಕಾದರೆ ಪ್ರಭುತ್ವ ಅಥವಾ ಸರಕಾರ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಕ್ರಿಯ ಪಾತ್ರ ವಹಿಸಬೇಕು. ಆದರೇನು ಮಾಡುವುದು- ನವ ಉದಾರವಾದಿ ಧೋರಣೆಗಳನ್ನು ಅಪ್ಪಿಕೊಂಡಿರುವ ನಮ್ಮ ಆಳರಸರು ಈ ದಾರಿಯನ್ನು ಮುಚ್ಚಿ ಬಿಟ್ಟಿದ್ದಾರಲ್ಲಾ! ನವ-ಉದಾರವಾದಿ ಆರ್ಥಿಕ ಅಜೆಂಡಾದಲ್ಲಿ ಮಾರುಕಟ್ಟೆಯೇ ಕೇಂದ್ರ ಸಂಗತಿ, ಈ ಸರ್ವಶಕ್ತ ಮಾರುಕಟ್ಟೆ ದೇವರ ಎದುರು ಮೊಣಕಾಲೂರಿ ಸರಕಾರ ಅಥವಾ ಪ್ರಭುತ್ವ ಆರ್ಥಿಕ ಚಟುವಟಿಕೆಗಳಿಂದ ಹೆಚ್ಚೆಚ್ಚು ಹಿಂದೆ ಸರಿಯುತ್ತಿದೆ.

ಅದೇನೇ ಇರಲಿ, ಪ್ರಾದೇಶಿಕ ಸಂಕುಚಿತವಾದವನ್ನು ಸಹಿಸಿಕೊಳ್ಳಲು ಇದೊಂದು ನೆವವೂ ಆಗಬಾರದು. ಈ ಜ್ವಾಲೆ ಹರಡದಂತೆ ತಡೆಯಲು ಎಲ್ಲಾ ಜವಾಬ್ದಾರಿಯುತ ರಾಜಕೀಯ ಪಕ್ಷಗಳು, ವ್ಯಕ್ತಿಗಳು ಮುಂದಾಗಬೇಕಾಗಿದೆ.

ಫಾರ್ವರ್ಡ್ ಬ್ಲಾಕ್‌ನ ಅರಾಜಕ ನೀತಿ

ಅದು ಪಶ್ಚಿಮ ಬಂಗಾಳ ರಾಜ್ಯದ ಕೂಚ್ ಬಿಹಾರ್ ಜಿಲ್ಲೆಯ ದಿನ್ಹಟಾ ಎಂಬ ಊರು. ಫಾರ್ವರ್ಡ್ ಬ್ಲಾಕ್ ಪಕ್ಷದ ಕಾರ್ಯಕರ್ತರು 'ಪ್ರತಿಭಟನೆ' ನಡೆಸುತ್ತಿದ್ದಾರೆ. ಪ್ರತಿಭಟನೆ ಎಂದರೆ ಮೆರವಣಿಗೆ, ಧರಣಿ, ಮುತ್ತಿಗೆ, ಘೋಷಣೆಗಳು ಅಲ್ಲ, ಸಹಸ್ರಾರು ಜನ ಸರ್ಕಾರಿ ಕಛೇರಿಯೊಳಕ್ಕೆ ನುಗ್ಗಲು ಯತ್ನಿಸುತ್ತಿದ್ದಾರೆ. ತಮ್ಮ ಪಕ್ಷದ ಸ್ಥಳೀಯ ನಾಯಕರ ಪ್ರಚೋದನೆಯಿಂದ ಉದ್ರಿಕ್ತರಾದ ಕಾರ್ಯಕರ್ತರು ತೀವ್ರ ಹಿಂಸಾಚಾರಕ್ಕೆ ಇಳಿದಿದ್ದಾರೆ. ಕೈಗಳಲ್ಲಿ ಹರಿತವಾದ ಆಯುಧಗಳಿವೆ. ಹಲವರ ಕೈಯಲ್ಲಿ ಸೀಮೆ ಎಣ್ಣೆ ತುಂಬಿದ ಡಬ್ಬಗಳು. ನಾಲ್ಕು ಪೊಲೀಸ್ ವಾಹನಗಳಿಗೆ ಈಗಾಗಲೇ ಬೆಂಕಿಯಿಟ್ಟಿದ್ದಾರೆ. ಬೇಡಿಕೆ ಏನೇ ಇರಲಿ. ಸಾರ್ವಜನಿಕ ಆಸ್ತಿಯಾದ ಸರ್ಕಾರಿ ಕಛೇರಿಗೆ ಬೆಂಕಿ ಇಡಲು ಹೊರಟರೆ, ಸಿಕ್ಕ ಸಿಕ್ಕ ವಾಹನಗಳಿಗೆ ಬೆಂಕಿ ಹಚ್ಚಿದರೆ ಕಾನೂನು-ಸುವ್ಯವಸ್ಥೆ ಕಾಪಾಡಬೇಕಾದ ಜವಾಬ್ದಾರಿ ಹೊತ್ತವರು ಏನು ಮಾಡಬಹುದು. ಸಂಯಮ ವಹಿಸಲು ಮನವಿ, ನಂತರ ಲಾಠಿ ಪ್ರಹಾರ, ಅಶ್ರುವಾಯು ಪ್ರಯೋಗ.... ನಂತರವೂ ಗಲಭೆ ನಿಯಂತ್ರಣಕ್ಕೆ ಬಾರದೇ ಹೋದರೆ... ದುರದೃಷ್ಟಕರವಾದ ಘಟನೆ ನಡೆದೇ ಹೋಯಿತು. ನಾಲ್ಕು ಜನ ಫಾರ್ವರ್ಡ್ ಬ್ಲಾಕ್ ಕಾರ್ಯಕರ್ತರು ಪ್ರಾಣ ಕಳೆದುಕೊಂಡರು. ಒಬ್ಬ ಪೋಲೀಸ್ ಪೇದೆಯ ಪ್ರಾಣ ಹೋಯಿತು.

ವಿರೋಧ ಪಕ್ಷವೇನಲ್ಲ

ಫಾರ್ವರ್ಡ್ ಬ್ಲಾಕ್ ಎಂದರೆ ಅದೇನು ವಿರೋಧ ಪಕ್ಷವಲ್ಲ. ಕಳೆದ ಮೂವತ್ತು ವರ್ಷಗಳಿಂದ ಪಶ್ಚಿಮ ಬಂಗಾಳದಲ್ಲಿ ಜನ ಮನ್ನಣೆ ಪಡೆದು ಅಧಿಕಾರ ನಡೆಸುತ್ತಿರುವ ಎಡರಂಗದ ಒಂದು ಅಂಗಪಕ್ಷವೇ. ಅದು ಈಗಲೂ ಪಶ್ಚಿಮ ಬಂಗಾಳದ ಎಡರಂಗದ ಭಾಗವೇ ಆಗಿದೆ ಮಾತ್ರವಲ್ಲ. ಹಲವು ಮಂತ್ರಿಗಳನ್ನೂ ಹೊಂದಿದೆ.

ಎಡರಂಗವನ್ನು ತೊರೆಯುವುದಿಲ್ಲ, ಅಧಿಕಾರ ಬಿಡುವುದಿಲ್ಲ ಎನ್ನುವವರು ತಾವು ಭಾಗಿಯಾಗಿರುವ ಸರ್ಕಾರದ ವಿರುದ್ಧವೇ ಪ್ರತಿಭಟನೆ ಮಾಡುತ್ತೇವೆ, ಅದೂ ಹಿಂಸಾತ್ಮಕ ಪ್ರತಿಭಟನೆ ನಡೆಸುತ್ತೇವೆ. ನಿರಪರಾಧಿಗಳ ಪ್ರಾಣಕ್ಕೆ ಸಂಚಕಾರ ತರುತ್ತೇವೆ ಎನ್ನುವ ಧೋರಣೆ ತೋರುವುದು ಎಷ್ಟು ಸರಿ ಎನ್ನುವ ಗಂಭೀರ ಪ್ರಶ್ನೆ ಈಗ ಎದುರಾಗಿದೆ. ಪಶ್ಚಿಮ ಬಂಗಾಳದ ಜನತೆ ಫಾರ್ವರ್ಡ್ ಬ್ಲಾಕ್‌ನ ಈ ಧೋರಣೆಯನ್ನು ಒಪ್ಪುವರೇ? ಖಂಡಿತ ಒಪ್ಪಲಾರರು.

ಬಂದ್ ವಿಫಲ-ಏನು ಸೂಚಿಸುತ್ತದೆ : ದುರದೃಷ್ಟಕರ ಗೋಲಿಬಾರ್ ಘಟನೆಯ ಬಗೆಗೆ ಮುಖ್ಯಮಂತ್ರಿ ವಿಷಾದ ವ್ಯಕ್ತಪಡಿಸಿದ್ದಾರೆ. ಸರ್ಕಾರ ಮ್ಯಾಜಿಸ್ಟ್ರೇಟ್ ತನಿಖೆಗೆ ಆದೇಶ ನೀಡಿದೆ. ಫಾರ್ವರ್ಡ್ ಬ್ಲಾಕ್. ಈ ಗೋಲಿಬಾರ್ ಖಂಡಿಸಿ ಮರುದಿನವೇ ಅಂದರೆ ಫೆಬ್ರವರಿ 6 ರಂದು ಪಶ್ಚಿಮ ಬಂಗಾಳ ಬಂದ್ ಕರೆ ನೀಡಿತ್ತು. ಆದರೆ ಬಂದ್ ನಿರೀಕ್ಷಿತ ಜನ ಸ್ಪಂದನ ಸಿಗಲಿಲ್ಲ ಎಂಬುದು ಜನರ ಪ್ರಬುದ್ಧ ನಿಲುವುವಿನ ಪ್ರತಿಫಲನವೇ ಆಗಿದೆ. ಈ ಬಂದ್ ಕರೆಯನ್ನು ತೃಣಮೂಲ ಕಾಂಗ್ರೆಸ್, ಪ್ರದೇಶ ಕಾಂಗ್ರೆಸ್, ಬಿಜೆಪಿ, ಮಾವೋವಾದಿ, ನಕ್ಸಲೀಯರು ಸಿದ್ದಿಖುಲ್ಲಾ ಚೌಧರಿ ನಾಯಕತ್ವದ ಮೂಲಭೂತವಾದಿ ಗುಂಪುಗಳು, ಎಸ್‌ಯುಸಿಐ ಗಳು ಬೆಂಬಲಿಸಿದ್ದವು.

ಇಷ್ಟೆಲ್ಲಾ ಆದಾಗ್ಯೂ, ಪ್ರತಿಭಟನಾಕಾರರು ಬಲಾತ್ಕಾರದ ರಸ್ತೆ ತಡೆ, ರೈಲ್ವೆ ತಡೆಗೆ ಯತ್ನಿಸಿದರೂ ಬಂಗಾಳದ ಜನ ಜೀವನದ ಮೇಲೆ ಹೆಚ್ಚಿನ ಪರಿಣಾಮವನ್ನೇನೂ ಅದು ಉಂಟು ಮಾಡಿಲ್ಲ. ಪಶ್ಚಿಮ ಬಂಗಾಳದ ಕೈಗಾರಿಕಾ ಪ್ರದೇಶಗಳು, ಗಣಿಗಳು, ಟೀ ತೋಟ, ವಿಮಾನನಿಲ್ದಾಣ, ರೈಲು ನಿಲ್ದಾಣಗಳು ಎಲ್ಲವೂ ಎಂದಿನಂತೆ ಕಾರ್ಯನಿರ್ವಹಿಸಿವೆ. ಸರ್ಕಾರಿ ಕಛೇರಿಗಳಲ್ಲಿ ಶೇ.70 ರಷ್ಟು ಹಾಜರಾತಿ ದಾಖಲಾಗಿದೆ.

ಉಲುಬೇರಿಯಾ ಕ್ಷೇತ್ರಕ್ಕೆ ಫಾರ್ವರ್ಡ್ ಬ್ಲಾಕ್ ಪಕ್ಷದವರೇ ಶಾಸಕರು. ಆದರೆ ಅಲ್ಲಿಯೂ ಬಂದ್ ವಿಫಲವಾಗಿತ್ತು. ಹೌರಾ ಕೈಗಾರಿಕಾ ಪ್ರದೇಶವಂತೂ ಸಂಪೂರ್ಣ ಚಟುವಟಿಕೆಯಿಂದ ಕೂಡಿತ್ತು.

ಅದೇ ಕೂಚ್ ಬಿಹಾರ್ ಪ್ರದೇಶದಲ್ಲೇ ಮೊದಲೇ ಒಂದು ವಿದ್ಯಾರ್ಥಿ ಯುವಜನರ ರ್‍ಯಾಲಿ ನಿಗದಿಯಾಗಿತ್ತು. ಬಂದ್ ಕರೆಯಿದ್ದಾಗಲೂ ಅದೇನೂ ರದ್ದಾಗಲಿಲ್ಲ. ಯೋಜಿಸಿದಂತೆ ನಡೆಯಿತು. ಸುಮಾರು 30 ಸಾವಿರ ವಿದ್ಯಾರ್ಥಿ ಯುವಜನರು ಅದರಲ್ಲಿ ಪಾಲ್ಗೊಂಡಿದ್ದಾರೆ. 'ಗೋಲಿಬಾರ್' ಎಂದಾಕ್ಷಣ ಸರುಳವಾದ ತಪ್ಪು ನಿರ್ಧಾರಗಳಿಗೆ ಬರುವಷ್ಟು ದಡ್ಡರಲ್ಲ ಪಶ್ಚಿಮ ಬಂಗಾಳದ ಜನ ಎಂಬುದು ಮುಂದಿನ ದಿನಗಳಲ್ಲಿ ಸಿದ್ಧವಾಗಲಿದೆ.

ರವಿಶಂಕರ್ ಮತ್ತಾತನ ಬದುಕುವ ಕಲೆ ಎಂಬ ಫ್ರಾಡ್



ಆರೋಗ್ಯ, ಆಧ್ಯಾತ್ಮ ಎಂದೆಲ್ಲಾ ಸಾರುವ ರವಿಶಂಕರ್ ಉಪದೇಶಗಳ ವೈಜ್ಞಾನಿಕ ಹೂರಣ ಏನು? ಈತನ ಉಪದೇಶ, ಸಂದೇಶದೊಳಗಿರುವ ವಂಚನೆ ಏನೆಂದು ವಿವರಿಸಿದ್ದಾರೆ ಖ್ಯಾತ ವಿಚಾರವಾದಿ

ಪ್ರೊ. ನರೇಂದ್ರನಾಯಕ್

ರವಿಶಂಕರ್ ಎಂಬ ವ್ಯಕ್ತಿ (ಆತನ ಹೆಸರು ಅದಾದರೂ, ಅದಕ್ಕೆ ಶ್ರೀ ಶ್ರೀ ಗುರೂಜಿ ಮುಂತಾದ ಉಪಾಧಿಗಳನ್ನು ತಗಲಿಸುತ್ತಾನೆ) ನಮ್ಮ ದೇಶದ ಯೋಗ "ಆಧ್ಯಾತ್ಮಿಕ" ರಂಗಗಳಲ್ಲಿ ಬೇರೂರಿರುವ ಅತ್ಯಂತ ಅಪಾಯಕಾರಿ ವ್ಯಾಧಿಗಳಲ್ಲೊಂದು. "ಬದುಕಲು ಕಲಿಸುವ" ಈತನ ಸುದರ್ಶನ ಕ್ರಿಯೆ, ಶ್ರೀ ಶ್ರೀ ಯೋಗ, ಸೋಹಂ ಯೋಗ ಇತ್ಯಾದಿಗಳು ಈ ವಂಚನೆಗೆ ಬೇರೆ-ಬೇರೆ ಹೆಸರುಗಳು. ಕೆಲವು ಹಳಸಲು "ತತ್ವಜ್ಞಾನ"ಕ್ಕೆ ತನ್ನದೇ ಉಪ್ಪು-ಕಾರಗಳನ್ನು ಸೇರಿಸಿ ಈತ ನಡೆಸುತ್ತಿರುವ ಜೀವನ ಕ್ರಿಯಾ ತರಬೇತಿ ಶಿಬಿರಗಳು ಸಮಾಜದ ಮೇಲೆ ನಡೆಯುವ ದಗಲಬಾಜಿಗಳಲ್ಲಿ ಅಗ್ರಸ್ಥಾನದಲ್ಲಿದೆ.

ಈತನ ಥಿಯರಿಗಳು ಏನು? ಮುಖ್ಯವಾಗಿ ನಾವು ಉಸಿರಾಡುವಾಗ ಶ್ವಾಸಕೋಶಗಳಲ್ಲಿರುವ ಸಾಮರ್ಥ್ಯದ ಚಿಕ್ಕ ಅಂಶವನ್ನು ಮಾತ್ರ ಉಪಯೋಗಿಸುತ್ತಿದ್ದೇವೆ. ಇದನ್ನು ಪೂರ್ತಿಯಾಗಿ ಉಪಯೋಗಿಸಿಕೊಂಡರೆ, ಏನೇನೂ ಸಾಧಿಸಬಹುದು. ಮತ್ತೊಂದೇನೆಂದರೆ, ಪ್ರತಿ ಪ್ರಾಣಿಯ ಜೀವನದ ಅವಧಿಯು ನಿರ್ದಿಷ್ಟವಾದ ಉಸಿರಾಟ ಕ್ರಿಯೆಗಳು, ಇದು ಪೂರ್ವ ನಿರ್ಧರಿತ! ತತ್ಕಾರಣ, ಉಸಿರಾಟ ಕ್ರಿಯೆಗಳನ್ನು ಕಡಿಮೆ ಮಾಡಿದರೆ, ಜೀವನಾವಧಿಯು ಹೆಚ್ಚುತ್ತದೆ! ಇವೆರಡು ಮುಖ್ಯವಾದ ಭೋದನೆಗಳಾದ ಕಾರಣ, ಇವುಗಳ ಕುರಿತು ವೈಜ್ಞಾನಿಕವಾಗಿ ವಿಶ್ಲೇಷಿಸುವುದು ಅಗತ್ಯ.

ನಾಯಿ ಅಟ್ಟಿಸಿಕೊಂಡು ಬಂದರೆ... ಬಸ್ಸಿಗಾಗಿ ಓಡಿದರೆ..

ಮೊದಲನೆಯದಾಗಿ, ಉಸಿರಾಟದ ಕ್ರಿಯೆಗಳು ನಮ್ಮ ಮಿದುಳಿನಿಂದ ನಿಯಂತ್ರಿತವಾಗುವಂತಹವು. ರೂಪುಗೊಂಡ ಅತ್ಯುತ್ತಮ, ಅತಿದಕ್ಷ ವಿಧಾನಗಳು. ಇವುಗಳನ್ನು ದೇಹದ 'ಫ್ಯಾಕ್ಟರಿ ಸೆಟ್ಟಿಂಗ್ಸ್' ಎಂದು ಹೇಳಬಹುದು! ಇವುಗಳೊಂದಿಗೆ, ಅನಗತ್ಯವಾಗಿ ಆಟವಾಡುವ ಅಗತ್ಯವಿಲ್ಲವೆಂಬುದು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾದ ವಿಷಯ. ಇದಲ್ಲದೆ, ಸಾಮಾನ್ಯವಾಗಿ ನಾವು ಶ್ವಾಸಕೋಶಗಳ ಸಾಮರ್ಥ್ಯದಲ್ಲಿ ಚಿಕ್ಕ ಅಂಶಗಳನ್ನು ಮಾತ್ರ ಉಪಯೋಗಿಸಿಕೊಳ್ಳುತ್ತೇವೆಂಬುದು ಸತ್ಯ. ಆದರೆ ಅದೇಕೇ? ಅವುಗಳಲ್ಲಿರುವ ಹೆಚ್ಚುವರಿ ಸಾಮರ್ಥ್ಯವೂ ಕೆಲವೊಮ್ಮೆ ಅಗತ್ಯ ಬೀಳುತ್ತದೆ. ಉದಾಹರಣೆಗೆ ನಾಯಿ ಅಟ್ಟಿಸಿಕೊಂಡು ಬಂದರೆ, ಅಥವಾ ಬಸ್ಸಿಗಾಗಿ ಓಡಿದರೆ ಅಥವಾ ಆಮ್ಲಜನಕ




ಯುರೋಪಿಯನ್ ಯೂನಿಯನ್ ಪಾರ್ಲಿಮೆಂಟಿನಲ್ಲಿ ರವಿಶಂಕರರ ಬುರುಡೆ ಬೋಧನೆ

ರಕ್ತದಲ್ಲಿ ಆಮ್ಲಜನಕದ ಪ್ರಮಾಣ ಕಡಿಮೆಯಾದಾಗ, ಅಂಗಾರಾಮ್ಲದಂಶವು ಹೆಚ್ಚಾದಾಗ, ಆಮ್ಲೀಯತೆಯು ಜಾಸ್ತಿಯಾದಾಗ ರಕ್ತನಾಳಗಳಲ್ಲಿರುವ ಗ್ರಾಹಕಗಳು ಇದನ್ನು ಸಂಗ್ರಹಿಸಿ ಮಿದುಳಿಗೆ ಸಂದೇಶಗಳನ್ನು ರವಾನಿಸುತ್ತವೆ. ಇದಲ್ಲದೆ, ಕೆಲವು ಚೋದಕಗಳು ಈ ಕ್ರಿಯೆಗಳನ್ನು ಪ್ರಚೋದಿಸುತ್ತವೆ. ಇವುಗಳು ಸಾವಿರಾರು ಕ್ರಮಿಸಿ ಲಕ್ಷಾಂತರ ವರ್ಷಗಳ ಜೀವವಿಕಾಸ ಕ್ರಿಯೆಯು ಮೂಲಕ ದೇಹಕ್ಕೆ ವಿರಳವಿರುವ ಪ್ರದೇಶಗಳಿಗೆ ಹೋದರೆ ದೇಹದ ಆಮ್ಲಜನಕದ ಕೊರತೆಯನ್ನು ತುಂಬಲು ಉಸಿರಾಟ ಕ್ರಿಯೆಯ ಪ್ರಮಾಣ ಹೆಚ್ಚುತ್ತದೆ, ಹೆಚ್ಚಿನ ಶ್ವಾಸ ತೆಗೆದುಕೊಳ್ಳುತ್ತೇವೆ. ದೇಹದ ಶ್ವಾಸಕೋಶಗಳಲ್ಲಿ ಇಂತಹ ಸಾಮರ್ಥ್ಯವಿಲ್ಲದಿದ್ದಲ್ಲಿ, ಯಾವಾಗಲೂ ನಾವು ಅವುಗಳ ಪೂರ್ತಿ ಸಾಮರ್ಥ್ಯದಷ್ಟು ಶ್ವಾಸ ತೆಗೆದುಕೊಳ್ಳುತ್ತಿದ್ದಲ್ಲಿ ಇಂತಹ ಸಮಯದಲ್ಲಿ ಅಧಿಕ ಗಾಳಿಯನ್ನು ಶ್ವಾಸಕೋಶಗಳಲ್ಲಿ ತುಂಬಿಸಿ ಕೊಳ್ಳುವುದು ಅಸಾಧ್ಯ!

ಚಿರಂಜೀವಿಯಾಗಬಹುದೇ?

ಎರಡನೆಯದು ನಮ್ಮ ಜೀವಿತಾವಧಿಯು ಇಷ್ಟೇ ಶ್ವಾಸಕ್ರಿಯೆಗಳೆಂಬುದು ಮಿಥ್ಯ. ಮನುಷ್ಯನ ಜೀವನಾವಧಿ ಹಲವಾರು ವಿಷಯ ಗಳನ್ನು ಅವಲಂಬಿಸಿರುತ್ತದೆ. ರೋಗ-ರುಜಿನಗಳು, ಜೀವನ ಪದ್ಧತಿ, ಆಹಾರದಲ್ಲಿನ ಪೌಷ್ಟಿಕಾಂಶಗಳು ಇತ್ಯಾದಿ ಮನುಷ್ಯನ ಜೀವಿತಾವಧಿಯನ್ನು ನಿರ್ಧರಿಸುವಂತಹದ್ದು. ತಂತ್ರಜ್ಞಾನವು ಅಭಿವೃದ್ಧಿ ಹೊಂದಿದಂತೆ ಮಾನವ ಕುಲದ ಸರಾಸರಿ ಜೀವಿತಾವಧಿಯು ಹೆಚ್ಚುವುದನ್ನು ನಾವು ನೋಡಿರುತ್ತೇವೆ. ಮಾನವನ ಜೀವನವೆಂದರೆ ಪೂರ್ವ ನಿರ್ಧರಿತ ಸಂಖ್ಯೆಯ ಶ್ವಾಸೋಚ್ಛಾರಗಳಾದಲ್ಲಿ ಇದು ಆಗಬಾರದಿತ್ತು! ಕಡಿಮೆ ಬಾರಿ ಉಸಿರಾಡಿದಷ್ಟು, ಆಯಸ್ಸು ದೀರ್ಘವಾಗುತ್ತದೆಂಬ ವಾದ ಮಾಡುವ ಈ ಪ್ರಾಣಾಯಾಮದ ಪ್ರತಿಪಾದಕರು ಒಂದು ದೀರ್ಘ ಶ್ವಾಸವನ್ನು ತೆಗೆದುಕೊಂಡು, ಅದನ್ನು ಶ್ವಾಸಕೋಶದೊಳಗೆ ತುಂಬಿ ಅಲ್ಲೇ ಇಟ್ಟಲ್ಲಿ ಚಿರಂಜೀವಿಗಳಾಗಬಹುದಲ್ಲವೇ?



ನರೇಂದ್ರ ನಾಯಕ್

ಅರೆ ಬೆಂದ ವಿಜ್ಞಾನ:

ಒಟ್ಟಿನಲ್ಲಿ ಈ ರವಿಶಂಕರ್ ಎಂಬಾತನ ಅರೆ ಬೆಂದ 'ವಿಜ್ಞಾನ' ಈ ರೀತಿಯದ್ದಾದರೆ, ಆತನ ಹಿನ್ನೆಲೆ ಏನು? "ಅತೀಂದ್ರಿಯ ಧ್ಯಾನ" ಎಂಬ ಹೆಸರಿನಲ್ಲಿ ತನ್ನದ್ದೇ ಆದ ಮೋಸಗಳನ್ನು ನಡೆಸಿ, ಮಹರ್ಷಿ ಇಂಟರ್ ನ್ಯಾಷನಲ್ ಯುನಿವರ್ಸಿಟಿ ಇತ್ಯಾದಿಗಳನ್ನು ನಡೆಸುತ್ತಿದ್ದ, ಮಹೇಶ ಯೋಗಿಯ ಆಶ್ರಮದಲ್ಲಿ ಬಾಣಸಿಗನಾಗಿದ್ದ, ರವಿಶಂಕರ್ ಒಮ್ಮಿಂದೊಮ್ಮೆ ಪ್ರಸಿದ್ಧನಾಗಲು ಕಾರಣವೇನು? ನಮ್ಮ ಪರಿಚಿತೆ ವೈದ್ಯೆಯೋರ್ವರು ಸುಮಾರು 3 ದಶಕಗಳ ಹಿಂದೆ ಬೆಂಗಳೂರಿನ ಬಸವನಗುಡಿಯಲ್ಲಿ 'ಇಲ್ಲಿ ಯೋಗ ಕಲಿಸಲಾಗುತ್ತದೆ' ಎಂಬ ಫಲಕವನ್ನು ನೋಡಿ ಒಳಹೋಗಿದ್ದರಂತೆ. ಅಲ್ಲಿ ಗಡ್ಡಧಾರಿ, ಪೀಚಲು ಶರೀರದ, ಕೀರಲು ಧ್ವನಿಯ ಒಬ್ಬ ಯೋಗ ಶಿಕ್ಷಕನಿದ್ದನಂತೆ! ಆತನೇ ಈ ರವಿಶಂಕರ್! ಕೆಲವು ವರ್ಷಗಳ ಹಿಂದೆ, ನನ್ನ ಮಿತ್ರರೋರ್ವರು ತಮ್ಮ ಪರಿಚಿತೆಯೋರ್ವರ ಮನೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಆರ್ಟ್ ಆಫ್ ಲೀವಿಂಗ್ ಎಂಬ ಶಬ್ದಗಳನ್ನು ಉಚ್ಛರಿಸಿದೊಡನೆ, ಆ ಮನೆಯಾಕೆ ರವಿಶಂಕರ್‌ನನ್ನು ಝೂಡಿಸತೊಡಗಿದರು. ಜಗತ್ತಿನಲ್ಲಿ ಅತ್ಯಂತ ದೊಡ್ಡ ಕೃತಘ್ನನೆಂದರೆ ಆತನೆಂದು ಬೈದರು. ಸುಮಾರು ಎರಡು ದಶಕಗಳ ಹಿಂದೆ, ಇವರಿಗೆ ಆತ ಭೇಟಿಯಾಗಿದ್ದನಂತೆ. ಆಗ, ಆತ ಹೆಸರುವಾಸಿಯಾಗಿರಲಿಲ್ಲ. ಇವರು ಕೆಲವು ಪರಿಚಯದವರ ಮೂಲಕ, ಕೆನಡಾ ಮತ್ತು ಅಮೇರಿಕಾದಲ್ಲಿ ವಾಸ ಇತ್ಯಾದಿಗಳ ವ್ಯವಸ್ಥೆ ಮಾಡಿದ್ದರಂತೆ. ನಂತರ, ಈತನು 'ಪ್ರಸಿದ್ಧಿ' ಪಡೆದಾಗ, ಭೇಟಿಯಾಗಲು ಬಯಸಿದ ಇವರನ್ನು ಆತ ಕಡೆಗಣಿಸಿದನೆಂದು ಅವರ ಆರೋಪ.


ಇಂಗ್ಲೀಷ್‌ನಲ್ಲೊಂದು ಗಾದೆಯಿದೆ. ಪ್ರತಿಯೊಬ್ಬ ಪ್ರಸಿದ್ಧ ಗಂಡಸಿನ ಹಿಂದೆ ಓರ್ವ ಸ್ತ್ರೀ ಇರುತ್ತಾಳೆ! ರವಿಶಂಕರ್ 'ಬ್ರಹ್ಮಚಾರಿ'ಯಾದ ಕಾರಣ ಇವರು ಯಾರಿರಬಹುದೆಂದು ಊಹಿಸಬಹುದು. ಅದು ಅವರ ಸಹೋದರಿ ಭಾನುಮತಿ. ಕೆಲವರ ಪ್ರಕಾರ ಈತ ಭೋಳೆ ಸ್ವಭಾವದವ, ಆಕೆ ಆತನನ್ನು ನಿಯಂತ್ರಿಸುತ್ತಾರೆಂದು. ಆದರೆ ಇದು ಅವರ ಕೌಟುಂಬಿಕ ವಿಷಯವಾದ ಕಾರಣ ಖಾಸಗಿ ಬದುಕೆನ್ನಬಹುದು.

'ಬಡತನದಲ್ಲಿಯೇ ಸುಖ' : ಮಹಾನ್ ಉಪದೇಶ:

ಈ ರವಿಶಂಕರ್ ಎಂಬ ವ್ಯಕ್ತಿಯ ವೈಚಾರಿಕ ಹಿನ್ನೆಲೆಯೇನು? ಆರ್ಟ್ ಆಫ್ ಲೀವಿಂಗ್ ಬೋಧಿಸುವುದೇನು? ಪ್ರಾಣಾಯಾಮ, ಯೋಗಗಳೊಂದಿಗೆ ಜೀವನದ ಫಿಲಾಸಫಿ ಕೂಡಾ! ಶ್ರೀಮಂತ ತನ್ನ ಐಷಾರಾಮಿಯ ಬದುಕಿನಲ್ಲಿದ್ದು ತೃಪ್ತಿಯಿಂದಿರಬೇಕಾದರೆ, ಬಡವನು ತನ್ನ ಬಡತನದಲ್ಲಿಯೇ ಸುಖವನ್ನು ಕಾಣಬೇಕು. ಬಂಡವಾಳಶಾಹಿಗಳ ಪ್ರಮುಖ ವಾದವಿದು. ನಮ್ಮಲ್ಲಿಯೂ ಕರ್ಮವೆಂಬ ವಾದವನ್ನು ಬೆಂಬಲಿಸುವುದು ಇದೇ! ಸುಖ ಸಂಪತ್ತಿನಲ್ಲಿ ತಮ್ಮನ್ನೇ ಮೈಮರೆತಿರುವವರಿಗೆ, ತಮ್ಮ

ಪುಟ 12 ಕ್ಕೆ

'ಭಿಕ್ಷೆ ಎತ್ತಿ' ಎಂಬ ಪರಿಹಾರ



'ಭಿಕ್ಷೆ ಎತ್ತಿ' ಎಂಬ ಪರಿಹಾರ : ಸಾರ್ವಜನಿಕ ರಂಗದಲ್ಲಂತೂ ಈತನ ಹೇಳಿಕೆಗಳು ತೀವ್ರ ಖಂಡನೆಗೆ ಗುರಿಯಾದವು. ಉತ್ತರ ಭಾರತದ ಕೆಲವು ಪ್ರಜ್ಞಾವಂತ ನಾಗರೀಕರು ತಮ್ಮ ಲೇಖನಗಳಲ್ಲಿ ಇದನ್ನೇ ಮಾಡಿದ್ದಾರೆ. ಈತನ 'ಅಳಜ್ಞಾನ'ದ ಮಹಾಸಾಗರದಿಂದ ಎದ್ದು ಬಂದ ನುಡಿಮುತ್ತುಗಳನ್ನು ಗಮನಿಸಿ.

1. ರೈತರ ಆತ್ಮಹತ್ಯೆಗಳ ಬಗ್ಗೆ-"ಆರ್ಥಿಕ ಮುಗ್ಗಟ್ಟಿನಿಂದ ಬಳಲುವವರು ತಮ್ಮ ಕಷ್ಟ-ಕಾರ್ಪಣ್ಯ ಗಳಲ್ಲೇ ಸುಖವಿದೆಯೆಂಬುವನ್ನು ಅರ್ಥಮಾಡಿಕೊಳ್ಳಬೇಕು".

2. ರೈತರ ಆತ್ಮಹತ್ಯೆಗಳ ಬಗ್ಗೆ-"ಆರ್ಥಿಕ ಮುಗ್ಗಟ್ಟಿನಿಂದ ತೊಂದರೆಗೀಡಾದವರು ಭಿಕ್ಷೆ ಬೇಡಿಯಾದರೂ ಜೀವಿಸಲು ಕಲಿಯಬೇಕು. ಭಿಕ್ಷೆ ಬೇಡುವುದರಲ್ಲೇನೂ ತಪ್ಪಿಲ್ಲ. ಬುದ್ಧ, ಮಹಾವೀರರೂ ಭಿಕ್ಷೆ ಎತ್ತಿ ಜೀವನ ಸಾಗಿಸಿದ್ದಾರೆ".

3. ರೈತರ ಆರ್ಥಿಕ ಮುಗ್ಗಟ್ಟಿನ ಬಗ್ಗೆ -"ಭಾರತೀಯ ರೈತ ಆಲಸಿಯಾದ ಕಾರಣ, ಆತ ಆರ್ಥಿಕ ಮುಗ್ಗಟ್ಟಿನಲ್ಲಿದ್ದಾನೆ"!

ಈ ಹೇಳಿಕೆಗಳಿಗೆ ಬಂದ ಪ್ರತಿಕ್ರಿಯೆಗಳಂತೂ ತೀಕ್ಷ್ಣ. ಒಬ್ಬರು ಕೇಳಿದ್ದಾರೆ 'ಮುಖದ ಮೇಲೆ ಕೃತಕ ನಗುವನ್ನು ಸೂಸುವ, ಇತರರ ದುಡಿಮೆಯಿಂದ ತನ್ನ ಐಷಾರಾಮಿಯ ಜೀವನ ನಡೆಸುವ ಈ ವ್ಯಕ್ತಿ ಒಂದು ದಿನವಾದರೂ ಮೈ ಬಗ್ಗಿಸಿ ದುಡಿದಿದ್ದಾನೆಯೇ?' ಇನ್ನೊಬ್ಬರು ಕೇಳಿದ್ದರು 'ಎಲ್ಲಾ ರೈತರಲ್ಲಿ ಭಿಕ್ಷೆ ಬೇಡಲು ಅವರೇನು ಕೃತಕ ನಗೆ ಬೀರಿ ಜೀವನ ಕಲೆಯೆಂಬ ವಂಚನೆಯಿಂದ ಜೀವನ ಸಾಗಿಸುವವರೇ?' ನನ್ನ ಅಭಿಪ್ರಾಯವೇನೆಂದರೆ, ಈ ರವಿಶಂಕರ್ ವಿದೇಶಗಳಿಗೆ ಹೋಗಿ, ಅಲ್ಲಿ ತಾನು ನಡೆಸುವ ಶಾಲೆ, 'ಗ್ರಾಮ ಸುಧಾರಣೆ' ಇತ್ಯಾದಿಗಳಿಗೆ ಭಿಕ್ಷೆ ಎತ್ತಿ ಬಂದು ತನ್ನ ಸಂಪತ್ತನ್ನು ಹೆಚ್ಚಿಸಿದಂತೆ ಇವರೂ ಮಾಡಬೇಕೇ? ○

ಇಲ್ಲಿ ನಿಸರ್ಗ ಸಂಪತ್ತನ್ನು ಮಿತಿಮೀರಿ ತೋಡುತ್ತಿದ್ದಾರೆ ಮಾತ್ರವಲ್ಲ ಜನರ ಮನೆ, ಜೀವಕ್ಕೆ ಅಪಾಯ ತಂದಿಟ್ಟಿದ್ದಾರೆ.



ಕೋಲಾರ : ಕಲ್ಲುಗಣಿಗಾರಿಕೆ ಅಕ್ರಮ

ಇದೇನೋ ಭೂಕಂಪ ಪೀಡಿತ ವಲಯವೇನೂ ಅಲ್ಲ. ಆದರೆ ಭೂಕಂಪನ ಅನುಭವ ನಿರಂತರ. ಮನೆ, ಪಂಪ್‌ಹೌಸ್ ಇತ್ಯಾದಿ ಕಟ್ಟಡಗಳಿಗೆಲ್ಲ ಒಂದಲ್ಲ ಒಂದು ರೀತಿಯ ಬಿರುಕು. ಮನೆಯ ದೂಲ ಯಾವಾಗ ಬೀಳುವುದೋ ಗೋಡೆ ಯಾವಾಗ ಕುಸಿಯುವುದೋ ಎಂಬ ಆತಂಕದಲ್ಲಿ ನಿದ್ರೆಗಳಿಲ್ಲದ ರಾತ್ರಿಗಳನ್ನು ಕಳೆಯಬೇಕಾದ ಪ್ರಸಂಗ. ಜೀವವನ್ನು ಅಂಗೈಯಲ್ಲಿ ಹಿಡಿದೇ ದಿನ ನೂಕಬೇಕಾದ ಸನ್ನಿವೇಶ.

ಇದು ಕರ್ನಾಟಕ ರಾಜಧಾನಿ ಬೆಂಗಳೂರಿನಿಂದ ಕೇವಲ 50-60 ಕಿ.ಮೀ. ಸಮೀಪದಲ್ಲಿರುವ ನರಸಾಪುರ ಹೋಬಳಿಯ ಸುಮಾರು ಎರಡು ಡಜನ್ ಹಳ್ಳಿಗಳ ಜನತೆಯ ನಿತ್ಯ ವ್ಯಥೆ. ಪ್ರಕೃತಿಯನ್ನು ಲೂಟಿ ಮಾಡಿ ಸುಲಭವಾಗಿ ಬಲುಬೇಗನೆ ಕೋಟಿಗಟ್ಟಲೆ ರೂಪಾಯಿ ಹಣ ಸಂಪಾದಿಸಬೇಕೆಂಬ ಕೆಲವೇ ಕೆಲವು ಗಣಿ ಮಾಲೀಕರ ದುರಾಸೆಯೇ ಈ ಪರಿಸ್ಥಿತಿಗೆ ಕಾರಣ. ಜನಪ್ರತಿನಿಧಿಗಳ ಜಾಣ ಕಿವುಡು, ಅಧಿಕಾರಿಗಳ ಲಂಚದ ಹಪಾಹಿತನಗಳಿಂದ ಈ ಸ್ಥಿತಿ ಮತ್ತಷ್ಟು ಕೆಟ್ಟು ಹೋಗಿದೆ.


ಕಂಪನ

ಕಲ್ಲು ಗಣಿಗಾರಿಕೆಯಲ್ಲಿ ಕಾನೂನುಬಾಹಿರವಾಗಿ ಭಾರಿ ಪ್ರಮಾಣದ ಸ್ಫೋಟಕಗಳ ಬಳಕೆಯೇ ಸಮಸ್ಯೆ ಉಲ್ಬಣವಾಗಲು ಮುಖ್ಯ ಕಾರಣ. ಇದರ ಜೊತೆ ಈ ಪ್ರದೇಶದಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿರುವ ಜಲ್ಲಿ ಕ್ರಷರ್‌ಗಳು ಜನಜೀವನವನ್ನು ಕಂಗೆಡಿಸಿವೆ.

ಈ ಎಲ್ಲಾ ದುಸ್ಥಿತಿಯ ವಿರುದ್ಧ ಅಧಿಕಾರಿಗಳು, ಜನಪ್ರತಿನಿಧಿಗಳಿಗೆ ದೂರು ಸಲ್ಲಿಸಿ ಸಲ್ಲಿಸಿ ಸುಸ್ತಾಗಿರುವ ಈ ಭಾಗದ ಜನರು ಈಗ ಸೆಟೆದು ನಿಂತಿದ್ದಾರೆ.. ದುರುಳ ಗಣಿ ಮಾಫಿಯಾ ವಿರುದ್ಧ, ದುಷ್ಟ ಭ್ರಷ್ಟ ಅಧಿಕಾರಿಗಳಾದವರ ವಿರುದ್ಧ... ಕೆಂಬಾವುಟದ ನೇತೃತ್ವದಲ್ಲಿ.. ಕರ್ನಾಟಕ ಪ್ರಾಂತ ರೈತ ಸಂಘದ ಸಮರ್ಥ ನಾಯಕತ್ವದಲ್ಲಿ. ಹಣಬಲ-ತೋಳ್ಬಲ... ಪ್ರಾಣ ಬೆದರಿಕೆಯ ನಡುವೆಯೂ ಬೃಹತ್ ಬಂಡೆಗಳ ನಡುವಿನಿಂದ ಹೋರಾಟದ ಕೆಚ್ಚು ಮೂಡಿ ಬಂದಿದೆ.

ಮಲ್ಲಸಂದ್ರ, ಕರುಡುಬಂಡೆ, ಹೊಸಹಳ್ಳಿ, ಉದ್ದಪನಹಳ್ಳಿ, ಚಾಕಾರಸನಹಳ್ಳಿ, ಬೈರಸಂದ್ರ, ಬೆಳ್ಳೂರು, ಕರುಡಬಂಡೆ, ರಾಮಸಂದ್ರ, ಚಿಕ್ಕಸಂದ್ರ, ಕರಿನಾಯಕನಹಳ್ಳಿ, ಲಕ್ಷ್ಮೀಸಾಗರ, ಹಪ್ಪಸಂದ್ರ, ಜೋಡಿ ಕೃಷ್ಣಾಪುರ, ಬಾಜಿಕಲ್ಲಹಳ್ಳಿ, ಭುವನಹಳ್ಳಿ, ವಲ್ಲಬ್ಬಿ, ದಿನ್ನೇಹೊಸಹಳ್ಳಿ ಕುರ್ಕಿ, ಅಚ್ಚಟ್ಟನಹಳ್ಳಿ, ಬೆಳಮಾರನಹಳ್ಳಿ, ಈ ರೀತಿಯಾಗಿ ವೇಮಗಲ್ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಗೆ ಬರುವ ಹಳ್ಳಿಗಳು ಕಲ್ಲುಗಣಿಗಾರಿಕೆ ಹಾಗೂ ಕ್ರಷರ್‌ಗಳ ಆರ್ಭಟದಿಂದ ನಲುಗುತ್ತಿವೆ.

ವಿಷಯ ತಿಳಿದು ಈ ಪ್ರದೇಶದಲ್ಲಿ ಸುತ್ತಾಡಿದ 'ಜನಶಕ್ತಿ' ಗೆ ಕಂಡದ್ದು ಕೇಳಿದ್ದು ಹಾನಿಗೊಳಗಾದ ಮನೆಗಳು, ಆತಂಕಗೊಂಡ ಜನ ಸಮೂಹದ ಆಕ್ರೋಶದ ಮಾತುಗಳು.



ಗೋಡೆಯಲ್ಲಿನ ಸೀಳು

ಸಂಜೆವರೆಗೆ ಸೌಮ್ಯ ಪ್ರಮಾಣದಲ್ಲಿ ನಡೆಯುವ ಸ್ಫೋಟಕ ಕಾರ್ಯ ರಾತ್ರಿಯಾಗುತ್ತಿದ್ದಂತೆ ಭೀಕರ ಸ್ವರೂಪ ತಾಳುತ್ತದೆ. ರಾತ್ರಿ 8 ರಿಂದ ಸುಮಾರು ಮಧ್ಯರಾತ್ರಿವರೆಗೆ ಕಿವಿಗಡಚಿಕ್ಕುವ ಸ್ಫೋಟಕದೊಂದಿಗೆ ನೆಲಕಂಪಿಸಿದ ಅನುಭವವಾಗುತ್ತದೆ ಎಂದು ಗ್ರಾಮಸ್ಥರು ವಿವರಿಸುತ್ತಾರೆ.

"ಮನೆಯಲ್ಲಿಟ್ಟ ಸಾಮಾನುಗಳೆಲ್ಲ ಕೆಳಗೆ ಬೀಳುತ್ತವೆ. ಭೂಕಂಪವೇ ಆದ ಹಾಗೆ ಆಗುತ್ತದೆ" ಎಂದವರು ಮಲ್ಲಸಂದ್ರ ಗ್ರಾಮದ ರೈತ ಮಹಿಳೆ ರಾಧಮ್ಮ. "ನೀವುಹೇಗೆ ಇಲ್ಲಿ ವಾಸ ಮಾಡುತ್ತೀರಿ ಎಂದು ಮನೆಗೆ ಅಪರೂಪಕ್ಕೆ ಬರುವ ಅತಿಥಿಗಳು ಪ್ರಶ್ನಿಸುತ್ತಾರೆ" ಎಂದರು ಆಕೆ.

ಮನೆಗೋಡೆ, ಚಾವಣಿ ಬಿರುಕು ಬಿಟ್ಟಿರುವುದರಿಂದ ಮಳೆ ಬಂದಾಗ ಸೋರುತ್ತದೆ. ನಾಲ್ಕೈದು ಬಾರಿ ಮನೆ ರಿಪೇರಿ ಮಾಡಿಸಿದ್ದಾಯ್ತು. ಆದರೂ ಏನೂ ಪ್ರಯೋಜನವಿಲ್ಲ ಎಂಬುದು ಗ್ರಾಮದ ಶ್ರೀರಾಮಪ್ಪ.

ಇದೇ ಗ್ರಾಮದಲ್ಲಿ ರಾಜಪ್ಪ ಎಂಬುವವರು ನಾಲ್ಕೈದು ಲಕ್ಷ ರೂಪಾಯಿ ವೆಚ್ಚದಲ್ಲಿ ಕಟ್ಟಿಸಿದ ಹೊಸಮನೆ ಆಗಲೇ ಬಿರುಕು ಬಿಟ್ಟಿರುವುದರಿಂದ ಅವರು ಗೃಹ ಪ್ರವೇಶವನ್ನೂ ಮಾಡಿಲ್ಲ ಮನೆಯನ್ನು ಹಾಗೆಯೇ ಬಿಟ್ಟು ಬಿಟ್ಟಿದ್ದಾರೆ.

ಕರಾಳ ಹಸ್ತ

ಕಲ್ಲು ಗಣಿಗಾರಿಕೆಗೆ ಸರ್ಕಾರದಿಂದ ಅನುಮತಿ ಪಡೆದಿರುವುದು ಒಂದೋ ಎರಡೋ ಗುಂಟೆ ಪ್ರದೇಶಗಳಾದರೆ ಗಣಿ ಮಾಫಿಯಾದ ಕರಾಳ ಹಸ್ತ ಎಕರೆಗಟ್ಟಲೆ ಪ್ರದೇಶಕ್ಕೆ ಹರಡಿಕೊಂಡಿದೆ. ಇದೊಂದು ಅಕ್ರಮವಾದರೆ ಪ್ರಬಲ ವಿನಾಶಕಾರಿ ಸ್ಫೋಟಕಗಳನ್ನು ಬಳಸುವುದು ಇನ್ನೊಂದು ಅಕ್ರಮವಾಗಿದೆ. ಈ ರೀತಿಯ ಚಟುವಟಿಕೆಗಳಿಂದ ಗಣಿ ಮಾಲಿಕರು ಜನರ ಜೀವನದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ.

ಸ್ಫೋಟಕದ ಬಳಕೆಯಿಂದಾಗಿ ಕಲ್ಲು ಚೂರುಗಳು ಕ್ಷಿಪಣಿಗಳಂತೆ ದೂರ ಸಿಡಿಯುವುದರಿಂದ ಈ ಭಾಗದಲ್ಲಿ ಜನರ ಓಡಾಟವೂ ಕಷ್ಟವಾಗಿದೆ. ದನಕರುಗಳನ್ನು ಮೇಯಿಸಲು ಹೋಗುವುದೂ ದುಸ್ತರವಾಗಿದೆ. ಅಲ್ಲದೆ ಕಲ್ಲುಗಳು ಹೊಲಗದ್ದೆಗಳಲ್ಲಿ ಬೀಳುವುದರಿಂದ ಕೃಷಿ ಚಟುವಟಿಕೆಗಳೂ ತೊಂದರೆ ಎದುರಿಸುವಂತಾಗಿದೆ.

ಇದು ಒಂದೆಡೆಯಾದರೆ ರಾಷ್ಟ್ರೀಯ ಹೆದ್ದಾರಿ-4ರ ಅಕ್ಕಪಕ್ಕದಲ್ಲೇ ತಲೆಯೆತ್ತಿರುವ ಜಲ್ಲಿ ಕ್ರಷರ್‌ಗಳ ಧೂಳು ಈ ಪ್ರದೇಶದ ಜನಜೀವನವನ್ನು ಕಂಗೆಡಿಸಿದೆ. ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವಾಗಿ ಅನೇಕ ರೋಗರುಜಿನಗಳು ಹುಟ್ಟಿಕೊಳ್ಳುತ್ತಿವೆ.

ರಾಷ್ಟ್ರೀಯ ಹೆದ್ದಾರಿಯಿಂದ 250 ಮೀಟರ್ ಅಂತರದಲ್ಲಿ ಇಂಥ ಘಟಕಗಳನ್ನು ಸ್ಥಾಪಿಸಬಾರದೆಂಬ ನಿಯಮವಿದೆ. ಆದರೂ ಈ ನಿಯಮವನ್ನು ಉಲ್ಲಂಘಿಸಿರುವುದು ಕೋಲಾರ ಲೋಕಸಭೆ ಕ್ಷೇತ್ರದ ಸದಸ್ಯರೂ ಕೇಂದ್ರದ ಹೆದ್ದಾರಿ ಖಾತೆ ಸಚಿವರೂ ಆದ ಕೆ.ಹೆಚ್.ಮುನಿಯಪ್ಪರ ಕಣ್ಣಿಗೆ ಕಾಣಿಸದಿರುವುದು ನಿಜಕ್ಕೂ ಆಶ್ಚರ್ಯಕರ. ಇದು ಜಾಣ ಕುರುಡುತನ ಅಲ್ಲದೆ ಬೇರೇನೂ ಅಲ್ಲ.

ಅಮಾನವೀಯ ವರ್ತನೆ

'ಇನ್ನೂ ಯಾರು ಸತ್ತಿಲ್ಲವಲ್ಲ. ಹಾಗಾದಾಗ ನೋಡಿಕೊಂಡರಾಯಿತು' ಹೀಗೆಂದು ಹೇಳಿದವರು ಕಳೆದ ವಿಧಾನಸಭೆ ಕ್ಷೇತ್ರದಲ್ಲಿ ವೇಮಗಲ್ ಶಾಸಕರಾಗಿದ್ದ ಸಿ.ಕೃಷ್ಣಭೈರೇಗೌಡ. ಕಲ್ಲುಗಣಿಗಾರಿಕೆ ಹಾಗೂ ಕ್ರಷರ್‌ನಿಂದಾಗುತ್ತಿರುವ ಅನಾಹುತದ ಅಳಲನ್ನು ತೋಡಿಕೊಂಡ ಜನರಿಗೆ ಸಾಂತ್ವನ ಹೇಳುವ ಸಮಸ್ಯೆಗೆ ಪರಿಹಾರ ಮಾರ್ಗ ಕಂಡುಕೊಳ್ಳುವ ಬದಲು ಜನಪ್ರತಿನಿಧಿಯೊಬ್ಬರು ಈ ರೀತಿ ಹೇಳಿದ್ದು ಅಮಾನವೀಯ ವರ್ತನೆಯಲ್ಲದೆ ಇನ್ನೇನು? ಈ ಮಾತನ್ನು ಜನರು ಈಗಲೂ ನೆನಪಿಸಿಕೊಂಡು ಆಕ್ರೋಶ ವ್ಯಕ್ತಪಡಿಸುತ್ತಾರೆ.



ಮನೆಯ ಬಿರುಕು

ವಿಶ್ವಾಸ್

ಯಾರೂ ಈ ಜನಸಮೂಹದ, ಪ್ರಮುಖವಾಗಿ ರೈತಾಪಿ ವರ್ಗದ ಸಹಾಯಕ್ಕೆ ಬಾರದಿದ್ದಾಗ ಅವರಲ್ಲಿ ಸ್ಥೈರ್ಯ ತುಂಬಿಸಿ ಹೋರಾಟಕ್ಕೆ ಸಜ್ಜುಗೊಳಿಸಿದ್ದು ಪ್ರಾಂತ ರೈತ ಸಂಘದ ಕೋಲಾರ ತಾಲ್ಲೂಕು ಸಮಿತಿ.

ಸಮಿತಿಯ ಅಧ್ಯಕ್ಷ ಹೋಳೂರು ಶಂಕರ್, ಜಿಲ್ಲಾ ಸಮಿತಿ ಸದಸ್ಯ ಕುರ್ಕಿ ದೇವರಾಜ್ ಮೊದಲಾದವರ ಸತತ ಪರಿಶ್ರಮದ ಫಲವಾಗಿ 2008 ಜನವರಿ 30 ರಂದು ರಾಮಚಂದ್ರ ಗೇಟ್‌ನಿಂದ ಜಿಲ್ಲಾ ಕೇಂದ್ರ ಕೋಲಾರದವರೆಗೆ ಕಾಲ್ನಡಿಗೆ ಜಾಥಾ ನಡೆಸಲಾಯಿತು. ಅನೇಕ ಮಹಿಳೆಯರು ಸೇರಿದಂತೆ ನೂರಾರು ಜನರು ಅತ್ಯುತ್ಸಾಹದಿಂದ ಸುಮಾರು 20 ಕಿ.ಮೀ. ಕಾಲ್ನಡಿಗೆ ಜಾಥಾದಲ್ಲಿ ಪಾಲ್ಗೊಂಡರು.

ಎಂಜಲು ಕಾಸಿಗೆ ಕೈಯೊಡ್ಡಬೇಡಿ

ಜಾಥಾವನ್ನು ಉದ್ಘಾಟಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಭ್ರಷ್ಟ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

'ಕಲ್ಲು ಗಣಿ ಮಾಲೀಕರು ಎಸೆಯುವ ಎಂಜಲು ಕಾಸಿಗೆ ಕೈಯೊಡ್ಡಬೇಡಿ. ಪ್ರಾಮಾಣಿಕವಾಗಿ ಕೆಲಸ ಮಾಡಿ ಜನರ ಹಿತವನ್ನು ಆರೋಗ್ಯವನ್ನು ಕಾಪಾಡಿ' ಎಂದವರು ಹೇಳಿದರು. ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳದಿದ್ದರೆ ರೈತ ಸಂಘ ಈ ವಿಷಯವನ್ನು ರಾಜ್ಯಾದ್ಯಂತ ಕೈಗೆತ್ತಿಕೊಳ್ಳಲೂ ಹಿಂಜರಿಯುವುದಿಲ್ಲ. 'ರಾಜಭವನ್ ಚಲೋ' ಚಳುವಳಿಯನ್ನು ಕೂಡ ಹಮ್ಮಿಕೊಳ್ಳಲಾಗುತ್ತದೆ ಎಂದು ಎಚ್ಚರಿಸಿದರು.

ರೈತ ಸಂಘದ ಜನಜಾಗೃತಿ ಕಾರ್ಯಕ್ರಮಕ್ಕೆ ಗ್ರಾಮಗಳ ಜನರು ಸ್ಪಂದಿಸುತ್ತಿದ್ದ ರೀತಿಯಿಂದ ಕಂಗಾಲಾದ ಗಣಿ ಮಾಲೀಕರು ಹಾಗೂ ಕ್ರಷರ್ ಮಾಲೀಕರು ಹೋರಾಟಗಾರರ ಸ್ಥೈರ್ಯ ಉಡುಗಿಸುವ ಉದ್ದೇಶದಿಂದ ಬಾಡಿಗೆ ಬಂಟರನ್ನು ಕರೆಸಿ ಜಾಥಾ ಆರಂಭದ ಸ್ಥಳದಲ್ಲೇ ಧರಣಿಯನ್ನು ವ್ಯವಸ್ಥೆಗೊಳಿಸಿದ್ದರು.


ಕನ್ನಡ ಕೂಲಿ ಕಾರ್ಮಿಕರ ಹೋರಾಟ ವೇದಿಕೆ ಎಂಬ ಸಂಘದ ನೇತೃತ್ವದಲ್ಲಿ ಧರಣಿ ನಡೆಸಿ ರೈತ ಸಂಘದ ವಿರುದ್ಧ ಅಪಪ್ರಚಾರ ಮಾಡಲಾಯಿತು. ಗಣಿಗಾರಿಕೆ, ಕ್ರಷರ್‌ಗಳನ್ನು ಸ್ಥಗಿತಗೊಳಿಸುವುದರಿಂದ ಬಡವರು, ದಲಿತರು, ಕಾರ್ಮಿಕರ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿದಂತಾಗುತ್ತದೆ ಎಂದೆಲ್ಲ ಬಡಬಡಿಸಿದರು. ರೈತ ಸಂಘದ ಇತಿಹಾಸ, ಹಿನ್ನೆಲೆ, ಉದ್ದೇಶ ಅರಿಯದ ಧನದಾಹಿ ಧೂರ್ತರು ನಡೆಸುವ ಇಂಥ ಅಪಪ್ರಚಾರ ಬೆದರಿಕೆಗೆ ಜಗ್ಗದೆ ಹೋರಾಟವನ್ನು ಮುಂದುವರಿಸಲಾಗಿದೆ. ಮಾಲೀಕರಿಂದ ಹಣ ಕೀಳುವ ಬ್ಲಾಕ್‌ಮೇಲ್ ತಂತ್ರವಾಗಿ ರೈತ ಸಂಘದ ನಾಯಕರು ಚಳುವಳಿ


ಪುಟ 12ಕ್ಕೆ

ಅಳುವುದೋ ನಗುವುದೋ...

'ನರಸಾಪುರ ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ ಮನೆಗಳು ಬಿರುಕು ಬಿಟ್ಟಿರುವುದಕ್ಕೂ ಕಲ್ಲು ಗಣಿಗಳಲ್ಲಿನ ಸ್ಫೋಟಕ್ಕೂ ಯಾವುದೇ ಸಂಬಂಧವಿಲ್ಲ' ಇದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಅಧಿಕಾರಿ ಎಸ್.ಆರ್. ನಾಗರಾಜ್ ಅವರ ಹೇಳಿಕೆ. 'ಸಾಕಷ್ಟು ಪರೀಕ್ಷೆಗಳನ್ನು ನಡೆಸಲಾಗಿದೆ. ಸ್ಫೋಟಕಗಳಿಗೂ ಮನೆ ಹಾನಿಗೂ ಸಂಬಂಧವಿರುವುದು ಅದರಿಂದ ಸಾಬೀತಾಗಿಲ್ಲ' ಎಂದು ಅವರ ಹೇಳಿಕೆ. 'ದ ಹಿಂದೂ'ಪತ್ರಿಕೆಯಲ್ಲಿ ಪ್ರಕಟವಾಗಿದೆ. ಮನೆಗಳು ಹಳೆಯದಾಗಿರುವುದು ಹಾಗೂ ಕಳಪೆ ಗುಣಮಟ್ಟದಿಂದ ಹೀಗಾಗಿರಬಹುದು ಎಂದೂ ಅವರು ಹೇಳಿದ್ದಾರೆ.

ಹಿರಿಯ ಅಧಿಕಾರಿಯ ಈ ವಿವರಣೆಯಿಂದಾಗಿ ಅಳಬೇಕೋ ನಗಬೇಕೋ ಒಂದೂ ಅರ್ಥ ವಾಗುವುದಿಲ್ಲ ಎಂದು ಜನರು ಆಡಿಕೊಳ್ಳುತ್ತಿದ್ದಾರೆ.





ನೀಲಾ ಕೆ.

ಮಗ ಬ್ಯಾರಿಸ್ಟರ್ ಆಗಲೆಂದು ಬಸು ಅವರ ತಂದೆ ಡಾ: ನಿಶಿಕಾಂತ ಮಗನನ್ನು ಇಂಗ್ಲೆಂಡಿಗೆ ಕಳಿಸಿದರೆ, ವಾಪಾಸಾದದ್ದು ಮಾರ್ಕ್ಸ್‌ವಾದಿ ಕಾಮ್ರೇಡ್ ಜ್ಯೋತಿಬಸು. ಬ್ರಿಟೀಷ್ ಸಾಮ್ರಾಜ್ಯಶಾಹಿಯ ವಿರುದ್ಧ ರಣಕಹಳೆ ಮೊಳಗಿಸಲು ಸನ್ನದ್ಧರಾಗಿ ಭಾರತಕ್ಕೆ ಕಾಲಿಟ್ಟ ಬಸು ಈ ಹೊತ್ತಿನವರೆಗೂ ದುಡಿವ ಜನತೆಯ ಸಿದ್ಧಾಂತವನ್ನು ಅತ್ಯಂತ ವಿಧೇಯತೆ ಮತ್ತು ವಿನಯದಿಂದ ಜಾರಿ ಮಾಡುವ ಶಿಸ್ತಿನ ಸಿಪಾಯಿಯೇ ಹೌದು.

ದಣಿವರಿಯದ ಜಂಗಮ

ಪಶ್ಚಿಮ ಬಂಗಾಳದಲ್ಲಿ ಇದ್ದಷ್ಟು ದಿನವೂ ನನಗೊಂದು ಪ್ರಶ್ನೆ ಕಾಡುತ್ತಲೇ ಇತ್ತು. ನಂದಿಗ್ರಾಮವನ್ನು ಹೊತ್ತಿಸಿ, ಎಡರಂಗ ಸರ್ಕಾರವನ್ನು ಮುಗಿಸಿ ಬಿಡುವ ಎಲ್ಲಾ ಕುತಂತ್ರಗಳನ್ನು ಹೆಣೆದ ಮಾಧ್ಯಮಗಳ ಮಾತನ್ನು ಪ.ಬಂಗಾಳದ ಬಹುಸಂಖ್ಯಾತ ಜನತೆ ಏಕ ಪಕ್ಷೀಯವಾಗಿ ನಂಬುತ್ತಿಲ್ಲ. ಬದಲಿಗೆ ಇಂಥ ಬಹಳಷ್ಟು ಆಟಗಳನ್ನು ನೋಡಿ ಪಳಗಿದವರಂತೆ ವರ್ತಿಸುವುದು ಹೇಗೆ ಸಾಧ್ಯ? ಎಡರಂಗವನ್ನು ವಿರೋಧಿಸುವ ಶಕ್ತಿಗೆ ಎದುರಾಗಿ ಜನಪರ ದನಿಗಳೂ ಇಮ್ಮಡಿ ಶಕ್ತಿಯಿಂದ ಸಜ್ಜಾಗುವ ಪರಿ ನನ್ನಲ್ಲಿ ಬೆರಗು ಮತ್ತು ಪ್ರಶ್ನೆ ಹುಟ್ಟು ಹಾಕಿತ್ತು.

ದಣಿವರಿಯದ ಜಂಗಮ


ನನ್ನೆಲ್ಲ ಕುತೂಹಲಕ್ಕೆ ಪ್ರಶ್ನೆಗೆ ಉತ್ತರವಾಗಿ 'ಸುರಭಿ ಬ್ಯಾನರ್ಜಿ' ಬರೆದ 'ಜ್ಯೋತಿಬಸು' ಜೀವನ ಚರಿತ್ರೆಯ ಪುಟಗಳು ಬಿಚ್ಚಿಕೊಳ್ಳತೊಡಗಿದವು. ಆರ್ಕೈ ಹುಡುಗಿ ಉರುಫ್ ರಾಹು ಅವರು ಕನ್ನಡಿಸಿದ ಕೈ ಬರಹದ ಪುಸ್ತಕದ ಮುಂದೆ ಒಂದರ್ಥದಲ್ಲಿ ತಪಸ್ವಿನಂತೆಯೇ ಕೂತೆ. ಒಮ್ಮೆ ಇಡಿಯಾಗಿ ಓದಲು ನನ್ನ ಪಾಲಿಗೆ ಅದು ಬರೀ ಓದಾಗಲಿಲ್ಲ, ಸ್ವ-ಅಂತರ್ ವಿಮರ್ಶೆಯ ಒಳತೋಟಿಯೂ ಚಿಂತನಾಮುಖಿ ಯಾಗಿತ್ತು. ಕರ್ನಾಟಕದ ಜನಪದರ ಚಿತ್ರಣವೂ ಮೆದುಳ ಮಗ್ಗುಲಲಿ ಚಲಿಸುತ್ತಿತ್ತು. ಜ್ಯೋತಿ ಬಸು ದಣಿವರಿಯದ ಜಂಗಮ. ಮಾರ್ಕ್ಸ್‌ವಾದದ ಬೆಳಕನ್ನು ಬಂಗಾಲದುದ್ದಕ್ಕೂ ಪಸರಿಸಿದ ಸಂಗಾತಿ.

ತುಂಬ ಚಿಕ್ಕಂದಿನಿಂದ ಜ್ಯೋತಿಬಸು ಕುರಿತು ಮಾಧ್ಯಮ ಗಳಲ್ಲಿ ಬಂದದ್ದೆಲ್ಲವನ್ನೂ ಸಂಗ್ರಹಿಸುವ ಹವ್ಯಾಸದ ಸುರಭಿ ಬ್ಯಾನರ್ಜಿ ಮುಂದೊಮ್ಮೆ ಅತ್ಯಂತ ಪ್ರೌಢತೆಯಿಂದ ಅವರ ಜೀವನ ಚರಿತ್ರೆ ಬರೆಯಲು ತೀರ್ಮಾನಿಸಿದರು. ಆದರೆ ಜ್ಯೋತಿ ಒಪ್ಪಲೇ ಇಲ್ಲ. ಒಬ್ಬ ವ್ಯಕ್ತಿ ಎಷ್ಟೇ ದೊಡ್ಡವನಿರಲಿ, ಮಹಾನ್-ಮಹಾತ್ಮನಿರಲಿ ಅವನು ಸಾವಕಾಶವಾಗಿ ಮರೆವಿನ ಪ್ರಪಂಚಕ್ಕೆ ಜರುಗುವುದು ಅನಿವಾರ್ಯ. ಹಾಗಾಗಿ ಜೀವನ ಚರಿತ್ರೆಯಿಂದ ಏನು ಪ್ರಯೋಜನ? ಎಂಬುದು ಬಸು ಅವರ ಸಂತವಾಣಿ. ಆದರೆ ಪಟ್ಟು ಬಿಡದ ಸುರಭಿ ಕಡೆಗೂ ಗೆದ್ದರು....

1977 ಜೂನ್‌ನಲ್ಲಿ ಜ್ಯೋತಿ ನೇತೃತ್ವದ ಸಿಪಿಐ(ಎಂ) ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಜ್ಯೋತಿಬಸು ತನ್ನ ಸಹೋದ್ಯೋಗಿಗಳನ್ನು ಕರೆದು ಹೇಳುತ್ತಾರೆ; "ನಾವು ನಮ್ಮ ಕಾರ್ಯಕ್ರಮ ಜಾರಿಗೊಳಿಸಲಿರುವುದು ರೈಟರ್ಸ್ ಬಿಲ್ಡಿಂಗಿನಿಂದಲ್ಲ, ಬದಲಾಗಿ ಹೊಲ-ನೆಲಗಳಿಂದ, ಫ್ಯಾಕ್ಟರಿ, ಫಾರ್ಮಗಳಿಂದ ಇದು ಜನತೆಯ ಅಧಿಕಾರ, ಜನತೆಗಾಗಿ ಜನತೆಯಿಂದ ಜಾರಿಯಾಗಬೇಕು'.

ಅಗ್ನಿ ಪರೀಕ್ಷೆಯ ದಿವ್ಯ

ನಾನು ಒಂದೊಂದೇ ಪುಟ ತಿರುವತೊಡಗಿದೆ. ಮಾನವನ ನಡೆಯು ವರ್ಗ ಸಂಘರ್ಷದ ಚರಿತ್ರೆ ಹೊಂದಿದೆ. ಪಶ್ಚಿಮ ಬಂಗಾಳದ ಕಮ್ಯುನಿಸ್ಟ್ ಚಳುವಳಿಯೂ ಎಷ್ಟೋ ಸಂಘರ್ಷಗಳ ಹೊಂಡ ಹಾದು ಬಂದಿದೆ. ಪ್ರತಿ ಬಾರಿಯೂ ಅಗ್ನಿ ಪರೀಕ್ಷೆಯ ದಿವ್ಯ ಎದುರಿಸಿದೆ. ಮಗ ಬ್ಯಾರಿಸ್ಟರ್ ಆಗಲೆಂದು ಬಸು ಅವರ ತಂದೆ ಡಾ: ನಿಶಿಕಾಂತ ಮಗನನ್ನು ಇಂಗ್ಲೆಂಡಿಗೆ ಕಳಿಸಿದರೆ, ವಾಪಾಸಾದದ್ದು ಮಾರ್ಕ್ಸ್‌ವಾದಿ ಕಾಮ್ರೇಡ್ ಜ್ಯೋತಿಬಸು. ಬ್ರಿಟೀಷ್ ಸಾಮ್ರಾಜ್ಯಶಾಹಿಯ ವಿರುದ್ಧ ರಣಕಹಳೆ ಮೊಳಗಿಸಲು ಸನ್ನದ್ಧರಾಗಿ ಭಾರತಕ್ಕೆ ಕಾಲಿಟ್ಟ ಬಸು ಈ ಹೊತ್ತಿನವರೆಗೂ ದುಡಿವ ಜನತೆಯ ಸಿದ್ಧಾಂತವನ್ನು ಅತ್ಯಂತ ವಿಧೇಯತೆ ಮತ್ತು ವಿನಯದಿಂದ ಜಾರಿ ಮಾಡುವ ಶಿಸ್ತಿನ ಸಿಪಾಯಿಯೇ ಹೌದು. ಸಾದಾ ಬಂಗಾಲಿ ಅಂಗಿ-ಧೋತರ ಧರಿಸಿ, ಜನರ ನಡುವೆ ನುಗ್ಗಿದ ಜ್ಯೋತಿ ಬಸು ಜನತೆಯ ಹೃದಯದಾಳಕ್ಕಿಳಿದು ಬಿಟ್ಟರು. ಸಣ್ಣ ವಾಕ್ಯಗಳ, ನೇರ ನುಡಿಯ ಮನ ಮೀಟುವ ಮಾರ್ಮಿಕ ಸತ್ಯಗಳ ಬಿಚ್ಚಿಡುತ್ತಾ ಒಮ್ಮೆ ಬಂಗಾಲಿ ಜನತೆಯ ಮನಗೆದ್ದ ಜ್ಯೋತಿಬಸು ಇಂದಿಗೂ ಜನನಾಯಕರೇ. ಅದ್ಭುತ ಸಂಘಟನಾ ಚಾತುರ್ಯ, ಜನರ ಸಮಸ್ಯೆಗಳನ್ನು ಅರಿಯುವ ತೀಕ್ಷ್ಣತೆ ಎಂಥದೇ ಸಂಕಟಗಳು ಎರಗಿದರೂ ವಿಚಲಿತರಾಗದೆ ಎದುರಿಸುವ ಪರಿ. ಬಂಗಾಲದ ಕಮ್ಯುನಿಸ್ಟ್ ಚಳುವಳಿಯ ಉತ್ತರೋತ್ತರ ವಾಗಿ ಬೆಳೆಯುವಲ್ಲಿ ಕಾರಣ ವಾಯಿತು. ವಿಮರ್ಶೆಯ ಒಳಗಣ್ಣು ತೆರೆದೇ ಕೆಲಸ ಮಾಡುವ ಜ್ಯೋತಿಗೆ ಸ್ವಂತ ಮತ್ತು ಪರರ ಮಿತಿಗಳೂ ಶಕ್ತಿಯೂ ಸ್ಪಷ್ಟವಾಗಿ ಅರ್ಥವಾಗುತ್ತಿತ್ತು.



ಬರದ ತಲ್ಲಣ

1943ರಲ್ಲಿ ಬಂಗಾಲದಲ್ಲಿ ಕಾಣಿಸಿಕೊಂಡ ಭೀಕರ ಬರ ಜ್ಯೋತಿಯನ್ನು ತಲ್ಲಣ ಗೊಳಿಸಿದವು. ರಸ್ತೆಯುದ್ದಕ್ಕೂ ಪುರುಷ-ಮಹಿಳೆ-ಮಕ್ಕಳ ಸುಕ್ಕುಗಟ್ಟಿದ ಹೆಣಗಳ ರಾಶಿ, ಪಕ್ಷವು ಬರ ಪರಿಹಾರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿತು. ಜ್ಯೋತಿ ಬಂಗಾಳದ ನೆಲದುದ್ದಕ್ಕೂ ಓಡಾಡಿದರು. ಹಸಿವಿನ ಪ್ರಖರತೆ ಮನಸ್ಸು ತಟ್ಟಿ ಕಣ್ಣೀರು ತಂದರೆ, ಹಸಿವುಗನ್ನವನಿಕ್ಕಲಾರದೆ ಬರವನ್ನೂ ಇನ್ನೂ ಕ್ರೂರಗೊಳಿಸಿದ ಬಂಗಾಳದ ಸರ್ಕಾರದ ಬಗ್ಗೆ ರೋಷ ಹುಟ್ಟಿತು. ಭೀಕರ ಬರವು ಜ್ಯೋತಿಯನ್ನು ಮತ್ತಷ್ಟು ಗಟ್ಟಿಗೊಳಿಸಿ ಶ್ರಮಿಕರನ್ನು ಸಂಘಟಿಸುವತ್ತ ತನ್ಮಯಗೊಳಿಸಿತು.

ಪಾರ್ಲಿಮೆಂಟರಿ ರಾಜಕೀಯ

1946ರ ಆರಂಭದಲ್ಲಿ ವಿಧಾನಸಭೆಗೆ ಚುನಾವಣೆಗಳು ನಡೆದು ಬಸು ಸ್ಪರ್ಧಿಗಿಳಿದರು ಮತ್ತು ಕಾಂಗ್ರೆಸ್ಸಿನ ಗೂಂಡಾಗಿರಿ, ಎಲ್ಲ ತೆರನ ಹೇಯ ಕುಟಿಲ ಕುತಂತ್ರಗಳನ್ನು ಪಕ್ಷವು ಸಮರ್ಥವಾಗಿ ಎದುರಿಸಿ 'ಬಸು' ಗೆದ್ದರು. ಇಂದಿರಾಗಾಂಧಿಯ ಸರ್ವಾಧಿಕಾರದ ಸಂದರ್ಭವಾದ ತುರ್ತು ಪರಿಸ್ಥಿತಿಯ ಕಾಲಾವಧಿಯಲ್ಲಿ ಅಂದರೆ 1972ರ ಚುನಾವಣೆಯಲ್ಲೊಂದು ಬಾರಿ ಜ್ಯೋತಿ ಸೋತಿದ್ದು ಬಿಟ್ಟರೆ ಮತ್ತೆಂದೂ ಸೋಲಲೇ ಇಲ್ಲ. "1972ರ ಚುನಾವಣೆಗಳು ಸಂಸದೀಯ ಪ್ರಜಾಸತ್ತೆಯ ಲಜ್ಜಾಹೀನ ಅಣಕದಂತಿದ್ದವು" ಎನ್ನುತ್ತಾರೆ ಬಸು.

ಪಕ್ಷವು ಹೆಜ್ಜೆ ಹೆಜ್ಜೆಗೂ ವರ್ಗ ವಿರೋಧಿಗಳಿಂದ ಸಾಮ್ರಾಜ್ಯಶಾಹಿಗಳಿಂದ ಅನೇಕ ಸಂಕಟಗಳನ್ನು ಎದುರಿಸಿತು. ಆಗೆಲ್ಲ ಜ್ಯೋತಿಬಸು ಮತ್ತು ಪಕ್ಷದ ಸಂಗಾತಿಗಳು ಅತ್ಯಂತ ದೃಢತೆಯಿಂದ ಎದುರಿಸಿದ್ದು ಮಾತ್ರವಲ್ಲ, ಕಂಟಕಗಳ ಸಂದರ್ಭದಲ್ಲೆಲ್ಲ ಜನತೆಯ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ತೀವ್ರತರ ಚಳುವಳಿಗೆ ಮುನ್ನುಗ್ಗಿರುವುದ ರಿಂದಲೇ ಅಡೆ-ತಡೆಗಳನ್ನು ಮೆಟ್ಟಿ ಮೀರಿ ಪಕ್ಷ ಬೆಳೆಯಲು ಸಾಧ್ಯವಾಯಿತು. ಬಂಗಾಲದ ಕಾಂಗ್ರೆಸ್ ಪಕ್ಷವಂತೂ ಸಿಪಿಐ(ಎಂ) ಅನ್ನು ಬಗ್ಗುಬಡಿಯಲು ನೀಚಾತಿ ನೀಚ ಮಟ್ಟಕ್ಕೆ ಇಳಿದಾಗೆಲ್ಲ ಅದಕ್ಕೆ ಎದುರೇಟಾಗಿ ಜ್ಯೋತಿ ಬಂಗಾಳದುದ್ದಕ್ಕೂ ಪಾದರಸದಂತೆ ಚಲಿಸಿ ಸತ್ಯವನ್ನು ಜನತೆಯ ಮುಂದೆ ಇಟ್ಟರು, ಅಷ್ಟೆ ಧೀಮಂತಿಕೆಯಿಂದ ಎದುರಿಸಿದರು.

ವಿಶಿಷ್ಟ ವ್ಯಕ್ತಿತ್ವ

ಜ್ಯೋತಿ ಬಸುಗಿರುವ ವಿಶಿಷ್ಟ ವ್ಯಕ್ತಿತ್ವವೇ ವಿರೋಧಿಗಳಿಗೂ ದಂಗು ಬಡಿಸಿದ್ದು, ಪಕ್ಷದ ಮೇಲೆ ನಿಷೇಧ.ಹೇರಿದಾಗ, ಚೀನಾ ಭಾರತ ಗಡಿ ಪ್ರಶ್ನೆಯ ಸಂದರ್ಭದಲ್ಲಿ ಪಕ್ಷದ ಮೇಲೆ ಅಪಪ್ರಚಾರದ ಸುರಿಮಳೆ ಆದಾಗ 1964 ರಲ್ಲಿ ಪಕ್ಷ ಪರಿಷ್ಕರಣಾವಾದಿಗಳಿಂದ ಬೇರ್ಪಟ್ಟಾಗ, ತುರ್ತು ಪರಿಸ್ಥಿತಿಯ ಬಂಧನಗಳು ಎರಗಿದಾಗ, ಕೇಂದ್ರ ಸರ್ಕಾರ (ಕಾಂಗ್ರೆಸ್)ವು ಕುತಂತ್ರದಿಂದ ಸರ್ಕಾರ ಉರುಳಿಸಿದಾಗ, ಪ.ಬಂಗಾಳದೆಲ್ಲೆಡೆ ಮತಗಟ್ಟೆ ವಶ (ಬೂತ್ ಕ್ಯಾಪ್ಚರ್), ಗೂಂಡಾಗಿರಿ ಮಾಡಿ ಕಾಂಗ್ರೆ ಸಂಸದೀಯ ಮೌಲ್ಯವೇ ಗಾಳಿಗೆ ತೂರಿ ಸಿಪಿಐ(ಎಂ) ಗೆಲುವಿಗೆ ಧಕ್ಕೆ ಮಾಡಿದಾಗ, ಬಸು ಮೇಲೆ ಹಲ್ಲೆ ಮತ್ತು ಕೊಲೆ ಪ್ರಯತ್ನಗಳು ನಡೆದಾಗ ನಕ್ಸಲೈಟ್‌ರು ಹೆಜ್ಜೆ-ಹೆಜ್ಜೆಗೂ ಅಡ್ಡಿ ಮಾಡಿದಾಗ, ಜಮೀನ್ದಾರರು ಹೆಡೆಯೆತ್ತಿ ಬುಸುಗುಟ್ಟಿದಾಗ, ಕೋಮುದಂಗೆ ಹಬ್ಬಿಸಲು ಪ್ರಯತ್ನಿಸಿದಾಗ ಪಕ್ಷವನ್ನು ಗಟ್ಟಿಗೊಳಿಸುತ್ತಲೇ ಮತ್ತೆ ಮತ್ತೆ ಜನರಿಗೆ ಪಕ್ಷದ ನಿಲುವು ಹಾಗೂ ವಿರೋಧಿಗಳ ಕುತಂತ್ರ ಬಯಲುಗೊಳಿಸಿದ ಕಾರಣವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಆಂದೋಲನವು ನೂರ್ಮಡಿಯಾಗಿ ಬೆಳೆಯತೊಡಗಿತು. ಇದೆಲ್ಲಕ್ಕೂ ಮೆರಗು ವ್ಯಕ್ತಿತ್ವದ ಜ್ಯೋತಿ ಅವರ ನಿಷ್ಕಲ್ಮಷ ನಡವಳಿಕೆ, ಅಧಿಕಾರ ದಾಹವಿಲ್ಲದ ರಾಜಕಾರಣ. ಸೇಡು ಸಂಸ್ಕೃತಿಯಿಲ್ಲದ ನಡೆ, ನಿಷ್ಠುರ ನಿಲುವು ಬಂಗಾಳದ ಜನತೆಯನ್ನು ಸೂಜಿಗಲ್ಲಿನಂತೆ ಸೆಳೆದವು. 1967ರ ಸಮಯ ಸಮ್ಮಿಶ್ರ ಸರ್ಕಾರದಲ್ಲಿ ಸಿಪಿಐ(ಎಂ)ಗೆ ಹೆಚ್ಚಿನ ಸ್ಥಾನ ಲಭಿಸಿದ್ದರೂ ಬಾಂಗ್ಲಾ ಕಾಂಗ್ರೆಸ್ಸಿನ ಅಜೇಯ್ ಮುಖರ್ಜಿ ಮುಖ್ಯಮಂತ್ರಿಯಾಗಿ ಬಸು ಉಪಮುಖ್ಯಮಂತ್ರಿಯಾದರು. ಕಾಂಗ್ರೆಸ್ ಅನ್ನು ವಿರೋಧಿಸಿ ಜನತೆ ಕೊಟ್ಟ ಆದೇಶ ಮುಖ್ಯ. ಜನರ ವಿಶ್ವಾಸಕ್ಕೆ ದ್ರೋಹ ಮಾಡಬಾರದೆಂಬ ನಂಬಿಕೆ ಬಸು ಅವರದ್ದು, "ಅಧಿಕಾರವೆಂಬುದು ಜನತೆಯಿಂದಲೇ ಹೊರಹೊಮ್ಮುತ್ತದೆ ಮತ್ತು ಅಂತಿಮವಾಗಿ ಜನತೆಯಲ್ಲಿಯೇ ಹರಳುಗಟ್ಟುತ್ತದೆ" ಎಂದು ಮಾರ್ಮಿಕವಾಗಿ ಹೇಳುತ್ತಾರೆ ಜ್ಯೋತಿದಾ.

ಆದ್ದರಿಂದಲೇ 1977 ಜೂನ್‌ನಲ್ಲಿ ಜ್ಯೋತಿ ನೇತೃತ್ವದ ಸಿಪಿಐ(ಎಂ) ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಜ್ಯೋತಿಬಸು ತನ್ನ ಸಹೋದ್ಯೋಗಿಗಳನ್ನು ಕರೆದು ಹೇಳುತ್ತಾರೆ; "ನಾವು ನಮ್ಮ ಕಾರ್ಯಕ್ರಮ ಜಾರಿಗೊಳಿಸಲಿರುವುದು ರೈಟರ್ಸ್ ಬಿಲ್ಡಿಂಗಿನಿಂದಲ್ಲ. ಬದಲಾಗಿ ಹೊಲ-ನೆಲಗಳಿಂದ, ಫ್ಯಾಕ್ಟರಿ, ಫಾರ್ಮಗಳಿಂದ ಇದು ಜನತೆಯ ಅಧಿಕಾರ, ಜನತೆಗಾಗಿ ಜನತೆಯಿಂದ ಜಾರಿಯಾಗಬೇಕು'. ಹೌದು ಇದೇ ಜ್ಯೋತಿ ಯಶಸ್ಸಿನ ಗುಟ್ಟು. "ಕಾರ್ಮಿಕ ವರ್ಗ ಮತ್ತು ರೈತಾಪಿಗಳ ಸದೃಢ ಸಖ್ಯತೆಯಿಂದ ಮಾತ್ರವೇ ದೇಶದ ಸಾರ್ವಭೌಮತೆ ಉಳಿಸಲು ಸಾಧ್ಯ" ಎಂಬುದು ಅವರ ಅಚಲ ನಂಬಿಕೆ.

ಹೀಗೆ ಜನತೆಯನ್ನು ಮಾತ್ರ ನಂಬಿ ಅತ್ಯಂತ ಪಾರದರ್ಶಕವಾಗಿ, ಧೀಮಂತಿಕೆ ಯಿಂದ ಪಕ್ಷ ಕಟ್ಟಿ ಬೆಳೆಸಿದ ಸಂಗಾತಿಗಳ ಮಹಾಚೇತನ ಜ್ಯೋತಿಯನ್ನು ವಿರೋಧಿಸಲು ವರ್ಗ ವಿರೋಧಿಗಳಿಗೂ ಸಾಧ್ಯವಿರಲಿಲ್ಲ. ಆದರೆ ಬಂಗಾಲದ ಕಮ್ಯುನಿಸ್ಟ್ ಆಂದೋಲನವು ಒಳ-ಹೊರಗಿನ ಧಾಳಿಯನ್ನು ಮೆಟ್ಟಿ ಮೀರಿ ಬೆಳೆದ ವೀರ ಪರಂಪರೆ ಹೊಂದಿದೆ. ಆ ಪರಂಪರೆಯು ಜನತೆಯನ್ನು ಜನಪರ ರಾಜಕಾರಣದ ದಾರಿ ತುಳಿವಂತೆ ಮಾಡಿದೆ. ದುಡಿವ ವರ್ಗದ ಚಳುವಳಿ ಕಟ್ಟುತ್ತಲೇ ಕೋಮುವಾದವನ್ನು ಹಿಮ್ಮೆಟ್ಟಿಸಲಾಗಿದೆ.

ಸಾಮ್ರಾಜ್ಯಶಾಹಿ, ಕೋಮುವಾದ, ಭೂ ಮಾಲಕ ಶತೃಗಳನ್ನು ಗುರುತಿಸುವ ರಾಜಕಾರಣದ ಅರಿವು ಹೊಂದಿರುವ ಪ.ಬಂಗಾಳದ ಜನತೆ ನಂದಿಗ್ರಾಮದ ಘಟನೆಗಳನ್ನು ಅರ್ಥೈಸಿಕೊಳ್ಳುವ ಕ್ರಮದಿಂದ ಖಂಡಿತ. ಈಗ ಪ್ರಶ್ನೆ ಕಾಡುವುದಿಲ್ಲ. ಜನಪರ ರಾಜಕೀಯವನ್ನೇ ಉಸಿರಾಗಿಸಿಕೊಂಡ ಸಂಗಾತಿಗಳಿಗೆ ಪ.ಬಂಗಾಳದ ಜನತೆಗೆ, ಕವಿ ಹೃದಯದ ಸಂಗಾತಿ 'ಬಸುದಾ' ಗೆ ಲಾಲ್ ಸಲಾಂ.

ಮಠ ಗುಡಿ

ಮಠದೊಳಗೆ ಗುಡಿಯೊಳಗೆ ನೈತಿಕತೆ ಸಾವು
ಇಂತಿರಲು ಮತಕೊಂದು ಮಠ ಬೇಕೆ ಹೇಳಿ
ಆಗುತ್ತ ಬಂದಿಹುದ ಕಂಡಿ ಹಿರಿ ನೀವು
ಬೀಸುತಿದೆ ಅಲ್ಲೆಲ್ಲ ಮನ ಒಡೆವ ಗಾಳಿ

- ವಿಡಂಬಾರಿ

ಜನಶಕ್ತಿ ಕನ್ನಡ ವಾರಪತ್ರಿಕೆ

ಆರ್ಥಿಕ ಚಿಂತನೆ

ಫೆಬ್ರವರಿ 28, ಸಾಧಾರಣವಾಗಿ ಎಂದಿನಂತೆ ಕೇಂದ್ರ ಸರ್ಕಾರ ಆಯ-ವ್ಯಯ ಮಂಡಿಸುವ ದಿನ. ಇಂತಹ ಬಜೆಟ್ ಹೇಗಿರಬೇಕು ಎಂದೆಲ್ಲಾ ಬಂಡವಾಳಗಾರರನ್ನು, ಅವರ ಸಂಘ ಸಂಸ್ಥೆಗಳೊಂದಿಗೆ ಪೂರ್ವ ಸಮಾಲೋಚಿಸುವ ಪರಿಪಾಠವೂ ಇದೆ. ಆದರೆ ಜನಸಾಮಾನ್ಯರ ಬೇಕು ಬೇಡಗಳನ್ನಲ್ಲ...ಹೀಗಿರುವಾಗ ಜನರ, ಒಟ್ಟು ದೇಶದ ಹಿತ ಕಾಯಲು ಮುಂಬರುವ ಬಜೆಟ್ ಹೇಗಿರಬೇಕು

ಬಜೆಟ್ ಎಂದರೆ ಹ್ಯಾಂಗಿರಬೇಕ?

ತಿಂಗಳಾಂತ್ಯದಲ್ಲಿ ಕೇಂದ್ರ ಯುಪಿಎ ಸರ್ಕಾರ ತನ್ನ ನಾಲ್ಕನೇ ಬಜೆಡ್ ಮಂಡಿಸಲಿದೆ. 2008-09ರ ಈ ಬಜೆಟ್ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ನೀಡಿರುವ ಭರವಸೆಗಳನ್ನು ಈಡೇರಿಸಬೇಕಾಗಿದೆ. ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಆದ್ಯತೆ ನೀಡಿರುವ ವಲಯಗಳಲ್ಲಿ ಈ ಕೆಳಗಿನ ಅಂಶಗಳು ತುಂಬಾ ಪ್ರಮುಖವಾಗಿವೆ.

1. ಕೃಷಿ ವಲಯದಲ್ಲಿ ಸರ್ಕಾರಿ ಹೂಡಿಕೆಯನ್ನು ನಿರಂತರವಾಗಿ ಹೆಚ್ಚಿಸುವುದು 2. ದೇಶದ ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ)ದಲ್ಲಿ ಶೇಕ 6ರಷ್ಟು ಶಿಕ್ಷಣಕ್ಕೆ ಮೀಸಲಿಡುವುದು 3. ಆರೋಗ್ಯ ವಲಯಕ್ಕೆ ಜಿಡಿಪಿಯ ಶೇಕಡ 2-3ರಷ್ಟು 4. ಗ್ರಾಮೀಣ, ನಗರ ಪ್ರದೇಶದ ಬಡತನ ರೇಖೆಗಿಂತಲೂ ಕೆಳಗಿರುವ ಪ್ರತಿಯೊಂದು ಕುಟುಂಬ ಸದಸ್ಯರೊಬ್ಬರಿಗೆ ವರ್ಷಕ್ಕೆ 100 ದಿನಗಳ ಉದ್ಯೋಗವನ್ನು ಶಾಸನಬದ್ಧವಾಗಿ ಒದಗಿಸುವುದು 5. ಅಸಂಘಟಿತ ವಲಯದ ಕಾರ್ಮಿಕರಿಗೆ ಸಮಗ್ರ ಸಾಮಾಜಿ ಭದ್ರತಾ ಯೋಜನೆ ರೂಪಿಸುವುದು 6. ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್)ನ್ನು ಸಾರ್ವತ್ರೀಕರಣಗೊಳಿಸುವುದು ಮತ್ತು 7. ಸಾರ್ವತ್ರಿಕ ಆಹಾರ ಭದ್ರತೆಯತ್ತ ಮುನ್ನಡೆಯುವುದು. ಈ ಬದ್ಧತೆಗಳನ್ನು ಇದುವರೆಗೂ ಸಮರ್ಪಕವಾಗಿ ಪೂರೈಸಿಲ್ಲ. ಜನತೆ ಎದುರಿಸುತ್ತಿರುವ ಗಂಭೀರ ಸಮಸ್ಯೆ (ಕೃಷಿ ಬಿಕ್ಕಟ್ಟು, ನಿರುದ್ಯೋಗ ಮತ್ತು ದರ ಏರಿಕೆ)ಗಳನ್ನು ನಿವಾರಿಸಬೇಕಾದರೆ 2008-09ನೆ ಸಾಲಿನ ಬಜೆಟ್‌ನಲ್ಲಿ ಕ್ರಮಗಳನ್ನು ಕೈಗೊಳ್ಳುವ ಮೂಲಕ ರಾಷ್ಟ್ರೀಯ ಸಾಮಾನ್ಯ ಕನಿಷ್ಠ ಕಾರ್ಯಕ್ರಮ (ಎನ್‌ಸಿಎಂಪಿ)ಗೆ ಸಂಪೂರ್ಣವಾಗಿ ಬದ್ಧವಾಗಿರಬೇಕು. ರಾಷ್ಟ್ರೀಯ ಆದಾಯಕ್ಕಿಂತಲೂ ಹಲವು ಪಟ್ಟು ಹೆಚ್ಚು ಬೆಳಯುತ್ತಿರುವ ಆದಾಯ ಮತ್ತು ಬಂಡವಾಳ ಗಳಿಕೆ ಮೇಲೆ ತೆರಿಗೆಗಳನ್ನು ವಿಸುವ ಮೂಲಕ ಸಂಪನ್ಮೂಲ ಕ್ರೋಡೀಕರಿಸಬೇಕು. ಕಾರ್ಪೊರೇಟ್ ಕಂಪನಿಗಳಿಗೆ ಮತ್ತು ಉದ್ಯಮಿಗಳಿಗೆ ಒದಗಿಸುತ್ತಿರುವ ಅಪಾರ ಪ್ರಮಾಣದ ತೆರಿಗೆ ವಿನಾಯಿತಿಗಳನ್ನು (ಮತ್ತೊಂದು ರೀತಿಯಲ್ಲಿ ವ್ಯಾಖ್ಯಾನಿಸುವುದಾದರೆ ಬಂಡವಾಳಶಾಹಿಗಳಿಗೆ ನೀಡುತ್ತಿರುವ ಸಹಾಯದನ) ಆದಾಯ ಅಸಮಾನತೆಗೆ ಅನುಗುಣವಾಗಿ ತೆಗೆದುಹಾಕಬೇಕು. ದೇಶದಲ್ಲಿನ ಆರ್ಥಿಕ ಅಭಿವೃದ್ಧಿಯ ಲಾಭ ಪಡೆದು ಬಂಡವಾಳಶಾಹಿಗಳು ಇನ್ನಷ್ಟು ಕೊಬ್ಬುವುದನ್ನು ತಪ್ಪಿಸಲು ಈ ಆರ್ಥಿಕ ಅಭಿವೃದ್ಧಿ ಎಲ್ಲ ವರ್ಗದ ಜನತೆಗೆ ತಲುಪುವತ್ತ 2008-09ನೆ ಸಾಲಿನ ಬಜೆಟ್ ಕೇಂದ್ರೀಕೃತವಾಗಿರಬೇಕು. ಅದರಲ್ಲೂ ವಿಶೇಷವಾಗಿ ಆರ್ಥಿಕ-ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ ಮುಟ್ಟುವಂತಿರಬೇಕು.

ಸಂಪನ್ಮೂಲ ಕ್ರೋಡೀಕರನ ಮತ್ತು ತೆರಿಗೆ ಹೇರಿಕೆ


6. ಕೇಂದ್ರ ಯೋಜನೆಗೆ ನಿವ್ವಳ ಬಜೆಟ್ ಅನುಧಾನ(ಜಿಬಿಎಸ್) ವನ್ನು 2006-07ರಲ್ಲಿದ್ದ 1,72,728 ಕೋಟಿ ರೂ.ಗಳಿಂದ ಈ ಬಜೆಟ್‌ನಲ್ಲಿ 2,05,100 ಕೋಟಿ ರೂ.ಗೆ ಹೆಚ್ಚಿಸಬೇಕು.

ಅಂದರೆ 2006-07ರ ಬಜೆಟ್‌ಗಿಂತಲೂ ಶೇಕಡ 18.7ರಷ್ಟು ಹೆಚ್ಚಿಸಬೇಕು. ಹೆಚ್ಚಿಸಿರುವ ಶೇಕಡ 18.7ರಲ್ಲಿ ಶೇಕಡ 15.8ರಷ್ಟು 2006-07ನೇ ಸಾಲಿನಲ್ಲಿ ಜಿಡಿಪಿ ಅಭಿವೃದ್ಧಿಯಿಂದ ದೊರೆಯಲಿದೆ. ಇದರಿಂದ ಜಿಡಿಪಿ ಬೆಳವಣಿಗೆ ಪ್ರಮಾಣಕ್ಕಿಂತಲೂ ಜಿಬಿಎಸ್ ಬೆಳವಣಿಗೆ ಪ್ರಮಾಣ ಹೆಚ್ಚಲಿದೆ. ದೇಶದ ಆರ್ಥಿಕತೆಯಲ್ಲಿ ರಾಜ್ಯಗಳ ಪಾತ್ರವನ್ನು ಹೆಚ್ಚಿಸುವ ನಿಟ್ಟನಲ್ಲಿ ಜಿಬಿಎಸ್ ಅನುದಾನ ಏನೇನೂ ಸಾಲದಾಗಿದೆ. ಸಿಎಂಪಿಯಲ್ಲಿ ನೀಡಿರುವ ಭರವಸೆಗಳನ್ನು ತುಂಬಬೇಕಾದರೆ ವೆಚ್ಚವನ್ನು ಸಹ ಹೆಚ್ಚಿಸಬೇಕು. 2008-09ನೆ ಸಾಲಿನ ಬಜೆಟ್‌ನಲ್ಲಿ ಜಿಬಿಎಸ್ ಪ್ರಮಾಣವನ್ನು ಕಳೆದ ವರ್ಷಕ್ಕಿಂತಲೂ 60,000 ಕೋಟಿ ರೂ. ಹೆಚ್ಚು ನೀಡಬೇಕು.

7. ಎಫ್‌ಆರ್‌ಬಿಎಂ ನಿಯಮಗಳಲ್ಲಿ ಶೂನ್ಯ ಆದಾಯ ಕೊರತೆಯನ್ನು ಅಳವಡಿಸಿದ್ದು ಮುಂಬರುವ ಬಜೆಟ್‌ನಲ್ಲಿ ಅದನ್ನು ಮುಟ್ಟಬೇಕು. ಈ ಗುರಿಯನ್ನು ತಲುಪಲು ಎದುರಾಗುವ ಸಮಸ್ಯೆಗಳ ಬಗ್ಗೆ ಹನ್ನೊಂದನೇ ಪಂಚವಾರ್ಷಿಕ ಯೋಜನೆ ಎಚ್ಚರಿಸಿದ್ದು ಆರೋಗ್ಯ ಮತ್ತು ಶಿಕ್ಷಣ ಯೋಜನೆಗಳ ಅಭಿವೃದ್ಧಿಗೆ ಇದರಿಂದ ತೊಂದರೆಯಾಗಲಿದೆ ಎಂದು ಹೇಳಿದೆ. ಜಿಬಿಎಸ್‌ನಲ್ಲಿ ಮಾಡುವ ಪ್ರತಿಯೊಂದು ವೆಚ್ಚವೂ ಯೋಜನೆಯ ಪ್ರಮುಖ ಕಾರ್ಯತಂತ್ರವಾಗಿದೆ. ಕೇಂದ್ರದ ಅನುದಾನ ಹೆಚ್ಚಿಸುವ ಮೂಲಕ ಹಿಂದುಳಿದ ರಾಜ್ಯಗಳಲ್ಲಿ ಸಾಮಾಜಿಕ ಸೇವೆಗಳನ್ನು ಕೈಗೊಳ್ಳಬೇಕು.

ಎಫ್‌ಆರ್‌ಬಿಎಂ ಕಾನೂನಿನಲ್ಲಿರುವ ನ್ಯಾಯಸಮ್ಮತವಲ್ಲದ ಮತ್ತು ಅಭಿವೃದ್ಧಿ ವಿರೋಧಿ ನೀತಿಗಳನ್ನು ಎಡಪಕ್ಷಗಳು ವಿರೋಧಿಸುತ್ತವೆ. ಎಫ್‌ಆರ್‌ಬಿಎಂ ಕಾಯ್ದೆ ಯಾವುದೇ ಕಾರಣಕ್ಕೂ ಮುಂಬರುವ ಬಜೆಟ್‌ನಲ್ಲಿನ ಯೋಜಿತ ವೆಚ್ಚಕ್ಕೆ ಕೊರತೆ ಉಂಟು ಮಾಡಬಾರದು.

8. ಸಿಎಂಪಿಯಲ್ಲಿ ಮಾಡಿರುವ ವೆಚ್ಚಗಳನ್ನು ಪೂರೈಸಲು ತೆರಿಗೆ ಸಂಗ್ರಹಣೆಯಲ್ಲಿ ಯಾವುದೇ ರೀತಿಯ ರಿಯಾಯಿತಿಗಳನ್ನು ನೀಡಬಾರದು.



ಕಾರ್ಪೊರೇಟ್ ವಲಯಕ್ಕೆ ನಿರಂತರವಾಗಿ ನೀಡುತ್ತಿರುವ ತೆರಿಗೆ ವಿನಾಯಿತಿಗಳನ್ನು ಸ್ಥಗಿತಗೊಳಿಸಬೇಕು. 2006-07ನೆ ಸಾಲಿನ ಬಜೆಟ್‌ನಲ್ಲಿ ಕಾರ್ಪೊರೇಟ್ ಕಂಪನಿಗಳ ಮೇಲೆ ಶೇಕಡ 33.6ರಷ್ಟು ತೆರಿಗೆಗೆ ಬದಲಾಗಿ ಶೇಕಡ 19.2ರಷ್ಟು ಮಾತ್ರ ವಿಧಿಸಲಾಗಿದೆ. ಕಾರ್ಪೊರೇಟ್ ಕಂಪನಿಗಳಿಗೆ 2005-06ನೇ ಸಾಲಿನಲ್ಲಿ ನೀಡಿದ್ದ 34,618 ಕೋಟಿ ರೂ. ತೆರಿಗೆ ವಿನಾಯಿತಿಗಳನ್ನು 2006-07ನೆ ಸಾಲಿನಲ್ಲಿ 50,075 ಕೋಟಿ ರೂ.ಗಳಿಗೆ ಹೆಚ್ಚಿಸಲಾಯಿತು. ಈ ಬಜೆಟ್‌ನಲ್ಲಿ ಈ ತೆರಿಗೆ ವಿನಾಯಿತಿಗಳನ್ನು ಕಡಿತಗೊಳಿಸಲು ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಬೇಕು.

ಎಸ್‌ಇಜಡ್ ಕುರಿತು ಸ್ಥಾಯಿ ಸಮಿತಿ ನೀಡಿರುವ ಶಿಫಾರಸುಗಳನ್ನು ಯುಪಿಎ ಸರ್ಕಾರ ಪರಿಣಾಮಕಾರಿಯಾಗಿ ಕೈಗೊಂಡಿಲ್ಲ. ಈ ವಲಯಗಳಿಗೆ ಹೆಚ್ಚಿನ ತೆರಿಗೆ ವಿನಾಯಿತಿಗಳನ್ನು ನೀಡಲಾಗುತ್ತಿದೆ. ಇದನ್ನು ಕೂಡಲೆ ಸ್ಥಗಿತಗೊಳಿಸಬೇಕು. 1) ಸಣ್ಣ ಮತ್ತು ಮಧ್ಯಮ ವಲಯದ ರಫ್ತು ಕಂಪನಿಗಳನ್ನು ಹೊರತುಪಡಿಸಿ ಎಲ್ಲ ಉದ್ದಿಮೆಗಳಿಗೆ ನೀಡುತ್ತಿರುವ ತೆರಿಗೆ ವಿನಾಯಿತಿಗಳನ್ನು ರದ್ದುಪಡಿಸಬೇಕು. 2) ರಾಜಕೀಯ ಪಕ್ಷಗಳು ಮತ್ತು ಧಾರ್ಮಿಕ ಸಂಸ್ಥೆಗಳಿಗೆ ನೀಡುವ ಅನುದಾನವನ್ನು ಸ್ಥಗಿತಗೊಳಿಸಬೇಕು. 3) ಹಡಗು ಮತ್ತು ಹೋಟೆಲ್ ವಹಿವಾಟಿಗೆ ನೀಡುತ್ತಿರುವ ತೆರಿಗೆ ವಿನಾಯಿತಿಗಳನ್ನು ಹಿಂಪಡೆಯಬೇಕು. 4) ಮೂಲಸೌಕರ್ಯ ಅಭಿವೃದ್ಧಿ ಹೆಸರಿನಲ್ಲಿ ಒದಗಿಸುತ್ತಿರುವ ತೆರಿಗೆ ವಿನಾಯಿತಿಗಳನ್ನು ನಿಲ್ಲಿಸಬೇಕು. ಎಸ್‌ಇಜಡ್, ಕೈಗಾರಿಕಾ ಪಾರ್ಕ್‌ಗಳು, ವಿದ್ಯುತ್ ಉತ್ಪಾದನೆ, ಸಂಪರ್ಕ ಮೂಲಸೌಕರ್ಯಗಳ ಅಭಿವೃದ್ಧಿಗೆ ನೀಡುತ್ತಿರುವ ತೆರಿಗೆ ವಿನಾಯಿತಿ ನಿಲ್ಲಿಸಬೇಕು. 5) ಹಿಂದುಳಿದ ಪ್ರದೇಶಗಳಲ್ಲಿ ಕೈಗೊಳ್ಳುವ ಯೋಜನೆಗಳಲ್ಲಿ ಗಳಿಸುವ ಆದಾಯದ ಮೇಲೆ ತೆರಿಗೆ ವಿಧಿಸಬೇಕು.

9. ಗಣನೀಯ ಪ್ರಮಾಣದ ಊಹಾತ್ಮಕ ಬಂಡವಾಳ ಭಾರತದ ಷೇರು ಮಾರುಕಟ್ಟೆಗೆ ಹರಿದುಬರುತ್ತಿದೆ ಎಂಬುದನ್ನು ಇತ್ತೀಚಿನ ಷೇರು ಮಾರುಕಟ್ಟೆ ಬೆಳವಣಿಗೆಗಳಿಂದ ತಿಳಿದುಬಂದಿದೆ. ಎಫ್‌ಐಐಗಳು ನಿರಂತರವಾಗಿ ಬಂಡವಾಳ ತೊಡಗಿಸುತ್ತಿರುವುದು ಮತ್ತು ಹಿಂಪಡೆಯುತ್ತಿರುವುದರಿಂದ ಇಂತಹ ಬೆಳವಣಿಗೆಗಳು ಕಂಡುಬರುತ್ತಿವೆ. ಭಾರಿ ಪ್ರಮಾಣದಲ್ಲಿ ವಿದೇಶೀ ಹೂಡಿಕೆ ಹರಿದು ಬರುತ್ತಿರುವುದರಿಂದ ವಿದೇಶೀ ವಿನಿಮಯ ನಿಧಿಯಲ್ಲಿ ಏರಿಕೆ ಕಂಡಿದೆ. ರೂಪಾಯಿ ಮೌಲ್ಯ ಹೆಚ್ಚಳ ರಫ್ತು ಕಂಪನಿಗಳನ್ನು ಸಂಕಷ್ಟಕ್ಕೆ ಸಿಲುಕಿಸಿವೆ. ಅದರಲ್ಲೂ ವಿಶೇಷವಾಗಿ ಅಮೆರಿಕದಲ್ಲಿ ಉಂಟಾಗಿರುವ ಆರ್ಥಿಕ ಹಿಂಜರಿತ ಈ ಸಮಸ್ಯೆಯನ್ನು ಹೆಚ್ಚಿಸಿದೆ. ಈ ಸಂದರ್ಭದಲ್ಲಿ ವಿದೇಶಿ ಕರೆನ್ಸಿಯನ್ನು ಖರೀದಿಸಲು ವಿನಿಮಯ ಮಾರುಕಟ್ಟೆ ಮಧ್ಯ ಪ್ರವೇಶಿಸುವುದರಿಂದ ಇನ್ನಷ್ಟು ಆರ್ಥಿಕ ಸಂಕಷ್ಟಗಳಿಗೆ ಎಡೆ ಮಾಡಿಕೊಡಲಿದೆ. ಹಾಗಾಗಿ ಮಾರುಕಟ್ಟೆಯಲ್ಲಿನ ಏರುಪೇರು ತಡೆಯಲು ಆದಷ್ಟು ಬೇಗನೆ ವಿದೇಶಿ ಬಂಡವಾಳ ಹರಿದುಬರುವಿಕೆಯನ್ನು ತಡೆಗಟ್ಟಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕು. ಇದಕ್ಕಾಗಿ ದೀರ್ಘಕಾಲೀನ ಬಂಡವಾಳ ಗಳಿಕೆ ಮೇಲೆ ತೆರಿಗೆ ವಿಧಿಸುವುದು ಮತ್ತು ಅಲ್ಪಾವಧಿ ಬಂಡವಾಳ ಗಳಿಕೆ ಮೇಲೆ ತೆರಿಗೆ ವಿಧಿಸಬೇಕು.

ಇಂತಹ ಊಹಾತ್ಮಕ ಬಂಡವಾಳ ಹರಿದುಬರುವಿಕೆ ನಿಯಂತ್ರಿಸಲು ಈ ಬಜೆಟ್‌ನಲ್ಲಿ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು. ವಿದೇಶಿ ಹಣಕಾಸು ಸಂಸ್ಥೆಗಳು ಗಳಿಸುವ ಬಂಡವಾಳದ ಮೇಲಿನ ಆದಾಯವನ್ನು ನಿಯಂತ್ರಿಸುವುದು ಮಾತ್ರವಲ್ಲದೆ ಇದರಿಂದ ಆರ್ಥಿಕ ಸುಸ್ಥಿರತೆಯನ್ನು ಕಾಯ್ದುಕೊಳ್ಳಬಹುದು.

10. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಇತ್ತೀಚಿನ ದಿನಗಳಲ್ಲಿ ತೀವ್ರವಾಗಿ ಏರಿಕೆ ಕಂಡಿದೆ. ಹಣದುಬ್ಬರ ಹೆಚ್ಚಾಗುವುದರಿಂದಾಗಿ ಜನತೆಯ ಮೇಲೆ ಹೊರೆಯಾಗುವ ಇಂಧನ ದರಗಳನ್ನು ಹೆಚ್ಚಿಸದೆ, ದೀರ್ಘಕಾಲದಿಂದ ಪೆಂಡಿಂಗ್ ಇರುವ ಪೆಟ್ರೊಲಿಯಂ ಉತ್ಪನ್ನಗಳ ಮೇಲೆ ವಿಧಿಸುವ ಪರೋಕ್ಷ ತೆರಿಗೆಗಳ ಸಂರಚನೆಯನ್ನು ಪುನರ್ ರೂಪಿಸಬೇಕು. ಇದರಿಂದ ಸಂಕಷ್ಟದಲ್ಲಿರುವ ಪೆಟ್ರೋಲಿಯಂ ಕಂಪನಿಗಳ ಆದಾಯದಲ್ಲೂ ಹೆಚ್ಚಳ ಕಾಣಲಿದೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ವಿಧಿಸುವ ಮೇಲ್ತೆರಿಗೆಯಲ್ಲಿ ಸಂಗ್ರಹವಾಗುವ ಹಣದಲ್ಲಿ ಪೆಟ್ರೋಲಿಯಂ ಉತ್ಪನ್ನಗಳಿಗಾಗಿ ಬೆಲೆ ಸುಸ್ಥಿರ ನಿಧಿಯನ್ನು ಸ್ಥಾಪಿಸಬೇಕು.

ವೆಚ್ಚ ಆದ್ಯತೆ:

14. ರಾಷ್ಟ್ರೀಯ ಅಪರಾಧ ದಾಖಲೆ ಕೇಂದ್ರದ ವರದಿ ಪ್ರಕಾರ 2006ರಲ್ಲಿ ದೇಶದಲ್ಲಿ 17,000 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಯುಪಿಎ ಸರ್ಕಾರ ಇದುವರೆಗೂ ರೈತರ ಸಮಸ್ಯೆಗಳ ನಿವಾರಣೆಯತ್ತ ಗಮನ ಹರಿಸಿಲ್ಲ. ಹಾಗಾಗಿ 2008-09ರ ಬಜೆಟ್ ಕೃಷಿಕರ ಸಮಸ್ಯೆಗಳ ನಿವಾರಣೆಗೆ ಬದ್ಧವಾಗಿರಬೇಕು.

ಹನ್ನೊಂದನೇ ಹಣಕಾಸು ಯೋಜನೆಯಲ್ಲಿ ಅಳವಡಿಸಿರುವ ಆಹಾರ ಭದ್ರತೆ ಯೋಜನೆ ಮತ್ತು ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆಗೆ ಹೆಚ್ಚಿನ ಹಣ ಮೀಸಲಿಡುವುದರೊಂದಿಗೆ ಈ ಬಜೆಟ್‌ನಲ್ಲಿ ಸಮಗ್ರ ಸಾಲ ಮನ್ನಾ ಪ್ಯಾಕೇಜ್ ಪ್ರಕಟಿಸಬೇಕು.

ಅರೆ ಮನಸ್ಸಿನಿಂದ, ಆಯಾ ವಲಯಕ್ಕೆ ಪ್ರತ್ಯೇಕವಾಗಿ ನೀಡುವ ಪ್ಯಾಕೇಜ್‌ಗಳನ್ನು ಸ್ಥಳಾಂತರಿಸಿ ಕೃಷಿಕರ ಸಾಲ ಪರಿಹಾರ ಆಯೋಗದೊಂದಿಗೆ ಚರ್ಚಿಸಿ ದೇಶಾದ್ಯಂತ ಇರುವ ಸಣ್ಣ ಮತ್ತು ಅತಿ ಸಣ್ಣ ರೈತರ ಸಾಲಗಳನ್ನು ಮನ್ನಾ ಮಾಡಬೇಕು. ಕೃಷಿಕರ ಕುರಿತ ರಾಷ್ಟ್ರೀಯ ಆಯೋಗದ ಸಲಹೆಯಂತೆ ಕೃಷಿ ಸಾಲಗಳ ಮೇಲಿನ ಬಡ್ಡಿ ಪ್ರಮಾಣವನ್ನು ಶೇಕಡ 4ಕ್ಕೆ ಇಳಿಸಬೇಕು. ಬರ, ಪ್ರವಾಹದಂತಹ ಪ್ರಕೃತಿ ವಿಕೋಪಗಳಿಗೆ ತುತ್ತಾದ ಪ್ರದೇಶಗಳ ರೈತರ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು.

15. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಿಷ್ಠಗೊಳಿಸಲು ಮತ್ತು ಧಾನ್ಯ ಸಂಗ್ರಹಣೆಯನ್ನು ವಿಸ್ತರಿಸಲು ಈ ಬಜೆಟ್‌ನಲ್ಲಿ ಆಹಾರ ವಲಯಕ್ಕೆ ನೀಡುವ ಸಹಾಯದನವನ್ನು ಹೆಚ್ಚಿಸಬೇಕು. ಇತ್ತೀಚೆಗೆ ಅಗತ್ಯ ವಸ್ತುಗಳ ದರಗಳು ಭಾರಿ ಪ್ರಮಾಣದಲ್ಲಿ ಹೆಚ್ಚಿರುವುದು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಇನ್ನಷ್ಟು ಬಲಿಷ್ಠಗೊಳಿಸಬೇಕೆಂಬ ಅಗತ್ಯಯನ್ನು ತೋರಿಸಿದೆ. ಈ ಹಿಂದೆ ಮಾಡಿರುವ ಬಡತನ ಸಮೀಕ್ಷೆ ಅಂಕಿಅಂಶಗಳು ಅಪ್ರಸ್ತುತವಾಗಿವೆ. ಹಾಗೂ ಬಿಪಿಎಲ್ ವರ್ಗಗಳನ್ನು ಗುರುತಿಸುವಿಕೆ ತುಂಬಾ ಸಂಕೀರ್ಣವಾಗಿರುವುದರಿಂದ ಒಂದು ವರ್ಗದ ಜನಸಂಖ್ಯೆಯೇ ಆಹಾರ ಹಕ್ಕಿನಿಂದ ವಂಚಿತವಾಗಿದೆ. ಹಾಗಾಗಿ ಆಹಾರ ಭದ್ರತೆಯನ್ನು ಒದಗಿಸಬೇಕಾದರೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಅತಿ ಶೀಘ್ರವಾಗಿ ಪುನರ್ ರೂಪಿಸುವ ಅಗತ್ಯವಿದೆ.

16. 2007-08ನೆ ಸಾಲಿನ ಬಜೆಟ್‌ನಲ್ಲಿ ಶೈಕ್ಷಣಿಕ ವಲಯಕ್ಕೆ ಸ್ವಲ್ಪ ಹೆಚ್ಚು ಹಣ ನಿಗದಿಪಡಿಸಿದ್ದರೂ ಎನ್‌ಸಿಎಂಪಿಯಲ್ಲಿ ನಿಗದಿ ಮಾಡಿರುವಷ್ಟು ಇಲ್ಲ. ಹಾಗಾಗಿ 2008-09ರ ಬಜೆಟ್‌ನಲ್ಲಿ ಸರ್ವಶಿಕ್ಷಣ ಅಭಿಯಾನ, ಮಧ್ಯಾಹ್ನದ ಊಟ, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಸೇವೆಗಳಿಗೆ ಮೀಸಲಿಡುವ ಪ್ರಮಾಣ ಹೆಚ್ಚಿಸಬೇಕು. ಇದರೊಂದಿಗೆ ಹನ್ನೊಂದನೇ ಯೋಜನಾ ಆಯೋಗದಲ್ಲಿ ರೂಪಿಸಿರುವಂತೆ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ಸಾಮರ್ಥ್ಯ ವಿಸ್ತರಿಸಬೇಕು ಹಾಗೂ ಹೊಸ ವಿವಿಗಳನ್ನು ಸ್ಥಾಪಿಸಬೇಕು. ಸರ್ವರಿಗೂ ಶಿಕ್ಷಣದ ಹಕ್ಕನ್ನು ಒದಗಿಸಲು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣಕ್ಕೆ ಕೇಂದ್ರ ಅನುದಾನ ಹೆಚ್ಚಿಸುವುದು ತುಂಬಾ ಮುಖ್ಯವಾಗಿದೆ. 17. ಭಾರತ ನಿರ್ಮಾಣ್ ಯೋಜನೆ ಪ್ರಗತಿ ಕುಂಠಿತವಾಗಿದೆ. ಅದರಲ್ಲೂ ವಿಶೇಷವಾಗಿ ಗ್ರಾಮೀಣ ವಿದ್ಯುದೀಕರಣ ಅಗತ್ಯಕ್ಕಿಂತಲೂ ಕಡಿಮೆ ಇದೆ. ಭಾರತ್ ನಿರ್ಮಾಣ ಯೋಜನೆಗಳು ನಿಗದಿತ ಸಮಯಧ ಯೋಜನೆಗಳಾಗಿರುವುದರಿಂದ ನಿಗದಿತ ಅವರಿಗೆ ಪೂರ್ಣಗೊಳಿಸಬೇಕಾದರೆ ಅಗತ್ಯವಾದಷ್ಟು ಬಂಡವಾಳವನ್ನು ಮೀಸಲಿಡಬೇಕು. 2008-09ನೆ

ಪುಟ 15ಕ್ಕೆ

ಆಹಾರ ಭದ್ರತೆ ಕಾಪಾಡಿ, ಎಲ್ಲರಿಗೂ ರೇಷನ್ ಕಾರ್ಡ್ ನೀಡಿ

ಸಿಪಿಐ(ಎಂ) ವಿಜಾಪುರ ಜಿಲ್ಲಾ 17ನೇ ಜಿಲ್ಲಾ ಸಮ್ಮೇಳನದ ಆಗ್ರಹ

ಬಡವರೆಲ್ಲರಿಗೂ ಹಳದಿ ಪಡಿತರ ಚೀಟಿ ಕೂಡಲೇ ವಿತರಿಸಬೇಕು, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ವಿಜಾಪುರ ಜಿಲ್ಲೆಗೂ ಜಾರಿಗೊಳಿಸಬೇಕು. ಬಡವರ ಅಕ್ರಮ ಭೂಮಿ, ನಿವೇಶನ, ಮನೆಗಳನ್ನು ಸಕ್ರಮಗೊಳಿಸಬೇಕು. ಜಿಲ್ಲೆಯ ಬರ ನಿವಾರಣೆಗೆ ಸಮಗ್ರ ನೀರಾವರಿ ಅಭಿವೃದ್ಧಿ ಯೋಜನೆ ಜಾರಿಗೆ ತರಬೇಕು. ಎಲ್ಲಾ ಬೆಳೆಗಳಿಗೂ ಬೆಳೆವಿಮಾ ಜಾರಿಗೆ ತರಬೇಕು. ಆಯಾ ಬೆಳೆಗಳ ನಿಗಮಗಳನ್ನು ರಚಿಸಿ ಬೆಂಬಲಬೆಲೆ ಘೋಷಣೆ ಮಾಡುವಂತೆ ಆಗಬೇಕು. ಪಶ್ಚಿಮ ಬಂಗಾಲ ಮಾದರಿಯಲ್ಲಿ ಪರ್ಯಾಯ ಕೃಷಿ ನೀತಿ ಜಾರಿಗೆ ತಂದು ಆತ್ಮ ಹತ್ಯೆ ಮಾಡಿಕೊಳ್ಳುವ ರೈತರನ್ನು ರಕ್ಷಣೆ ಮಾಡಬೇಕು. ಸರಕಾರದ ಒಡೆತನದಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಿ, ಖಾಸಗಿ ಸಕ್ಕರೆ ಕಾರ್ಖಾನೆ ಮಾಲಿಕರ ಶೋಷಣೆಯಿಂದ ರೈತರನ್ನು ಮುಕ್ತಗೊಳಿಸಬೇಕು. ಎಪಿಎಂಸಿ ಮಾದರಿ ಕಾನೂನಿಗೆ ತಿದ್ದುಪಡಿ ತಂದು ಖಾಸಗಿ ಮಾರುಕಟ್ಟೆ, ವಿಶೇಷ ಮಾರುಕಟ್ಟೆ ನಿರ್ಮಾಣ ಮಾಡಲು ಬಹುರಾಷ್ಟ್ರೀಯ ಕಂಪನಿಗಳಿಗೆ ಅವಕಾಶ ನೀಡಿರುವುದನ್ನು ಕೈಬಿಡಬೇಕು. ಬಾಗಲಕೋಟೆಯಿಂದ ಗದಗವರೆಗಿನ ರೈಲ್ವೆ ಬ್ರಾಡ್‌ಗೇಜ್ ಪರಿವರ್ತನೆ ಕೆಲಸವನ್ನು ಶೀಘ್ರ ಪೂರ್ತಿಗೊಳಿಸಬೇಕು. ವಿಮಾನ ನಿಲ್ದಾಣದ ಕೆಲಸವನ್ನು ಶೀಘ್ರ ಕೈಗೆತ್ತಿಕೊಂಡು ಪೂರ್ತಿಗೊಳಿಸಬೇಕು. ಕೋಮುವಾದ ಜಾತಿವಾದವನ್ನು ತಡೆದು, ಕೋಮುಸೌಹಾರ್ದತೆ ಗಟ್ಟಿಗೊಳಿಸಬೇಕು. ಮಹಿಳೆಯರ ಮೇಲೆ ಅಲ್ಪಸಂಖ್ಯಾತರ ಮೇಲೆ ದಲಿತರ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಗಟ್ಟಬೇಕು. ಕುಡಿಯುವ ನೀರು ಸಮರ್ಪಕವಾಗಿ ಪೂರೈಸಬೇಕು ಮುಂತಾದ ನಿರ್ಣಯಗಳನ್ನು ಅಂಗೀಕರಿಸಿದ್ದು ಎಲ್ಲಿ?

ಸಿಪಿಐ(ಎಂ) ವಿಜಾಪುರ ಜಿಲ್ಲಾ 17ನೇ ಜಿಲ್ಲಾ ಸಮ್ಮೇಳನವು 29, 30 ಡಿಸೆಂಬರ್ 2007ರಂದು ನಗರದ ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಕಾಂ.ಸಿ.ಎಂ ಖಲಾಸಿ ಸಭಾಂಗಣದಲ್ಲಿ ನಡೆಯಿತು.

ಸಮ್ಮೇಳನದ ಮೊದಲ ದಿವಸ ನಗರದ ಶ್ರೀ ಸಿದ್ದೇಶ್ವರ ಗುಡಿಯಿಂದ ಮೆರವಣಿಗೆ ಹೊರಡಿಸಲಾಗಿತ್ತು. ನಗರದ ಪ್ರಮುಖ ರಸ್ತೆಗಳಲ್ಲಿ ಹಾಯ್ದು ಐತಿಹಾಸಿಕ ಸ್ಮಾರಕ ಬಾರಾಕಮಾನ ಮುಂದೆ ಬಹಿರಂಗ ಸಭೆ ನಡೆಸಲಾಯಿತು.

ಬಹಿರಂಗ ಸಭೆಯನ್ನು ಉದ್ಘಾಟಿಸಿ ಸಿ.ಪಿ.ಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಮಾರುತಿ ಮಾನ್ಪಡೆ ಮಾತನಾಡಿ ಕೇಂದ್ರ ಸರಕಾರದ ಉದಾರೀಕರಣ ಖಾಸಗೀಕರಣ, ಜಾಗತೀಕರಣ ನೀತಿಯಿಂದ ಜೋಳದ ಬೆಲೆ ಏರಿಕೆಯಾಗಿದ್ದು ಬಡಜನತೆ ಕಂಗಾಲು ಆಗಿದ್ದಾರೆ. ಆದರೆ ಬೆಲೆ ಏರಿಕೆಯ ಲಾಭ ಜೋಳ ಬೆಳೆದ ರೈತರಿಗಾಗಲಿ ಜೋಳ ಕೊಳ್ಳುವ ಗ್ರಾಹಕರಿಗಾಗಲಿ ಸಿಗುತ್ತಿಲ್ಲವೆಂದು ಬಹುರಾಷ್ಟ್ರೀಯ ಕಂಪನಿಗಳು, ಬಂಡವಾಳಗಾರರು ಮಧ್ಯವರ್ತಿಗಳು ಇದರ ಲಾಭ ಪಡೆಯುತ್ತಿದ್ದಾರೆ ಎಂದರು.

ಬಡವರ ಆಹಾರ ಧಾನ್ಯಗಳಾದ ಜೋಳ, ರಾಗಿ, ಗೋಧಿ ಮುಂತಾದ ಆಹಾರ ಧಾನ್ಯಗಳನ್ನು ನ್ಯಾಯ ಬೆಲೆ ಅಂಗಡಿಗಳ ಮುಖಾಂತರ ಪಡಿತರ ವ್ಯವಸ್ಥೆಯಲ್ಲಿ ವಿತರಿಸುವಂತೆ ಆಗಬೇಕು. ಇದರಿಂದ ಬಡಜನರಿಗೆ ಅನುಕೂಲವಾಗುವುದು ಎಂದು ಅವರು ಒತ್ತಾಯಿಸಿದರು.

ಬಡತನ ರೇಖೆಗಿಂತ ಕೆಳಗಿನ ಜನತೆಗೆ ನೀಡಲಾಗಿದ್ದ ಹಳದಿ ಪಡಿತರ ಚೀಟಿಯನ್ನು ಕಿತ್ತುಕೊಂಡು ಮಾಸಿಕ 350 ರೂ.ಗಳು ವರಮಾನವಿದ್ದವರಿಗೆ ಮಾತ್ರ ಪಡಿತರ ಚೀಟಿ ಎಂದು ಹೇಳುವ ಮೂಲಕ ಬಡಜನತೆಯನ್ನು ಆಹಾರ ಭದ್ರತೆಯ ಹಕ್ಕಿನಿಂದ ವಂಚಿಸಲಾಗುತ್ತಿದೆ. ಕಳೆದ 21 ತಿಂಗಳಿಂದ ಸರಕಾರ ಸುಳ್ಳು ಹೇಳುತ್ತಾ ಬಡವರಿಗೆ ಪಡಿತರ ಚೀಟಿ ನೀಡದೆ ವಂಚಿಸುತ್ತಿದೆ ಎಂದು ಟೀಕಿಸಿದರು.

ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಇನ್ನೊಬ್ಬ ಸದಸ್ಯರಾದ ಕಾಂ.ಜಿ.ಸಿ.ಬೈಯ್ಯಾರೆಡ್ಡಿ ಮಾತನಾಡಿದರು. ಬಿ.ಎಸ್.ಎನ್.ಎಲ್ ಕೇಂದ್ರಸಮಿತಿ ಸಹ ಕಾರ್ಯದರ್ಶಿ ಕಾಂ. ಜಿ.ಬಿ.ಸಾಲಕ್ಕಿ ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡಿದರು.

ಸಿಪಿಐ ಮುಖಂಡ ಪ್ರಕಾಶ್ ಹಿಟ್ನಳ್ಳಿ ಗ್ರಾಮ ಪಂಚಾಯತ್ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಕಾಂ.ಎಸ್.ಐ ಗದ್ದಗಿಮಠ ಲಾರಿ ಹಮಾಲರ ಸಂಘದ ಮಾಲಿಕ ಸಾಬ ಠಕ್ಕಳರ್ಕಿ ಬಹಿರಂಗ ಸಭೆಯಲ್ಲಿ ಪಾಲುಗೊಂಡಿದ್ದರು.

ಜಿಲ್ಲಾ ಕಾರ್ಯದರ್ಶಿ ಕಾಂ.ಅಣ್ಣಾರಾಯ ಈಳಗೇರ ಸ್ವಾಗತಿಸಿದರು. ಕಾಂ.ವಿ.ಎಂ. ಸೊನ್ನದ ಮಂಡಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಕಾಂ.ಭೀಮಶಿ ಕಲಾದಗಿಯವರು ವಹಿಸಿದ್ದರು.

ನಂತರ ಸಾಯಂಕಾಲ 4 ಗಂಟೆಗೆ ಹಿರಿಯ ಸಂಗಾತಿ ವ್ಹಿ.ಎಂ.ಸೊನ್ನದ ಅವರ ಧ್ವಜಾರೋಹಣ ಮಾಡುವುದರ ಮೂಲಕ ಸಮ್ಮೇಳನದ ಪ್ರತಿನಿಧಿ ಸಭೆ ಪ್ರಾರಂಭವಾಯಿತು.

ಕಾಂ.ಸುರೇಖಾ ರಜಪೂತ ಕಾಂ.ವ್ಹಿ.ಎಂ.ಸೊನ್ನದ, ಕಾಂ.ಕಾಮಣ್ಣಾ ಶಿರಾಗೋಳ ಅವರನ್ನೊಳಗೊಂಡ ಅಧ್ಯಕ್ಷ ಮಂಡಳಿಯನ್ನು ಸಮ್ಮೇಳನ ಪ್ರತಿನಿಧಿಗಳು ಆಯ್ಕೆ ಮಾಡಿತು.

ಜಿಲ್ಲಾ ಕಾರ್ಯದರ್ಶಿ ಕಾಂ.ಅಣ್ಣಾರಾಯ ಈಳಿಗೇರ ಅವರು ಸಮ್ಮೇಳನದಲ್ಲಿ ವರದಿ ಮಂಡನೆ ಮಾಡಿ ಮಾತನಾಡಿದರು.

ನೂತನ ಸಮಿತಿ ಆಯ್ಕೆ

ಸಮ್ಮೇಳನ 15 ಜನ ಸದಸ್ಯರಿರುವ ಜಿಲ್ಲಾ ಸಮಿತಿ ಸಮಿತಿ ಆಯ್ಕೆ ಮಾಡಿತು.

ಕಾಂ.ಅಣ್ಣಾರಾಯ ಈಳಿಗೇರ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆಯಾದರು. ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿ 1) ಕಾಂ.ಭೀಮಶಿ ಕಲಾದಗಿ 2) ಕಾಂ.ಸುರೇಖಾ ರಜಪೂತ 3) ಕಾಂ.ಶಿವಶರಣಪ್ಪ, 4) ಕಾಂ.ಕಾಂ.ಪರುತಯ್ಯ ಹಿರೇಮಠ ಅವರು ಆಯ್ಕೆಗೊಂಡರು. ಜಿಲ್ಲಾ ಸಮಿತಿ ಸದಸ್ಯರಾಗಿ 1) ಕಾಂ.ವಿ.ಎಂ.ಸೊನ್ನದ, 2) ಕಾಂ.ಸಂಜೀವರಾವ, 3) ಕಾಂ.ರಾಮಣ್ಣ ಶಿರಾಗೋಳ, 4) ಕಾಂ.ಲಕ್ಷ್ಮಿ ಮೈಲಾರಿ, 5) ಕಾಂ. ಚಿನ್ನಪ್ಪ ಕುಂಬಾರ, 6) ಕಾಂ.ಸಂಗನಬಸವ ಕಂಬಳಿ, 7) ಕಾಂ.ಬಸಪ್ಪ ಪರೀಟ 8) ಕಾಂ.ಜುಬೇದ ಹಣಗಿ, 9) ಕಾಂ.ಖಾಜೇಸಾಬ ಕೋಲಾರ, 10) ಕಾಂ.ಭೀಮಶಿ ಕೋಟ್ಯಾಳ ಅವರನ್ನು ಆಯ್ಕೆ ಮಾಡಿತು. ಕಾಂ.ಭೀಮಶೀ ಕಲಾದಗಿಯವರ ವಂದನಾರ್ಪಣೆಯೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

ಸಮ್ಮೇಳನದ ದಿನಾಂಕ ನಿಗದಿಯಾದಂದಿನಿಂದ ಹಲವಾರು ಎಡರು ತೊಡರುಗಳನ್ನು ಎದುರಿಸಬೇಕಾಯಿತು. ಸ್ವಯಂ ಸೇವಾ ಸಂಸ್ಥೆಗಳು ವಿವಿಧ ಸಂಘಟನೆಗಳು ಸಮ್ಮೇಳನ ವಿಫಲಗೊಳಿಸಬೇಕೆಂಬ ಅಡೆತಡೆಗಳ ಮಧ್ಯೆಯೂ ಸಮ್ಮೇಳನವು ಯಶಸ್ವಿಯಾಗಿ ನಡೆಯಿತು.

ಬದುಕುವ ಕಲೆ...............

ಪುಟ 8 ರಿಂದ

ಮನಸ್ಸಾಕ್ಷಿಯನ್ನು ಮರೆಯಲು ಈ ವಾದವು ಸಹಾಯಕ. ಅದೇ ರೀತಿಯಲ್ಲಿ ಶೋಷಣೆಗೊಳಗಾದ ಬಡವರು ತಮ್ಮ ಪರಿಸ್ಥಿತಿಯನ್ನು ಸುಧಾರಿಸಲು ಯಾವುದೇ ಪ್ರಯತ್ನ ಮಾಡಬಾರದೆಂಬುದಕ್ಕೂ ಇದೇ ವಾದ ಇಂಬು ಕೊಡುತ್ತದೆ. ತತ್ಕಾರಣ, ಈತನ ಆಶ್ರಮಕ್ಕೆ ಮಲ್ಯ, ಟೈಮ್ಸ್ ಆಫ್ ಇಂಡಿಯಾದ ಜೈನ್, ಸ್ಟೇಟ್ಸ್ ಮ್ಯಾನ್‌ನ ಭಾರತಿಯಾ ಇಂತಹ ಬಂಡವಾಳಶಾಹಿಗಳು ನುಗ್ಗುವುದು. ಐಷಾರಾಮದ ಬದುಕನ್ನು ಸಾಗಿಸಿ, ತಮ್ಮ ದಂತ ಗೋಪುರಗಳ ಹೊರಗಿರುವ ದುಃಖ ದಾರಿದ್ರ್ಯಗಳನ್ನು 'ಮರೆಯಲು' ಐಟಿ, ಬಿಪಿಓಗಳ ನವ ಶ್ರೀಮಂತರು ಆರ್ಟ್ ಆಫ್ ಲಿವಿಂಗ್‌ನ ತರಗತಿಗಳಿಗೆ ಹೋಗುವುದು.

'ನೃತ್ಯ' ಕ್ಕೆ ಆಹ್ವಾನ:

ಸಾಮಾಜಿಕ ರಂಗದಲ್ಲೂ ಈತನ ಇಗೋ, ಮುಂಗೋಪಿತನ, ಸ್ವಪ್ರತಿಷ್ಠೆ ಮರೆಸುವುದಕ್ಕೆ ಮಿತಿಯಿಲ್ಲ. ತನ್ನ 50ನೇ ಜನ್ಮದಿನವನ್ನು ಆರ್ಟ್ ಆಫ್ ಲಿವಿಂಗ್‌ನ ಸಿಲ್ವರ್ ಜ್ಯೂಬಿಲಿ ಎಂದು ಬೆಂಗಳೂರಿನಲ್ಲಿ ನಡೆಸಿದ ಆಡಂಬರದ ಪ್ರದರ್ಶನವು ಕೆಲವು ವರ್ಷಗಳ ಹಿಂದೆ ನಡೆದಿತ್ತು. ಅದೇ ರೀತಿಯಲ್ಲಿ, ಚೆನ್ನೈಯಲ್ಲಿ ಈತ ತನ್ನ ಸ್ವಪ್ರತಿಷ್ಠೆಯನ್ನು ಮೆರೆಸಲು ಸಾವಿರಾರು ಬಾಲಕಿಯರನ್ನು ತನ್ನ ಎದುರು ನರ್ತಿಸಲು ಆಹ್ವಾನಿಸಿದ್ದ. ಅತ್ಯಂತ ಪ್ರತಿಷ್ಠಿತ ನೃತ್ಯಶಾಲೆಯ [illegible] ತಮ್ಮ ವಿದ್ಯಾರ್ಥಿನಿಯರನ್ನು ಈ ಕಾರ್ಯಕ್ರಮಕ್ಕೆ ಕಳುಹಿಸಲು ಒಪ್ಪದಿದ್ದಕ್ಕಾಗಿ, ಅವರನ್ನು ಅವಮಾನತು ಮಾಡಬೇಕೆಂದು ಕೇಳಿಕೊಂಡಿದ್ದ. ಇದೇ ರೀತಿಯಲ್ಲಿ ಎಲ್‌ಟಿಟಿಇ ಯನ್ನು ಬಗ್ಗುಬಡೆಯಲು ಭಾರತದ ಸೇನೆಯನ್ನು ಶ್ರೀಲಂಕಾಕ್ಕೆ ಕಳುಹಿಸಬೇಕೆಂದು ಹೇಳಿ, ತಮಿಳು ಸಂಘಟನೆಗಳ ಟೀಕೆಗಳಿಗೊಳ ಗಾಗಿದ್ದ.

ಈತನ ಶ್ರೀ ಶ್ರೀ ಯೋಗವಾಗಲಿ, ಆರ್ಟ್ ಆಫ್ ಲಿವಿಂಗ್ ಆಗಲಿ, ಸೋಹಂ ಯೋಗವಾಗಲಿ ಏನು? ಈತನ ಸಂಪತ್ತನ್ನು ವೃದ್ಧಿಸುವ ವಿಧಾನಗಳು. ತನ್ನ ಯೋಗದ ಮೇಲೆ ಪೇಟೆಂಟ್ ಪಡೆದ ಆತನಿಗೆ ಈ ತರಬೇತಿಗೆ ಸೇರುವ ಪ್ರತಿಯೊಬ್ಬರೂ ಹಣ ಕೊಡಲೇ ಬೇಕು. ಈ ಹಣವು ಆತನ ಬೇರೆ-ಬೇರೆ ಟ್ರಸ್ಟ್‌ಗಳಿಗೆ ಹೋಗುತ್ತದೆ. ಅಲ್ಲಿ ಸಾವಿರಾರು ಕೋಟಿ ರೂಪಾಯಿಗಳು ಈಗಾಗಲೇ ಶೇಖರವಾಗಿವೆ. ಸರ್ಕಾರಿ ಜಮೀನಂತೂ ಈತನಿಗೆ ಕಡಿಮೆ ಬೆಲೆಯಲ್ಲಿ ಸಿಗದಿರುವಾಗುತ್ತದೆ. ಈ ಸಂಘಟನೆಗಳು ಇನ್‌ಕಂಟ್ಯಾಕ್ಸ್ ವಿನಾಯಿತಿ ಪಡೆದಿವೆ. ದೊಡ್ಡ-ದೊಡ್ಡ ರಾಜಕಾರಣಿಗಳು, ಉದ್ಯೋಗ ಪತಿಗಳು ಈ ಜಾಲದಲ್ಲಿರುವ ಕಾರಣ ಆತನಿಗೆ ಎಲ್ಲಾ ಸರ್ಕಾರಿ ಸೌಲಭ್ಯಗಳು ಸಿಗುತ್ತವೆ.

> ಈ ಮನುಷ್ಯ ಬೆಂಗಳೂರಿನಲ್ಲಿ ಎಲ್ಲಾದರೂ ನಾಲ್ಕು ದಿನ ಗಾರೆ ಕೆಲಸ ಮಾಡಿ ಬದುಕಿದರೆ ಆಗ ನಿಜವಾಗಲೂ 'ಬದುಕುವ ಕಲೆ' ಏನೂಂತ ಅರ್ಥವಾಗುತ್ತದೆ.
>
> – ರವಿ, ಶ್ರೀರಾಮಪುರ

ಇವ ಮತೀಯವಾದಿ – ಎಚ್ಚರ:

ಈತನ ಕತ್ತೆ ಚಾಕರಿ ಮಾಡಲು ಮತಿಮಜ್ಜನ ಕ್ರಿಯೆಗೊಳಗಾದ ಸಾವಿರಾರು ಮಂದಿ ಇದ್ದಾರೆ. ಇವರಲ್ಲಿ ಹೆಣ್ಣು ಮಕ್ಕಳೇ ಹೆಚ್ಚು. ಒಟ್ಟಿನಲ್ಲಿ, ಈ ವ್ಯಕ್ತಿಯು ಜನರನ್ನು ತನ್ನ ಜಾಲಕ್ಕೆ ಸಿಕ್ಕಿಸಿಕೊಂಡು, ಅವರ ರಕ್ತ ಹೀರುವ ಜೇಡನಂತಿರುವುದರಲ್ಲಿ ಎರಡನೆಯ ಮಾತಿಲ್ಲ. ರಾಜಕೀಯ ರಂಗದಲ್ಲಿ ಆತ ಮತೀಯ ಶಕ್ತಿಗಳೊಂದಿಗಿದ್ದಾನೆ. ತಮ್ಮನ್ನು ಸ್ವಾಮಿಗಳೆಂದು ಕರೆಸಿಕೊಳ್ಳುವವರಿಗೆ ಯಾವುದೇ ಕಾನೂನುಗಳು ಅನ್ವಯವಾಗಬಾರದೆಂದು ವಾದಿಸುವ ಗುಂಪಿನಲ್ಲಿ ಈತನೂ ಪ್ರಮುಖ. ಮನಶಾಂತಿ ಸಿಗುತ್ತದೆ. ಆಯುಸ್ಸು ವೃದ್ಧಿಯಾಗಬಹುದು, ರೋಗಗಳು ವಾಸಿಸಬಹುದೆಂಬ ಭ್ರಮೆಯಿಂದ ಆರ್ಟ್ ಆಫ್ ಲಿವಿಂಗ್‌ಗೆ ಸೇರಲು ಬಯಸುವವರು ಈ ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅಗತ್ಯ. ದುಡಿಯುವ ವರ್ಗದವರನ್ನು ನಿಯಂತ್ರಿಸುವ ಇಂತಹ ಬಂಡವಾಳಶಾಹಿಗಳ ಕೈಗೊಂಬೆಗಳಾದ, ತಮ್ಮ ಜಾಲದಲ್ಲಿ ಸಿಕ್ಕಿದವರನ್ನು ರಕ್ತ ಹೀರಿ ನಿಷ್ಕ್ರಿಯಗೊಳಿಸುವ ಇಂತಹ 'ಬದುಕುವ ಕಲೆ' ಮುಂತಾದ ಕಾರ್ಯಕ್ರಮಗಳ ಬಗ್ಗೆ ಪ್ರಜ್ಞಾವಂತರು ಜಾಗ್ರತಿಯಿಂದಿರಬೇಕು. ○

ಕಲ್ಲುಗಾಣಿರಿಕೆ....

ಪುಟ 9 ರಿಂದ

ಮಾಡುತ್ತಿದ್ದಾರೆ ಎಂಬ ಕೀಳುಮಟ್ಟದ ಅಪಪ್ರಚಾರವನ್ನೂ ನಡೆಸಲಾಯಿತು. ಈ ರೀತಿಯ ಅಗ್ಗದ ಪ್ರಚಾರಕ್ಕೆ ಮುಂದಾದ ಜಿಲ್ಲಾ ಪಂಚಾಯಿತಿ ಸದಸ್ಯರೊಬ್ಬರಿಗೆ ಬಹಿರಂಗ ಚರ್ಚೆಗೆ ರೈತ ಸಂಘದ ಮುಖಂಡರಾದ ಹೋಳೂರು ಶಂಕರ್ ಮತ್ತು ಟಿ.ಎಂ.ಮಂಜುನಾಥ ಪಂಥಾಹ್ವಾನ ನೀಡಿದ್ದಾರೆ.

ನೂರಾರು ವರ್ಷಗಳಿಂದ ಕಟ್ಟಿಕೊಂಡ ನಮ್ಮ ಜೀವನವನ್ನು ಉಳಿಸಿಕೊಡಿ ಎಂದು ಮೊರೆಯಿಡಲು ಉರಿಬಿಸಿಲಿನಲ್ಲಿ ಹತ್ತಾರು ಕಿ.ಮೀ. ನಡೆದುಕೊಂಡು ಬಂದ ಜನರ ಜತೆ ಜಿಲ್ಲಾ ಆಡಳಿತ ವರ್ತಿಸಿದ ರೀತಿಯಂತೂ ಹೇಯವಾದದು. ಜಿಲ್ಲಾಧಿಕಾರಿ ಆದೇಶಿಸಿದ್ದ 144ನೇ ಸೆಕ್ಷನ್ ಜಾರಿಯಲ್ಲಿದ್ದರಿಂದ ಚಳುವಳಿಗಾರರು ಜಿಲ್ಲಾಧಿಕಾರಿ ಕಛೇರಿ ಆವರಣ ಸಮೀಪಿಸಲೂ ಬಿಡದೆ ರಸ್ತೆಯಲ್ಲೇ ತಡೆಗಟ್ಟಿದ ಪೋಲೀಸ್ ಪಡೆ ಅನುಚಿತವಾಗಿ ವರ್ತಿಸಿತು. ಇದರ ಜತೆ, ಜಿಲ್ಲಾಧಿಕಾರಿ ಇಲ್ಲದೇ ಇದ್ದುದು ಪ್ರತಿಭಟನಾಕಾರರ ಆಕ್ರೋಶಕ್ಕೆ ಪೆಟ್ರೋಲ್ ಸುರಿದಂತಾಯಿತು. ಮುಂಚಿತವಾಗಿ ಮಾತನಾಡಿ ಸಮಯ ನಿಗದಿಪಡಿಸಿಕೊಂಡಿದ್ದರೂ, ನೂರಾರು ಜನರು ಹತ್ತಾರು ಕಿ.ಮೀ. ಪಾದಯಾತ್ರೆಯಲ್ಲಿ ಬಂದಿದ್ದರೂ ಜಿಲ್ಲಾಧಿಕಾರಿ ಸ್ವಸ್ಥಾನದಲ್ಲಿ ಇರದೇ ಬೇರೆ ಕಡೆ ತೆರಳಿ ಬೇಜವಾಬ್ದಾರಿ ಪ್ರದರ್ಶಿಸಿದರು. ಜಿಲ್ಲಾಧಿಕಾರಿ ಜಿ.ರಾಮಚಂದ್ರ ಗಣಿ ಮಾಫಿಯಾದ ಸೂಟ್ ಕೇಸ್‌ಗಳಿಗೆ ಮಾರಾಟವಾಗಿದ್ದಾರೆ ಎಂದು ಚಳುವಳಿಗಾರರು ಟೀಕಿಸಿದರು.

ಜಿಲ್ಲಾಧಿಕಾರಿ ಗೈರಿನಿಂದ ಕೋಪೋದ್ರಿಕ್ತರಾದ ಪ್ರತಿಭಟನಾಕಾರರು ರಸ್ತೆಯಲ್ಲೇ ಬಹಳ ಹೊತ್ತು ಧರಣೆ ನಡೆಸಿ ತಮ್ಮ ಹೋರಾಟದ ಕೆಚ್ಚನ್ನು ಪ್ರದರ್ಶಿಸಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಿ.ಅರ್ಜುನನ್, ಡಿವೈಎಫ್‌ಐನ ಎ.ವಿ.ವೆಂಕಟರಾಮ್, ಜನವಾದಿ ಮಹಿಳಾ ಸಂಘಟನೆಯ ವಿ.ಗೀತಾ, ಸಿಐಟಿಯು ಜಿಲ್ಲಾಧ್ಯಕ್ಷ ಗಾಂಧಿನಗರ ನಾರಾಯಣಸ್ವಾಮಿ ಮೊದಲಾದ ಮುಖಂಡರು ಧರಣಿ ನಿರತರನ್ನುದ್ದೇಶಿಸಿ ಮಾತನಾಡಿ ಹೋರಾಟಕ್ಕೆ ಬೆಂಬಲ ಸೂಚಿಸಿದರು. ○

ಅಂಗನವಾಡಿಯ ಕಾರ್ಯಕರ್ತೆ -ಸಹಾಯಕಿಯರ ದಂಡು ಬೆಂಗಳೂರಿಗೆ ಬಂತು. ಕೇಂದ್ರ ರಾಜ್ಯ ಸರ್ಕಾರಗಳ ನೌಕರದ್ರೋಹಿ ನೀತಿಗಳನ್ನು ವಿರೋಧಿಸಿ ಯಶಸ್ಸು ಕಂಡಿತು.



ಅಮಾನವೀಯ ಧೋರಣೆ ಹಿಮ್ಮೆಟ್ಟಿಸಿದ ಅಂಗನವಾಡಿ ನೌಕರರು

'ದುಡಿಮೆಗೆ ತಕ್ಕ ಪ್ರತಿಫಲ ನೀಡದಿದ್ದರೂ, ಮೈಮುರಿಯ ದುಡಿಸಿಕೊಳ್ಳಬೇಕೆಂಬುದು ನಮ್ಮ ಸರ್ಕಾರದ ನೀತಿ. ಹತ್ತೆಂಟು ರೀತಿಯ ಸರ್ಕಾರಿ ಕರ್ತವ್ಯಗಳನ್ನು ನಿಭಾಯಿಸಿ, ದುಡಿದರೂ 'ಇವರನ್ನು' ಸರ್ಕಾರಿ ನೌಕರರು ಎಂದು ಪರಿಗಣಿಸಲು, ಅವರ ಶ್ರಮಕ್ಕೆ ತಕ್ಕ ವೇತನ ನೀಡಲು ತಯಾರಿಲ್ಲದ ನಮ್ಮ ಸರ್ಕಾರ ಈ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸುವ ರೀತಿ, ಹೇರಲು ಯತ್ನಿಸುವ ಷರತ್ತುಗಳನ್ನು ನೋಡಿದರೆ ಇದೇನು 'ನಾಗರೀಕ ಯುಗ' ದ ಸರ್ಕಾರವೋ ಅಥವಾ ಗುಲಾಮಗಿರಿ ವ್ಯವಸ್ಥೆಯೋ ಎಂಬ ಅನುಮಾನ ಮೂಡುತ್ತದೆ.

ಅಂಗನವಾಡಿ ಎಂಬುದು ದೇಶದ ತಾಯಿ ಮತ್ತು ಮಕ್ಕಳ ಆರೋಗ್ಯ ಕಾಪಾಡುವ ನಿಟ್ಟಿನಿಂದ ಜಾರಿಗೆ ಬಂದಿರುವ ಒಂದು ವ್ಯವಸ್ಥೆ. ಸಾರ್ವಜನಿಕ ಒತ್ತಡ, ನ್ಯಾಯಾಲಯಗಳ ಮಧ್ಯಪ್ರವೇಶ ಮುಂತಾದವು ಈ ವ್ಯವಸ್ಥೆ ಜಾರಿಗೆ ಬಂದು ಇನ್ನೂ ಮುಂದುವರಿಯಲು ಕಾರಣವಾಗಿವೆ. ಕೇಂದ್ರ ಸರ್ಕಾರದ ನಿರ್ದೇಶನದ ಆಧಾರದಲ್ಲಿ ರಾಜ್ಯ ಸರ್ಕಾರ ಸುತ್ತೋಲೆಯೊಂದನ್ನು ಹೊರಡಿಸಿದೆ. ಜೊತೆ ರಾಜ್ಯ ಸರ್ಕಾರವೂ ಕೆಲವೊಂದು ಹೊಸ ನಿರ್ಬಂಧಗಳನ್ನು ಹಾಕಿದೆ.

ಹೊಸ ಮೇಲ್ವಿಚಾರಣೆ

ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಕೆಲಸಗಳ ಮೇಲ್ವಿಚಾರಣೆಗೆಂದೇ ಇಲಾಖೆಯ ಅಧಿಕಾರಿಗಳು ಇದ್ದಾರೆ. ಆದರೆ ಅದೂ ಸಾಲದೆಂದು ಈಗ ಹೊಸದಾಗಿ ರಚಿಸಲಾಗುತ್ತಿರುವ 'ಬಾಲವಿಕಾಸ ಸಮಿತಿ'ಗೆ ಈ ಜವಾಬ್ದಾರಿ ನೀಡಲಾಗಿದೆ. ಅಂಗನವಾಡಿ ಯೋಜನೆಯ ಅಂದರೆ ಐಸಿಡಿಎಸ್ ಮಾರ್ಗದರ್ಶಿ ಸೂಚನೆಯ ಪ್ರಕಾರವೇ ಕಾರ್ಯಕರ್ತೆಯರ ಕೆಲಸದ ಅವಧಿ ನಾಲ್ಕುವರೆ (4 1/2) ಗಂಟೆಗಳು ಮಾತ್ರ. ಆದರೆ ಹೊಸ ಆದೇಶವು ಬೆಳಿಗ್ಗೆ 9.30 ರಿಂದ 4.30 ರತನಕ ಕೆಲಸ ಎನ್ನುತ್ತಿದೆ. ಇದು ಸಾಲದೆಂದು ಅಂಗನವಾಡಿಗೆ ಸ್ವಂತ ಕಟ್ಟಡ ಇಲ್ಲದಿದ್ದ ಸಂದರ್ಭದಲ್ಲಿ ಸರ್ಕಾರಿ ಶಾಲೆಯಿಂದ ಬಿಸಿಯೂಟವನ್ನು ತೆಗೆದುಕೊಳ್ಳುವ ಪ್ರಸ್ತಾಪ ಮುಂದಿಡಲಾಗಿದೆ. ಅಂಗನವಾಡಿಗೆ ಸ್ವಂತ ಕಟ್ಟಡ ಇಲ್ಲವಾದಲ್ಲಿ ಸರ್ಕಾರ ಕಟ್ಟಡ ಕೊಡಬೇಕೋ ಪರಾವಲಂಬನೆ, ಕೆಲಸದ ಹೊರೆ, ಗೊಂದಲ ಹೆಚ್ಚಿಸುವ ಪರಿಹಾರ ಸೂಚಿಸಬೇಕೋ?

ಕನಿಷ್ಟ ಕೂಲಿ ಎಂದು ಸರ್ಕಾರವೇ ನಿಗದಿ ಮಾಡಿದ ಕೂಲಿಯನ್ನು ಅಂಗನವಾಡಿಯಲ್ಲಿ ದುಡಿಯುವವರಿಗೆ ಕೊಡದಿರುವಾಗ ನಿಕೃಷ್ಟ 'ಗೌರವ ಧನ' ವನ್ನು ಮಾತ್ರ ಪಡೆಯುವ ಇವರು ದಿನವಿಡಿ ದುಡಿಯಲಿ ಎಂದು ಸರ್ಕಾರ ಬಯಸುವುದಾದರೂ ಹೇಗೆ?

ಇದು ಸಾಲದೆಂದು ಮಕ್ಕಳ ಆಟಿಕೆಗಳನ್ನು ಕೊಳ್ಳಲು ನೀಡುವ ಹಣವನ್ನು ಕಾರ್ಯಕರ್ತೆ ಮತ್ತು ಸಮಿತಿಯ ಅಧ್ಯಕ್ಷರ ಹೆಸರಲ್ಲಿ ಜಂಟಿ ಖಾತೆ ತೆರೆದು ಪಡೆದುಕೊಳ್ಳಬೇಕೆಂಬ ಆದೇಶ...

ಒಪ್ಪಲಿಲ್ಲ

ಸುದೀರ್ಘ ಹೋರಾಟದ ಪರಂಪರೆಯ



ಅಂಗನವಾಡಿ ಚಳುವಳಿ ಅಷ್ಟು ಸುಲಭವಾಗಿ ಇಂತ ಅವೈಜ್ಞಾನಿಕ, ನೌಕರರ ವಿರೋಧಿ ಧೋರಣೆಯನ್ನು ಒಪ್ಪುವುದೇ? ಇಲ್ಲ ಒಪ್ಪಲಿಲ್ಲ. ನಿವೃತ್ತಿ ವೇತನ ನೀಡಬೇಕು. ಕೇಂದ್ರ, ರಾಜ್ಯ ಸರ್ಕಾರದ ಗೌರವಧನ ಪ್ರತಿ ತಿಂಗಳೂ 5ನೇ ತಾರೀಖಿನೊಳಗೆ ಪಾವತಿಯಾಗಬೇಕು. ಮುಂದಿನ ಬಜೆಟ್‌ನಲ್ಲಿ ಕಾರ್ಯಕರ್ತೆ-ಸಹಾಯಕಿಯರ ಸ್ಥಿತಿಗತಿ ಸುಧಾರಣೆಗೆ ನಿಗದಿಪಡಿಸಿದ 2,500 ಕೋಟಿ ರೂ. ಒಳಗೊಂಡು ಒಟ್ಟಾರೆ ಐಸಿಡಿಎಸ್‌ಗೆ ಕನಿಷ್ಟ 12,000 ಕೋಟಿ ರೂ. ನೀಡಬೇಕು ಮುಂತಾದ ಬೇಡಿಕೆಗಳನ್ನು ಸೇರಿಸಿಕೊಂಡು ಜಂಟಿ ಹೋರಾಟಕ್ಕೆ ಇಳಿದೇ ಬಿಟ್ಟರು.

ಸಿಐಟಿಯು ಮತ್ತು ಟಿಯುಸಿಸಿ ನೇತೃತ್ವದ ಸಂಘಟನೆಗಳು ಸೇರಿ ರಚಿಸಲಾದ 'ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಯುಕ್ತ ಸಂಘರ್ಷ ಸಮಿತಿ, ಅಡಿಯಲ್ಲಿ ರಾಜ್ಯ ಮಟ್ಟದ ಬೃಹತ್ ಪ್ರತಿಭಟನೆ ನಡೆಯಿತು.

ಈ ಹೋರಾಟದ ಕುರಿತು ಜನವರಿ 26 ರಂದು ತೀರ್ಮಾನಿಸಿದರೂ ಕೇವಲ 10 ದಿನಗಳಲ್ಲಿಯೇ 7 ರಿಂದ 8 ಸಾವಿರ ಜನರು ರಾಜ್ಯದ ವಿವಿಧ ಭಾಗಗಳಿಂದ ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಿದ್ದಾರೆ. ಸಮಸ್ಯೆ ಅಷ್ಟು ತೀವ್ರವಾಗಿದೆ.

ಮೆರವಣಿಗೆ ರೈಲ್ವೆ ನಿಲ್ದಾಣದಿಂದ ಪ್ರಾರಂಭವಾಗಿ ಚಾಲುಕ್ಯ ಸರ್ಕಲ್‌ನ್ನು ಪ್ರತಿಭಟನಾ ಸಭೆಯನ್ನು ನಡೆಸಲಾಯಿತು.

ಈ ಸಭೆಯನ್ನುದ್ದೇಶಿಸಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ವಿಜೆಕೆ ನಾಯರ್, ಟಿಯುಸಿಸಿಯಿಂದ ಕಾಂ. ಜಿ.ಆರ್.ಶಿವಶಂಕರ್, ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ, ರಾಜ್ಯಾಧ್ಯಕ್ಷೆ ಶಾಂತ ಘಂಟಿ, ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರ ಸಂಘಟನೆಯ ಮುಖಂಡರಾದ ಕಾಂ:ರಾಧಾಕೃಷ್ಣ ಮತ್ತು ಕಾಂ ಯು.ಡಿ. ನರಸಿಂಹಯ್ಯರವರು, ಜೆಎಂಎಸ್ ರಾಜ್ಯ ಕಾರ್ಯದರ್ಶಿ ಕೆ.ಎಸ್.ಲಕ್ಷ್ಮಿಯವರು ಮಾತನಾಡಿದರು.

ಭರವಸೆ

ನಂತರ ರಾಜ್ಯಪಾಲರನ್ನು ಕಾಂ. ಶಾಂತ, ಕಾಂ. ಯಮುನಾ, ಕಾಂ.ಲಕ್ಷ್ಮಿದೇವಿ, ಕಾಂ. ಕಮಲಾ, ಕಾಂ. ರವೀಂದ್ರಸಾಗರ್ (ಶಿವಮೊಗ್ಗ)ರವರು ಮತ್ತು ಎಸ್. ವರಲಕ್ಷ್ಮಿ ಟಿಯುಸಿಸಿ ಜಿ. ಆರ್. ಶಿವಶಂಕರ್ ನೇತೃತ್ವದ ತಂಡ ಭೇಟಿಯಾಗಿ ಚರ್ಚಿಸಿತು.

ಅವರು ಕೂಡಲೇ- ಸಿಗುತ್ತಿರುವ ಸೌಲಭ್ಯಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸಲು, ಪೆನ್ಷನ್ ಮತ್ತಿತರ ವಿಚಾರಗಳ ಬಗ್ಗೆ ವರದಿಯನ್ನು ತರಿಸಿಕೊಂಡು ಚರ್ಚಿಸುವುದಾಗಿಯೂ, ಅಗತ್ಯ ಬಿದ್ದರೆ ಜಂಟಿ ಸಭೆಯನ್ನು ಕರೆಯುವುದಾಗಿಯೂ ಭರವಸೆ ನೀಡಿದ್ದಾರೆ.

ಈ ಹೋರಾಟವನ್ನು ಐಸಿಡಿಎಸ್ ಜಂಟಿ ನಿರ್ದೇಶಕರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಬಾಲವಿಕಾಸ ಸಮಿತಿಯಲ್ಲಿ ಚಳುವಳಿ ವಿರೋಧಿಸುತ್ತಿರುವ ಅಂಶಗಳನ್ನೂ ವಾಪಸ್ಸು ತೆಗೆಯುವುದಾಗಿಯೂ ಹಾಗೂ ಬಿಸಿಯೂಟದಿಂದ ಅಂಗನವಾಡಿ ಕೇಂದ್ರಕ್ಕೆ ಊಟ ತೆಗೆದುಕೊಳ್ಳುವುದಿಲ್ಲವೆಂದೂ ತಿಳಿಸಿದರು.

ಒಟ್ಟಾರೆ ಈ ಹೋರಾಟದ ಪ್ರಮುಖ ಬೇಡಿಕೆಗಳು ಈಡೇರಿ ಯಶಸ್ವಿಯಾಗಿದೆ.ಇನ್ನು ಹಲವು ಪ್ರಮುಖ ಬೇಡಿಕೆಗಳ ಆಧಾರದಲ್ಲಿ ಫೆಬ್ರವರಿ 18 ರಂದು ಬೃಹತ್ ಪಾರ್ಲಿಮೆಂಟ್ ಚಲೋ ಹೋರಾಟ ನಡೆಯುತ್ತಿದ್ದು, ಕರ್ನಾಟಕದಿಂದಾಗಿ ಹೋರಾಟದಲ್ಲಿ ಪಾಲ್ಗೊಳ್ಳಲು ತೀರ್ಮಾನಿಸಲಾಗಿದೆ. ○

ಮಂಡ್ಯ : ಬಿಲ ಹುಡುಕುತ್ತಿರುವ ಬಿಜೆಪಿ

ರಾಜ್ಯ ವಿಧಾನಸಭೆಯಲ್ಲಿ ವಿಶ್ವಾಸ ಮತ ಸಿಗದೆ ರಾಜೀನಾಮೆ ನೀಡಿ, ಅಧಿಕಾರ ಮೋಹದಿಂದ ಕುರುಡಾಗಿರುವ ಬಿಜೆಪಿ ನಡೆಸಿದ ಜನಜಾಗೃತಿ ಯಾತ್ರೆ ಜನರ ಸ್ಪಂದನೆ ಇಲ್ಲದೆ ವಾಪಾಸ್ಸಾಗಿತ್ತು. ಜೆಡಿ(ಎಸ್) ಮತ್ತು ಕಾಂಗ್ರೆಸ್ ನಡುವಿನ ಗೌಡರ ಗದ್ದಲದ ಮಂಡ್ಯದಲ್ಲಿ ಬಿಜೆಪಿ ಸ್ಥಿತಿ ಬಿಲ ಹುಡುಕುತ್ತಿರುವ ವಿಷ ಸರ್ಪದಂತಿದೆ.

ಏನಾದರೂ ಮಾಡಿ ದಕ್ಷಿಣ ಕರ್ನಾಟಕದಲ್ಲಿ ಅದರಲ್ಲೂ ಮಂಡ್ಯ ಜಿಲ್ಲೆಯಲ್ಲಿ ನೆಲೆ ಊರಲು ನಡೆಸಿದ ಎಲ್ಲಾ ಕೋಮುವಾದಿ ಸರ್ಕಸ್‌ಗಳು, ಅನ್ಯಾಯ ಆಯಿತೆಂಬ ಹುಯಿಲು ಪ್ರಯೋಜನಕ್ಕೆ ಬರದಿದ್ದನ್ನು ಕಂಡು ಬಿಜೆಪಿಯು ಈಗ ಕಬ್ಬಿಗೆ ಬೆಲೆ ನಿಗದಿಗೆ ಆಗ್ರಹಿಸಿ ಶಿವಪುರದ ಸತ್ಯಾಗ್ರಹದ ಸೌಧದಿಂದ ಬೆಂಗಳೂರಿನ ರಾಜಭವನಕ್ಕೆ ಪಾದಯಾತ್ರೆ ಹಮ್ಮಿಕೊಂಡಿತ್ತು.

ಇನ್ನೇನೂ ಅಧಿಕಾರಕ್ಕೆ ಬಂದುಬಿಡುತ್ತೇವೆ ಎನ್ನುವ ಬಿಜೆಪಿಯ ಪಾದಯಾತ್ರೆ ಸಂಪೂರ್ಣ ನೀರಸವಾಗಿತ್ತು. ಅಷ್ಟೇ ಅಲ್ಲ ಬೆರಳೆಣಿಕೆಯಷ್ಟು ಮಾತ್ರವೇ ಜನ ಭಾಗವಹಿಸಿದ್ದರು. ಭಾಗವಹಿಸಿದ್ದವರಾಗಲಿ, ಭಾಷಣ ಮಾಡಿದವರಾಗಲಿ ಈ ಸಮಸ್ಯೆಯ ಹಿಂದಿರುವ ನೀತಿಗಳ ಬಗ್ಗೆ ಜಾಣ ಮರೆವು ಪ್ರದರ್ಶಿಸಿದರು. ಒಟ್ಟಿನಲ್ಲಿ ತನ್ನ ಜನವಿರೋಧಿ ಮುಖ ಮರೆಮಾಚಲು ನಡೆಸಿದ ಮತ್ತೊಂದು ವ್ಯರ್ಥ ಪ್ರಯತ್ನಕ್ಕೆ ಈ ಪಾದಯಾತ್ರೆ ಸಾಕ್ಷಿಯಾಗಿತ್ತು.

ನಿಲ್ಲುವ ಅಭ್ಯರ್ಥಿಗಳಿಗೆ ಪಕ್ಷದಿಂದ ದೊಡ್ಡ ಇಡಗಂಟು ಸಿಗುವ ಬಗ್ಗೆ ವ್ಯಾಪಕ ಪ್ರಚಾರಗಳನ್ನು ಬಿಜೆಪಿ ಆರಂಭಿಸಿದೆ. ಇಷ್ಟಾದರೂ ರಾಜ್ಯ ನಾಯಕತ್ವ ನಿರೀಕ್ಷಿಸಿದಷ್ಟು 'ಪೈಪೋಟಿ' ಕಂಡು ಬರದಿರುವುದನ್ನು ನೋಡಿ ಜಿಲ್ಲಾ ಬಿಜೆಪಿ ಕಂಗಾಲಾಗಿದೆ.

ಹಿಂದೆ ಮದ್ದೂರು, ಮಂಡ್ಯ, ಶ್ರೀರಂಗಪಟ್ಟದಲ್ಲಿ ನಡೆದ ಯಾತ್ರೆ ಅಬ್ಬರದ ಪ್ರಚಾರ, ಬ್ಯಾನರ್, ಬಂಟಿಂಗ್ಸ್, ಬಾವುಟ, ಕಟೌಟ್‌ಗಳಿಂದ ವಿಜೃಂಭಿಸಿದರೂ, ಕಾರ್ಯಕ್ರಮ ನಡೆವ ಮುಂಚೆ ಸಂಘ ಪರಿವಾರ, ಬಿಜೆಪಿ ಎಷ್ಟೆ ಅಬ್ಬರಿಸಿದರೂ ಜನ ನಿರ್ಲಕ್ಷ್ಯವನ್ನೇ ತೋರಿಸಿದ್ದರು. ಯಡಿಯೂರಿ ಗ್ಯಾಂಗ್‌ನ ಜೊತೆ ಬರುವ ರೆಡಿಮೆಡ್ ಪಟಾಲಂ, ವಿವಿಧ ಘಟಕಗಳ ಪದಾಧಿಕಾರಿಗಳು, ಬಿಜೆಪಿ ಚುನಾಯಿತ ಪ್ರತಿನಿಧಿಗಳು ಹಣ ಕೊಟ್ಟು ಕರೆದುಕೊಂಡು ಬಂದ ಜನರಲ್ಲದೇ ಯಾರೂ ಬಿಜೆಪಿಗೆ ಸೊಪ್ಪು ಹಾಕಲಿಲ್ಲ. ಹೀಗಿದ್ದರೂ ಮಂಡ್ಯದಲ್ಲಿ ಭಾರಿ ಸ್ವಾಗತ ಸಿಕ್ಕ ಬಗ್ಗೆ ಮಾಧ್ಯಮಗಳಲ್ಲಿ ಬಡಾಯಿ ಕೊಚ್ಚಿ ಕೊಂಡ ಬಿಜೆಪಿ ರಾಜ್ಯ ನಾಯಕತ್ವದ ಹೇಳಿಕೆ ಹಾಸ್ಯಾಸ್ಪದವಾಗಿತ್ತು.

ಜೆಡಿ(ಎಸ್)ನ ಅವಕಾಶವಾದಿ, ಆಗಾಗ್ಗೆ ಬದಲಾಗುತ್ತಿರುವ ನಿಲುವಿನಿಂದ ಕಾರ್ಯಕರ್ತರು ತಮ್ಮ ಪಕ್ಷದ ಬಗೆಗಿನ ಟೀಕೆಗಳಿಗೆ ಉತ್ತರಿಸಲು ತಡವರಿಸುತ್ತಿದ್ದರೂ ಗೌಡರ ಮೇಲಿನ ಅಭಿಮಾನ ಕುಗ್ಗಿಲ್ಲ.

ಕಾಂಗ್ರೆಸ್‌ನ್ನು ಎದುರಿಸುವ ಪಾರಂಪರಿಕ ನೆಲೆಯ ಜೆಡಿ(ಎಸ್) ದಿಕ್ಕು ಕಾಣದಾಗಿದೆ. ಈ ಸಂದರ್ಭದಲ್ಲಿ ಬಿಜೆಪಿ, ಆರ್‌ಎಸ್‌ಎಸ್‌ನ ಸಂಪರ್ಕ ಬಳಸಿ ಜೆಡಿ(ಎಸ್)ನ ಅತೃಪ್ತ ಗುಂಪನ್ನು ಸೆಳೆಯಲು ವ್ಯವಸ್ಥಿತ ತಂತ್ರ ಮತ್ತು ಪ್ರಯತ್ನವನ್ನು ಮಾಡತೊಡಗಿದೆ.

ಮದ್ದೂರಿನಲ್ಲಿ ನಡೆದ ಯಾತ್ರೆಯಲ್ಲಿ ಸ್ಥಳೀಯ ಮುಖಂಡರುಗಳು ಯಾರೂ ಇರಲಿಲ್ಲ. ಮಂಡ್ಯದಲ್ಲಿಯೂ ಇದೇ ಗತಿ, ಶ್ರೀರಂಗಪಟ್ಟಣದ ಸ್ಥಿತಿಯೂ ಇದಕ್ಕಿಂತ ಭಿನ್ನವೇನಿಲ್ಲ. ಇದರಿಂದ ಗಾಬರಿಗೊಂಡಿರುವ ಬಿಜೆಪಿ ನಾಯಕತ್ವ ಆರ್‌ಆರ್‌ಎಸ್‌ನ ಕಾರ್ಯಕರ್ತರಿಂದ ಪ್ರೇರಿತಗೊಂಡಿರುವ ಕೆಲವರನ್ನು ಶ್ರೀರಂಗಪಟ್ಟಣದ ಶಾಸಕಿ ವಿಜಯಲಕ್ಷ್ಮಿ ಬಂಡೆಸಿದ್ದೇಗೌಡರ ಮನೆಗೆ ಹೋಗಿ ಬಿಜೆಪಿಗೆ ಬರಲು ಒತ್ತಡ ಹೇರುವ ಯತ್ನ ಮಾಡಿಸಿದ್ದರು. ಮಂಡ್ಯದ ಬಹಿರಂಗ ಸಭೆಯಲ್ಲಿ ಮಾತನಾಡಿದ ಸದಾನಂದಗೌಡ, ಚೆಲುವರಾಯಸ್ವಾಮಿಯನ್ನು ಸೋಲಿಸಬೇಕೆಂದು ಕೇಳಿಕೊಂಡಿದ್ದಾರೆ. ಕಳೆದ ವಿಧಾನ ಸಭೆ ಚುನಾವಣೆಯಲ್ಲಿ ಮದ್ದೂರಿನಿಂದ ಬಿಜೆಪಿಗೆ ಸ್ಪರ್ಧಿಸಿದ್ದ ಮಾಜಿ ಶಾಸಕ ಮಹೇಶ್‌ಚಂದ್ ಕೂಡ ಯಾತ್ರೆ ಸಂದರ್ಭದಲ್ಲಿ ಇಲ್ಲದಿದ್ದುದು ಹಾಗೂ ಶ್ರೀರಂಗ ಪಟ್ಟಣದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗಣನೀಯ ಮತಗಳಿಸಿದ್ದ ಈಗ ಪಕ್ಷಾಂತರ ಮಾಡಿರುವ ಸಂತೋಷ್ ಕೂಡ ಇಲ್ಲದಿದ್ದುದು ಬಿಜೆಪಿಯ ಫ್ಲಾಪ್ ಶೋವನ್ನು ಸಾಕ್ಷೀಕರಿಸಿತ್ತು. ಮಂಡ್ಯ ಜಿಲ್ಲೆಯ ಯಾತ್ರೆ ನಂತರದಲ್ಲಿ ಬಿಜೆಪಿಯಲ್ಲಿ ಭಿನ್ನಮತ ಸ್ಫೋಟಿಸಿ, ಯಡಿಯೂರಪ್ಪನ ವಿರುದ್ಧ ದೆಹಲಿಗೆ ದೂರು ಒಯ್ದಿರುವುದನ್ನು ಈ ಸಂದರ್ಭದಲ್ಲಿ ಗಮನಿಸಬೇಕಾದ ಅಂಶವಾಗಿದೆ. ಈ ಮಧ್ಯೆ ಬಾಲಗಂಗಾಧರನಾಥ ಸ್ವಾಮಿ ಮತ್ತು ಬೇಲಿ ಮಠದ ಸ್ವಾಮಿಗಳು ತಮ್ಮ ಪ್ರಭಾವವನ್ನು ಬಿಜೆಪಿ ಬೆಳೆಸಲು ಬಳಸುತ್ತಿರುವುದು, ಸಂಘ ಪರಿವಾರದ ಪಟಾಲಂಗೆ ನಿರಂತರ ಬೆಂಬಲ ನೀಡುತ್ತಿರುವುದು ಬಿಜೆಪಿಗೆ ಇರುವ ಶಕ್ತಿಯಾಗಿದೆ. ಈ ಯಾತ್ರೆ ಉದ್ದಕ್ಕೂ ಜನರ ಸಮಸ್ಯೆಗಳನ್ನು ಬಾಯಿ ಮಾತಿಗೂ ಬಿಜೆಪಿ ಮಾತಾನಾಡಿಲ್ಲ. ಅಧಿಕಾರ ತಪ್ಪಿಸಿದರು ಎಂಬ ಅನುಕಂಪ ನಿರೀಕ್ಷೆ ಬಿಡುವ ಮಾತು ಬಿಟ್ಟರೆ ಬೇರೇನೂ ಬಿಜೆಪಿ ಹತ್ತಿರ ಇಲ್ಲದಿರುವುದು

ಪುಟ 14ಕ್ಕೆ

ಜಗದಗಲ

ಶರತ್‌ಚಂದ್ರ

'ಜೋಳ ಇಲ್ಲದಿದ್ದರೆ ದೇಶ ಇಲ್ಲ' ಮೆಕ್ಸಿಕೊ ರೈತರಿಂದ ರಾಜಧಾನಿ ಚಲೋ



ಮೆಕ್ಸಿಕೊ ರೈತರು ಪುನಃ ಸುದ್ದಿಯಲ್ಲಿದ್ದಾರೆ. ''ನಾಫ್ತಾ ಒಪ್ಪಂದದ ಪ್ರಕಾರ ಜೋಳದ ಆಮದಿಗೆ ಇದ್ದ ನಿರ್ಬಂಧ ಈ ವರ್ಷದ ಆರಂಭದಿಂದ ಜಾರಿಗೆ ಬಂದಿದ್ದು ಮೆಕ್ಸಿಕೊ ರೈತರು ಕಂಗಾಲಾಗಿದ್ದಾರೆ. 50 ಸಾವಿರಕ್ಕೂ ಹೆಚ್ಚು ರೈತರು ಎರಡು ವಾರದ ವರೆಗೆ ಸಾವಿರಕ್ಕೂ ಹೆಚ್ಚು ಮೈಲು ನಡೆದುಕೊಂಡು ಬಂದು ಪ್ರತಿಭಟಿಸುತ್ತಿದ್ದಾರೆ. ಈ ಜೋಳದ ರೈತರು ತಮ್ಮ ನಿಧಾನವಾಗಿ ಚಲಿಸುವ ಟ್ರಾಕ್ಟರ್ ಮತ್ತು ದನ-ಕರುಗಳನ್ನು ತಂದು ರಾಜಧಾನಿಯನ್ನು ಅಸ್ತವ್ಯಸ್ತಗೋಳಿಸಿದ್ದಾರೆ. 'ಜೋಳ ಇಲ್ಲದಿದ್ದರೆ ದೇಶ ಇಲ್ಲ' ಅವರ ಯುದ್ಧ ಘೋಷಣೆಯಾಗಿತ್ತು. ನಾಫ್ತಾ ಒಪ್ಪಂದ ಅಮೆರಿಕ, ಕೆನಡಾ ಮತ್ತು ಮೆಕ್ಸಿಕೊಗಳ ನಡುವೆ 14 ವರ್ಷಗಳ ಹಿಂದೆ ಆದ ಮುಕ್ತ ವ್ಯಾಪಾರ ಒಪ್ಪಂದ. ಅವರು ಮೆಕ್ಸಿಕೊ ಸರ್ಕಾರ ನಾಫ್ತಾ ಒಪ್ಪಂದದಿಂದ ಹೊರಗೆ ಬರಬೇಕು ಅಥವಾ ಕನಿಷ್ಟ ಜೋಳದ ಆಮದಿಗೆ ನಿರ್ಬಂಧ ಮುಂದುವರೆಯಬೇಕು ಎಂದು ಒತ್ತಾಯಿಸುತ್ತಿದ್ದಾರೆ. 50 ಲಕ್ಷಕ್ಕೂ ಹೆಚ್ಚು ರೈತರ ರಾಷ್ಟ್ರೀಯ ಯೂನಿಯನ್ ನಾಫ್ತಾವನ್ನು ಮೊದಲಿಂದಲೂ ವಿರೋಧಿಸುತ್ತಿದ್ದು, ಜೋಳ ಮಾತ್ರವಲ್ಲ ಹಾಲು ಮತ್ತು ಕಬ್ಬನ್ನೂ ಆಮದು ನಿರ್ಬಂಧ ಪಟ್ಟಿಯಿಂದ ತೆಗೆಯಬಾರದೆಂದು ಒತ್ತಾಯಿಸಿದೆ.

ಅಮೆರಿಕ ಮತ್ತು ಕೆನಡಾದ ರೈತರಿಗೆ ಸುಮಾರು 20 ಸಾವಿರ ಡಾಲರುಗಳ ಸಬ್ಸಿಡಿ ಸಿಕ್ಕಿದರೆ, ಮೆಕ್ಸಿಕೊ ರೈತರಿಗೆ ಸಿಗುವ ಸಬ್ಸಿಡಿ ಕೇವಲ 700 ಡಾಲರು. ಸಾಲದ್ದಕ್ಕೆ ರೈತರ ಉತ್ಪಾದನಾ ಖರ್ಚು ಇಂಧನ, ಗೊಬ್ಬರ ಮತ್ತು ವಿದ್ಯುತ್ ಬೆಲೆಗಳ ತೀವ್ರ ಹೆಚ್ಚಳದಿಂದ ಏರಿದೆ. ಜೋಳ ಆಮದಾಗಲು ಆರಂಭಿಸಿದರೆ ಬೆಲೆಗಳು ಬಿದ್ದು ರೈತರು ಉಪವಾಸ ಇರಬೇಕಾದೀತು ಎಂಬ ಆತಂಕ ಹರಡಿದೆ. ಆಮದು ನಿರ್ಬಂಧ ಇದ್ದಾಗ ರೈತರು ಜೋಳ ಬೆಳೆದು ಸುಮಾರಾಗಿ ಜೀವನ ನಡೆಸುತ್ತಿದ್ದು ನಾಫ್ತಾ ಅವರ ಜೀವನಕ್ಕೆ ಕುತ್ತಾಗಿದೆ. ಮೆಕ್ಸಿಕೊ ಸರ್ಕಾರ ಅಮೆರಿಕ-ಕೆನಡಾ ಸರ್ಕಾರಗಳ ಒತ್ತಡದಿಂದ ನಾಫ್ತಾ ಒಪ್ಪಂದ ಪುನರ್ಪರಿಶೀಲಿಸಲು ನಿರಾಕರಿಸಿದೆ. ಜೋಳದ ರೈತರು ನಾಫ್ತಾ ಅವರ ಜೀವನವನ್ನು ಹದಗೆಡಿಸಲು ಬಿಡುವುದಿಲ್ಲ ಎಂದು ಪಣ ತೊಟ್ಟಿದ್ದಾರೆ.

ಹಿಲೆರಿ - ಒಬಾಮಾ ನಡುವೆ ಮುಂದುವರೆದ ಹಣಾಹಣಿ

ಪಕ್ಷದ 'ಪ್ರಾಥಮಿಕ ಚುನಾವಣೆ'ಗಳು ಎಂದು ಕರೆಯಲಾಗುವ ಚುನಾವಣೆಗಳು ಅಮೆರಿಕದಲ್ಲಿ ರಾಜ್ಯವಾರಾಗಿ ನಡೆಯುತ್ತಿವೆ, ಈ ಚುನಾವಣೆಗಳಲ್ಲಿ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಯನ್ನು ಆರಿಸಲಾಗುತ್ತದೆ. 'ಸೂಪರ್ ಮಂಗಳವಾರ' ಎಂದು ಕರೆಯಲಾಗುವ ಕಳೆದ ಮಂಗಳವಾರ 22 (ಹೆಚ್ಚು ಕಡಿಮೆ ಅರ್ಧದಷ್ಟು) ರಾಜ್ಯಗಳಲ್ಲಿ 'ಪ್ರಾಥಮಿಕ ಚುನಾವಣೆ'ಗಳು ಮುಗಿದಿವೆ. ರಿಪಬ್ಲಿಕನ್ (ಈಗ ಆಳುತ್ತಿರುವ ಬುಶ್ ಪಕ್ಷ) ಪಕ್ಷದಲ್ಲಿ ಜಾನ್ ಮೆಕೆನ್ ಭಾರಿ ಮುನ್ನಡೆ ಸಾಧಿಸಿದ್ದು, ಅವರು ಅಭ್ಯರ್ಥಿಯಾಗುವುದು ಹೆಚ್ಚು ಕಡಿಮೆ ಖಚಿತವಾಗಿದೆ. ಆದರೆ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿ ಸ್ಥಾನಕ್ಕೆ ಸ್ಪರ್ಧೆಯಲ್ಲಿ ಎರಡು ಅಭ್ಯರ್ಥಿಗಳ ನಡುವೆ ಅಂತರ ಬಹಳ ಕಡಿಮೆ ಇದ್ದು, ಸ್ಪರ್ಧೆ ಕೊನೆ ರಾಜ್ಯದವರೆಗೆ ನಡೆಯುವ ನಿರೀಕ್ಷೆ ಇದೆ. ಈಗಾಗಲೇ ತಿಳಿದಿರುವಂತೆ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಗೆ ಆಯ್ಕೆ ಚಾರಿತ್ರಿಕವಾಗಲಿದ್ದು, ಅಮೆರಿಕದ ಚರಿತ್ರೆಯಲ್ಲೇ ಮೊದಲ ಬಾರಿಗೆ, ಒಬ್ಬ ಮಹಿಳೆ ಅಥವಾ ಕರಿಯ ಅಭ್ಯರ್ಥಿಗೆ ಆಗಲಿದ್ದಾರೆ. ಎಂಟು ವರ್ಷಗಳ ಬುಶ್ ಮತ್ತು ರಿಪಬ್ಲಿಕನ್ ದುರಾಡಳಿತದಿಂದಾಗಿ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿ ಅಧ್ಯಕ್ಷರಾಗಿ ಚುನಾಯಿತರಾಗುವ ಸಾಧ್ಯತೆ ಬಹಳ ಹೆಚ್ಚಿದೆ.

'ಪ್ರಾಥಮಿಕ ಚುನಾವಣೆ'ಗಳಲ್ಲಿ ಸಿಕ್ಕಿದ ಮತಗಳ ಆಧಾರದ ಮೇಲೆ ಅಧ್ಯಕ್ಷೀಯ ಅಭ್ಯರ್ಥಿ ಆರಿಸುವ ಪಕ್ಷದ ಸಮಾವೇಶಕ್ಕೆ ಪ್ರತಿನಿಧಿಗಳ ಆಯ್ಕೆ ನಡೆಯುತ್ತದೆ. ಡೆಮೊಕ್ರಾಟಿಕ್ ಪಕ್ಷದ ಪ್ರಾಥಮಿಕ'ಗಳಲ್ಲಿ 2025 ಪ್ರತಿನಿಧಿಗಳಲ್ಲಿ ಹಿಲೆರಿ ಕ್ಲಿಂಟನ್ 845 ಗೆದ್ದು, ಒಬಾಮಾ ಬಾರಾಕ್ 765 ಗೆದ್ದು ಹಣಾಹಣಿ ಸ್ಪರ್ಧೆಯಲ್ಲಿದ್ದಾರೆ. ಆದರೆ 22 ರಾಜ್ಯಗಳಲ್ಲಿ ಹೆಚ್ಚಿನ (13) ರಾಜ್ಯಗಳಲ್ಲಿ ಗೆದ್ದ ಹೆಗ್ಗಳಿಕೆ ಒಬಾಮಾರದ್ದು. ಹಿರಿಯ ಸೆನೆಟರ್ ಮತ್ತು ದೇಶದ ಪ್ರಥಮ ಮಹಿಳೆ ಆಗಿ ಅನುಭವ ಇರುವ ಹಿಲೆರಿ ಈ ಸ್ಪರ್ದೆಯಲ್ಲಿ ಇನ್ನೂ ಮುಂದೆ ಇದ್ದಾರೆ. ಆದರೆ ಮೊದಲ ಬಾರಿ ಸೆನೆಟರ್ ಆಗಿರುವ ಒಬಾಮಾರ ನೆಲೆ (ಮುಂಬರುವ ಪ್ರಾಥಮಿಕ ನಡೆಯುವ) ರಾಜ್ಯಗಳಲ್ಲಿ ಹೆಚ್ಚಿದೆ ಎನ್ನಲಾಗಿದೆ. ಮಾತ್ರವಲ್ಲ ಇರಾಕ್ ಮತ್ತು ಜಾಗತಿಕ ತಾಪಮಾನ ಹೆಚ್ಚಳದಂತಹ ಪ್ರಮುಖ ವಿಚಾರಗಳಲ್ಲಿ ಮೊದಲಿಂದಲೂ ಸ್ಪಷ್ಟ ಬದಲಿ ನೀತಿ ಹೊಂದಿರುವ ಒಬಾಮಾ, ಬದಲಾವಣೆ ಮತ್ತು ಬದಲಿ ನೀತಿಗಳ ಮೇಲೆ ಆಧಾರಿತ ಹೊಸ ಭರವಸೆ ಹುಟ್ಟಿಸಿದ್ದಾರೆ. ಹಿಲೆರಿಯವರ ಈ ಎರಡು ವಿಷಯಗಳ ಮೇಲಿನ ನೀತಿ ಬುಶ್ ಸರ್ಕಾರದ ನೀತಿಗಳಿಗಿಂತ ಬಹಳ ಭಿನ್ನವಾಗೇನಿಲ್ಲ.

ಇಟಲಿಯಲ್ಲಿ ಸರ್ಕಾರ ಪತನ - ಮರುಚುನಾವಣೆ

ಇಟಲಿಯ ಮಧ್ಯಮ-ಎಡ ಪಂಥಿಯ ಸಮ್ಮಿಶ್ರ ಸರ್ಕಾರ ಉರುಳಿದೆ. ಸಮ್ಮಿಶ್ರ ರಂಗದ ಒಳಗೆ ಸತತ ಘರ್ಷಣೆಯ ನಂತರ ಎರಡು ಸಣ್ಣ ಪಕ್ಷಗಳು ಬೆಂಬಲ ವಾಪಸು ತೆಗೆದುಕೊಂಡಿದ್ದವು. ರೊಮಾನೋ ಪ್ರೊಡಿ ಪ್ರಧಾನಿ (ಹಿಂದೆ ಯುರೋಪಿಯನ್ ಕಮಿಶನ್ ಅಧ್ಯಕ್ಷರಾಗಿದ್ದವರು) ಆಗಿದ್ದ ಸಮ್ಮಿಶ್ರ ಸರ್ಕಾರ ಹಿಂದಿನ ಬಲಪಂಥಿಯ ಸರ್ಕಾರದ ದುರಾಡಳಿತದ ನಂತರ ಭಾರಿ ಭರವಸೆ ಹುಟ್ಟಿಸಿದ್ದು, ಈಗ ಆಶಾಭಂಗವಾದಂತೆ ಆಗಿದೆ. ಮರು ಚುನಾವಣೆಯಲ್ಲಿ ಬೆರ್ಲುಸ್ಕೊನಿ ಎಂಬ ಮಾಧ್ಯಮ ದೊರೆ (ಇಟಲಿಯ 7 ಟಿವಿ ಚಾನೆಲ್ ಮತ್ತು ಜಾಹೀರಾತು ಉದ್ಯಮದ ಮಾಲಕ)ಯ ಬಲಪಂಥೀಯ ಪಕ್ಷ 'ಫೋರ್ಝಾ ಇಟಾಲಿಯಾ' ಮನಃ ಅಧಿಕಾರಕ್ಕೆ ಬರುವ ನಿರೀಕ್ಷೆ ಇದೆ. ಭಾರೀ ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತಕ್ಕೆ ಕುಖ್ಯಾತರಾದ ಬೆರ್ಲುಸ್ಕೊನಿ ಐದನೇ ಬಾರಿ ಪ್ರಧಾನಿಯಾಗುವ ಸ್ಪರ್ಧೆಗೆ ಇಳಿಯಲಿದ್ದಾರೆ. ಇತರ ಪಕ್ಷಗಳಲ್ಲೂ ಹೊಸ ಸಮ್ಮಿಶ್ರ ರಂಗ ಅಸಿತ್ವಕ್ಕೆ ಬರಲಿದ್ದು ಇಟಲಿ ಮನಃ ರಾಜಕೀಯ ಬದಲಾವಣೆ, ಅನಿಶ್ಚಿತತೆಯತ್ತ ಹೋಗುತ್ತಿದೆ.

ಇರಾನ್ ವಿರುದ್ಧ ಇಸ್ರೇಲಿ ಮಿಲಿಟರಿ ಉಪಗ್ರಹ ಇಸ್ರೋದಿಂದ ಉಡಾವಣೆ

ಇತ್ತೀಚೆಗೆ ಭಾರತದ ಇಸ್ರೋ ಶ್ರೀಹರಿಕೋಟಾ ಕೇಂದ್ರದಿಂದ ಇಸ್ರೇಲಿ ಮಿಲಿಟರಿ ಉಪಗ್ರಹ .ಟೆಕ್ಸಾರ್ ಉಡಾವಣೆಯನ್ನು ಗುಟ್ಟಾಗಿ ಮಾಡಲಾಯಿತು. ಯಾವುದೇ ದೇಶದ ಮಿಲಿಟರಿ ಉಪಗ್ರಹ ಉಡಾವಣೆಯನ್ನು ಇಸ್ರೋ ಕೈಗೊಳ್ಳುತ್ತಿರುವುದು ಮೊದಲ ಬಾರಿಯಾದರೂ ಇದು ಸರ್ವೇ ಸಾಮಾನ್ಯ ಸಂಗತಿಯೆಂದೂ, ಗ್ರಾಹಕರ ಕೋರಿಕೆ ಮೇಲೆ ಉಡಾವಣೆಯನ್ನು ಗುಟ್ಟಾಗಿ ಇಡಲಾಯಿತು ಎಂದು ಇಸ್ರೋ ವಕ್ತಾರರು ಹೇಳಿದರು. ಸರ್ಕಾರ ಇದಕ್ಕಿಂತ ಹೆಚ್ಚು ಏನನ್ನೂ ಹೇಳಲೂ ತಯಾರಿರಲಿಲ್ಲ. ಆದರೆ ಇಸ್ರೇಲ್ ಕಡೆಯಿಂದ ಈ ಅಪಾಯಕಾರಿ ಕ್ರಮದ ಬಗ್ಗೆ ಹೆಚ್ಚಿನ ಮಾಹಿತಿ ದೊರೆತಿದೆ.

ಟೆಕ್ಸಾರ್ ಮಿಲಿಟರಿ ಉಪಗ್ರಹ ನೆರೆಯ ಅರಬ್ ದೇಶಗಳ ಮೇಲೆ ಆಕ್ರಮಣಕಾರಿ ಯೋಜನೆಯ ಮುಖ್ಯ ಭಾಗ. ಈ ಉಪಗ್ರಹ ಮುಖ್ಯವಾಗಿ ಇರಾನ್ ಮತ್ತು ಸಿರಿಯಾ ಮೇಲೆ ಹದ್ದಿನ ಕಣ್ಣಿಟ್ಟು ಅಗತ್ಯವಾದಾಗ ತುರ್ತಿನ ಆಕ್ರಮಣಕಾರಿ ಕ್ರಮ ಕೈಗೊಳ್ಳಲು ಅನುವು ಮಾಡಿಕೊಡುತ್ತದೆ. ಇರಾನಿನ 'ಅಣ್ವಸ್ತ್ರಕ್ಷಮತೆ' ಯನ್ನು ಬಾಂಬ್ ಹಾಕಿ ನಾಶ ಮಾಡುವ ಬೆದರಿಕೆಯನ್ನು ಸಾರ್ವಜನಿಕವಾಗಿಯೇ ಮಾಡಿರುವ ಇಸ್ರೇಲಿನ ಟೆಕ್ಸಾರ್ ಉಡಾವಣೆ ಇಸ್ರೋ ಅಥವಾ ಭಾರತ ಸರ್ಕಾರ ಹೇಳುವಂತೆ ಮಾಮಾಲಿ ವಿಚಾರ ಅಲ್ಲ. ಅದೂ ಗಾಜಾ ಪಟ್ಟಿಯ ಪ್ಯಾಲೆಸ್ತೈನರಿಗೆ ಅಮಾನುಷ ದಿಗ್ಬಂಧನ ಹೊರಿಸಿರುವ ಸಂದರ್ಭದಲ್ಲಿ ಇದು ನಡೆದಿರುವುದು ಇನ್ನಷ್ಟು ದುರದೃಷ್ಟಕರ.

ಇರಾನ್ ಮತ್ತು ಇತರ ಅರಬ್ ದೇಶಗಳ ಜತೆ ಇದ್ದ ಉತ್ತಮ ಬಾಂಧವ್ಯಕ್ಕೆ ಧಕ್ಕೆ ತರುವ, ಪ್ಯಾಲೆಸ್ಟೇನ್ ಸೇರಿದಂತೆ ಅರಬ್ ದೇಶಗಳ ಸಾಮ್ರಾಜ್ಯಶಾಹಿ ಹೋರಾಟಕ್ಕೆ ಬೆಂಬಲದ ನೀತಿಗೆ ಇದರಿಂದ ಪೂರ್ತಿ ತಿಲಾಂಜಲಿ ಬಿಟ್ಟಂತಾಗಿದೆ. ಇದನ್ನು ಅಮೆರಿಕದ ಒತ್ತಡದ ಮೇಲೆ ಮಾಡಲಾಗುತ್ತಿದೆ ಎಂಬುದು ಇನ್ನಷ್ಟು ಅಪಾಯಕಾರಿ. ಇದೇ ಒತ್ತಡದಿಂದ ನಮ್ಮ ಹಿತಾಸಕ್ತಿ ಇರುವ ಇರಾನ್-ಭಾರತ-ಪಾಕಿಸ್ತಾನ ಗ್ಯಾಸ್ ಪೈಪ್ ಲೈನ್ ಸಂಬಂಧದ ಮಾತುಕತೆಗೆ ಭಾರತ ಗೈರು ಹಾಜರಾಗುತ್ತಿದೆ. ಈ ಉಡಾವಣೆಗೆ ಮೂರು ವರ್ಷಗಳ ಹಿಂದೆ ಯೋಜಿಸಲಾಗಿದೆ ಮತ್ತು ಇನ್ನೂ ಎರಡೂ ಇಸ್ರೇಲಿ ಉಪಗ್ರಹಗಳನ್ನು ಇಸ್ರೋ ಉಡಾಯಿಸಲಿದೆ ಎಂದು ತಿಳಿದು ಬಂದಿದೆ. ಇಸ್ರೇಲ್ ಜತೆ ಭಾರತದ ಮಿಲಿಟರಿ ಬಾಂಧವ್ಯ ಹೆಚ್ಚುತ್ತಿರುವುದು ಆತಂಕದ ವಿಷಯ. ಇಸ್ರೇಲ್ ಈಗ ಭಾರತಕ್ಕೆ ರಶ್ಯಾ ನಂತರ ಅತಿ ದೊಡ್ಡ ಮಿಲಿಟರಿ ಪೂರೈಕೆದಾರ. ಈ ಸ್ವತಂತ್ರ ಅಲಿಪ್ತ ವಿದೇಶ ನೀತಿಗೆ ತಿಲಾಂಜಲಿ ಕೊಡುವ ಬಿಜೆಪಿ-ಎನ್ ಡಿ ಎ ಸರ್ಕಾರ ಆರಂಭಿಸಿದ ಪ್ರಕ್ರಿಯೆಯನ್ನು ಯು.ಪಿ.ಎ. ಸರ್ಕಾರ ಕಣ್ಣು ಮುಚ್ಚಿ ಮುಂದುವರೆಸುತ್ತಿರುವುದು ಕನಿಷ್ಟ ಸಾಮಾನ್ಯ ಕಾರ್ಯಕ್ರಮದ ಉಲ್ಲಂಘನೆ ಮತ್ತು ದೇಶದ ಹಿತಾಸಕ್ತಿಗೆ ಮಾರಕ.

ಬಿಲ ಹುಡುಕುತ್ತಿರುವ

ಪುಟ 13 ರಿಂದ

ಇದರ ಜನವಿರೋಧಿ ಸ್ವರೂಪಕ್ಕೆ ಹಿಡಿದಿರುವ ಕನ್ನಡಿಯಾಗಿದೆ.

20 ತಿಂಗಳು ಅಧಿಕಾರದ ಪಾಲುದಾರಿಕೆಯ ರುಚಿ ಉಂಡಿರುವ ಬಿಜೆಪಿ, ಈ ಕಾರಣದಿಂದಲೇ, ಏನೂ ಇಲ್ಲದ ಮಂಡ್ಯ ಜಿಲ್ಲೆಯಲ್ಲಿ ಮಂಡ್ಯ ನಗರಸಭೆಯ 2 ಸೀಟುಗಳು ಸೇರಿದಂತೆ ಒಟ್ಟು 10 ಸ್ಥಳೀಯ ಸಂಸ್ಥೆ ಪ್ರತಿನಿಧಿಗಳನ್ನು ಗೆದ್ದುಕೊಂಡಿದೆ. ಸಂಘಪರಿವಾರದ ಎಲ್ಲಾ ಅಂಗಗಳು ಸಕ್ರಿಯಗೊಂಡಿವೆ. ಏನಾದರೂ ಮಾಡಿ ಈ ಬಾರಿ ಜಾಗ ಮಾಡಲೇಬೇಕೆಂಬ ಪಣ ತೊಟ್ಟಿರುವ ಬಿಜೆಪಿಗೆ ಜೆಡಿ(ಎಸ್) ಒಡೆಯದೆ ಬೇರೆ ಅವಕಾಶಗಳಿಲ್ಲ. ಗೌಡರ ಬೆಂಬಲವಿಲ್ಲದೆ ಜೆಡಿ(ಎಸ್)ನ ನಾಯಕರುಗಳು ಗೆಲ್ಲಲು ಸಾಧ್ಯವಿಲ್ಲ. ಇತ್ತ ಜೆಡಿ(ಎಸ್)ಅನ್ನು ಒಡೆದು ತನ್ನ ಕಡೆ ಸೇರಿಸಿಕೊಳ್ಳಲು ಆಗದೆ, ತನಗೆ ಯಾವುದೇ ಸ್ವತಂತ್ರ ನೆಲೆಯೂ ಇಲ್ಲದ ಬಿಜೆಪಿ ಎಂಬ ವಿಷ ಸರ್ಪ ಹಲ್ಲು ಮಸೆಯುತ್ತಾ ಬುಸುಗುಡುತ್ತಿದೆ.

-ಟಿ.ಯಶವಂತ

ಪುಸ್ತಕ ವಿಮರ್ಶೆ

“ಅವ್ವ ಹಚ್ಚಿದ ದೀಪ” ಅಕ್ಷರದ ಕಂಗಳಲ್ಲಿ ಕಾಲೂರಿನಿಂತ ಭರವಸೆ

ಒಂದು ಅವಲೋಕನ

ಕಾವ್ಯ ಕ್ರಾಂತಿಯ ತೊಟ್ಟಿಲು. ಸಾಹಿತ್ಯ ಸಾಂಸ್ಕೃತಿಕ ರಾಜಕಾರಣದ ಆವಿಷ್ಕಾರ. ಹೀಗೆಂದು ನಂಬಿ ಬರೆದವರ ಮತ್ತು ಬರೆಯುತ್ತಿರುವವರ ದೊಡ್ಡ ಪರಂಪರೆ ಇದೆ ಕನ್ನಡದಲ್ಲಿ. ಜನ ಬದುಕಲೆಂದು ಕಾವ್ಯ ಬರೆಯುವುದನ್ನು ಬಹು ಹಿಂದೆಯೇ ಜನಪದರು ರೂಢಿಯಾಗಿಸಿದ್ದಾರೆ. ಕನ್ನಡದಲ್ಲಿಯಂತೂ ಅಭಿಜಾತ ಕಾವ್ಯ ಪರಂಪರೆಗೆ ಪರ್ಯಾಯ ಕಟ್ಟಲೆಂದು ವಚನಕಾರರು ಆ ಹೊತ್ತು ಸಾಹಿತ್ಯಕ ಚಳುವಳಿಯನ್ನೇ ಅಣಿ ನೆರೆಸಿದ್ದು ಇದೆ. ಈ ಪರಂಪರೆಯನ್ನು ಹರಿಗಡಿಯದಂತೆ ತತ್ವಪದಕಾರರು, ಸೂಫಿಗಳು, ಅವಧೂತರು ಕಾಲದ ಪರೀಕ್ಷೆಗೆ ಒಡ್ಡಿಕೊಂಡು ಮುಂದುವರೆಸಿಕೊಂಡು ಬಂದಿದ್ದಾರೆ. ಅವರ ಸಾಲಿನಲ್ಲಿಯೇ ನಡೆದು ಬಂದಿರುವ ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ದಲಿತ-ಬಂಡಾಯಗಳ ಖದರೇ ಬೇರೆ ಬಗೆಯದು.

1970-80 ದಶಕದಲ್ಲಿ ಕರ್ನಾಟಕದ ರಾಜಕೀಯ ಸ್ಥಿತ್ಯಂತರಗಳಲ್ಲಿ ದಲಿತ-ಬಂಡಾಯಗಳ ಪಾತ್ರವು ಉಲ್ಲೇಖನೀಯವಾಗಿದೆ.ಏಕೆಂದರೆ ‘ಖಡ್ಗವಾಗಲಿ ಕಾವ್ಯ. ಜನರ ನೋವಿಗೆ ಮಿಡಿಯುವ ಪ್ರಾಣ ಮಿತ್ರ’ ಎಂಬುದನ್ನು ಅಕ್ಷರಶಃ ಸಾಕಾರಗೊಳಿಸುವ ಸಂದರ್ಭ ಅದಾಗಿತ್ತು. ಈ ಸಂದರ್ಭದಲ್ಲಿ ಬರವಣಿಗೆಗೆ ತೊಡಗಿಸಿಕೊಂಡವರಲ್ಲಿ ಬಹುತೇಕರು ಒಂದು ಹೊಸ ಉಮೇದು ಮತ್ತು ಬಹು ಮಹತ್ವಾಕಾಂಕ್ಷೆಯೊಂದಿಗೆ ಕಾವ್ಯಲೋಕಕ್ಕೆ ಕಾಲಿಟ್ಟಿದ್ದರು. ಹೀಗೆ ಕಾಲಿಟ್ಟವರಲ್ಲಿ ಅನೇಕರು ಇಂದು ಕಾವ್ಯಲೋಕ ಒದಗಿಸಿಕೊಟ್ಟ ಅವಕಾಶಗಳಲ್ಲಿ ಕಳೆದು ಹೋಗಿದ್ದಾರೆ. ವ್ಯವಸ್ಥೆ ಪೋಷಿತ ಕ್ಷುದಾಗ್ನಿಯಲ್ಲಿ ಕರಗಿ ಹೋಗಿದ್ದಾರೆ. ಅವಕಾಶಗಳಲ್ಲಿ ಕಳೆದು ಹೋಗಿದ್ದಾರೆ. ಕೆಲವರು ಮಾತ್ರ ಇವತ್ತಿಗೂ ಅದೇ ಛಲ, ಅದೇ ಭರವಸೆ ಮತ್ತು ಅದೇ ಕ್ರಾಂತಿಯ ಕನಸುಗಳೊಂದಿಗೆ ಬರೆಯುತ್ತ ಉಳಿದು ಬಂದಿದ್ದಾರೆ. ಅಂಥವರ ಸಾಲಿನಲ್ಲಿ ಬಳ್ಳಾರಿ ಜಿಲ್ಲೆ ಸಿರಗುಪ್ಪದ ಹುಲಿಕಟ್ಟೆ ಚನ್ನಬಸಪ್ಪ ಒಬ್ಬರಾಗಿ ನಿಲ್ಲುತ್ತಾರೆ. ಬಿಸಿಲು ರಾಜನೆಂದೇ ಖ್ಯಾತಿವೆತ್ತ ಬಳ್ಳಾರಿ ಜಿಲ್ಲೆಯ ಸಿರಗುಪ್ಪ ಸೀಮೆ ಎಂಭತ್ತರ ದಶಕದಲ್ಲಿ ಪ್ರಗತಿಪರ ಸಂಘಟನೆಗಳ ತವರೂರಾಗಿತ್ತು. ಚನ್ನಬಸಪ್ಪನವರು ಇದೇ ನೆಲದಿಂದ ಬಂದಿರುವ ಸಮಾಜವಾದಿ ಹೋರಾಟ ಗಾರರಲ್ಲಿ ಒಬ್ಬರಾಗಿದ್ದಾರೆ.

ಇವರು ಎಸ್‌ಎಫ್‌ಐ ಮತ್ತು ಸಮುದಾಯದಂಥ ಸಂಘಟನೆಗಳ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟವರು. ಹೀಗಾಗಿ ಇವರು ಜನಪರ ಚಳುವಳಿಯ ನೇತಾರರಾಗಿ ನಿರ್ದಿಷ್ಟ ಗುರಿಯೊಂದಿಗೆ ಬರವಣಿಗೆಗೆ ಬದ್ಧರಾದವರು. ಬದುಕಿನ ಬಗೆಗಿನ ಬದ್ಧತೆಯು ಅವರನ್ನು ನಿಭಾಯಿಸಿರುವುದರಿಂದ ಕಾವ್ಯ ಅವರಿಗೆ ಅನುಷಂಗಿಕವೇ ಸರಿ. ಹೀಗಾಗಿಯೇ ಮೊದಲ ಕವನ ಸಂಕಲನ ‘ಕೂಗು’ ಹೊರ ತಂದು ಎಷ್ಟೋ ವರ್ಷಗಳ ನಂತರ ಇದೀಗ ‘ಅವ್ವ ಹಚ್ಚಿದ ದೀಪ’ ಎರಡನೇ ಕವನ ಸಂಕಲನ ಹೊರತಂದಿದ್ದಾರೆ.

ಇದರಲ್ಲಿ ನಲವತ್ತು ಬಿಡಿ ಕವನಗಳಿವೆ. ಮೂಲತಃ ವಾಸ್ತವವಾದಿಯಾಗಿರುವ ಈ ಕವಿಗೆ ಸುತ್ತಲೂ ಘಟಿಸುತ್ತಿರುವ ವಿದ್ಯಮಾನಗಳು ಅಪಾರ ನೋವನ್ನುಂಟು ಮಾಡಿವೆ. ನೋವಿಗೆ ಅಕ್ಷರದಂಗಿ ತೊಡಿಸುವ ಹಟವಾಗಿಯೇ ಇಲ್ಲಿನ ಬಹುತೇಕ ಕವನಗಳು ಸೃಷ್ಟಿಯಾಗಿವೆ. ಕವಿಗೆ ತಾನು ಪ್ರಸ್ತುತ ಪಡಿಸಬೇಕೆಂದಿರುವ ಸಮಸ್ಯೆ ಮುಖ್ಯವಾಗಿರುವಂತೆ ಅದನ್ನು ಕಟ್ಟಿನಿಲ್ಲಿಸುವ ಕಾವ್ಯಗಾರಿಕೆ ಮುಖ್ಯವಾದಂತಿಲ್ಲ. ಅಷ್ಟಕ್ಕೂ ಚನ್ನಬಸಪ್ಪನವರು ಒಬ್ಬ ದಣಿವಿಲ್ಲದ ಸಂಘಟಕ ಮತ್ತು ಹೋರಾಟಗಾರರಾಗಿರುವುದರಿಂದ ಭಾಷಣದ ವೈಖರಿಯು ಅರಿವಿಲ್ಲದಂತೆ ಅವರ ಕಾವ್ಯವನ್ನು ಪ್ರಭಾವಿಸಿದೆ. ಆದಾಗ್ಯೂ ಕಾವ್ಯದ ಬನಿ-ತನಿಗಳು ಒಮ್ಮೊಮ್ಮೆ ಕವಿಗಳ ಕಣ್ಣು ತಪ್ಪಿಸಿಯೇ ನುಸುಳಿಕೊಂಡದ್ದುಂಟು.

ನೀವು
ಬಂದೂಕು ಹಿಡಿದು ಹೆದರಿಸಿದರೆ
ಬಾಂಬುಗಳನ್ನಿಟ್ಟು ಸಿಡಿಸಿದರೆ
ಸಾಯುವುದಿಲ್ಲ ಪ್ರೀತಿ
ಸಿಡಿದ ಬಾಂಬಿನ ಹೊಗೆಯಲ್ಲೂ
ಹೊರ ಹೊಮ್ಮುತ್ತದೆ ಪ್ರೀತಿ
ಯಾಕೇನ್ನುತ್ತೀರಾ
ನೋಡಿ ಬುದ್ಧನಿದ್ದಾನೆ ಇಲ್ಲಿ

ಇಂಥ ಕೆಲವು ಅಪರೂಪದ ಕವನಗಳು ಸಂಕಲನದ ಮೌಲ್ಯ ಹೆಚ್ಚಿಸಿರುವಂತೆ ಇನ್ನು ಕೆಲವು ಮಕ್ಕಳ ಕವನಗಳು ಕೃತಿಯ ಸ್ವಾರಸ್ಯವನ್ನು ಹೆಚ್ಚಿಸಿವೆ.

‘ಚಂದಿರನೇತಕೆ ಓಡುವ ನಮ್ಮ
ಬಾಂಬಿಗೆ ಹೆದರಿಹನೇ
ಮುಸುಕಿದ ಬಾಂಬಿನ
ಮೋಡವ ಕಂಡು
ಚಂದಿರ ಬೆದರಿಹನೆ’ ಎಂಬ ಕವನವಾಗಲಿ
ಅಥವಾ
‘ಚಿಲಿಪಿಲಿ ಚಿಲಿಪಿಲಿ ಹಕ್ಕಿಯಾಗಿ
ಹಾರಿ ಹೋಗೋಣ
ಗಾಳಿಯಲ್ಲಿ ತೇಲಿ ತೇಲಿ
ಮೇಲೆ ಹೋಗೋಣ’ ಇಂಥ ಕವನಗಳು ತಮ್ಮ ಗೇಯತೆ ಮತ್ತು ಶಬ್ದ ಜೋಡಣೆಯಿಂದಾಗಿ ಗಮನ ಸೆಳೆಯುತ್ತವೆ. ಇನ್ನು ಕೆಲವು ಕ್ರಾಂತಿ ಗೀತೆಗಳ ದಾಟಿಯಲ್ಲಿ ರಚನೆಯಾಗಿರುವ ಕೃತಿಗಳಾದರೂ ಕಾವ್ಯ ಸ್ಪರ್ಶವಿಲ್ಲದೆ ಬರೀ ಸ್ಟೇಟ್‌ಮೆಂಟ್‌ಗಳಾಗಿ ಉಳಿದುಬಿಡುತ್ತದೆ. ಕವನಗಳ ಕಲಾತ್ಮಕತೆ ಏನೇ ಇರಲಿ ಕವಿಯ ಧೋರಣೆ ಮತ್ತು ಆಶಯ ಮಾತ್ರ ಈ ಹೊತ್ತಿನ ಜರೂರಿಗಳಾಗಿವೆ. ಇಲ್ಲಿನ ಹತ್ತಾರು ಕವನಗಳು ತುಂಬಾ ಗಂಭೀರವಾದ ಸಮಸ್ಯೆಗಳನ್ನು ಕುರಿತು ಸಹೃದಯರ ಗಮನ ಸೆಳೆಯುತ್ತವೆ. ಶತಮಾನಗಳ ಶೋಷಣೆಯ ಫಲವಾಗಿ ಅಸ್ತಿತ್ವದಲ್ಲಿರುವ ಬಡತನ, ಜಾತಿಯತೆ, ಮೌಢ್ಯಗಳಲ್ಲದೆ ಆಧುನಿಕೋತ್ತರ ಫ್ಯೂಡಲ್ ವ್ಯವಸ್ಥೆಯ ಮಾಯಾಜಾಲ ಗಳಾದ ಖಾಸಗೀಕರಣ, ಉದಾರೀಕರಣ, ಜಾಗತೀಕರಣ ಮುಂತಾದ ವಿಷಯಗಳು ಇಲ್ಲಿ ಚರ್ಚೆಗೆ ಒದಗಿಬಂದಿವೆ. ಕವಿಯೇ ಸಂಕಲನದ ಪ್ರಾರಂಭದಲ್ಲಿ ಹೇಳಿಕೊಂಡಿರು ವಂತೆ ಮಹಾತ್ಮಗಾಂಧಿ ಯವರ ಕೊಲೆ, ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ ಕೋಮುವಾದ ಮತ್ತು ಜಿಹಾದ್ ಹೆಸರಿನಲ್ಲಿ ನಡೆಯುತ್ತಿರುವ ಭಯೋತ್ಪಾದಕ ಚಟುವಟಿಕೆಗಳು ಅವರಲ್ಲಿ ಆತಂಕ ಹುಟ್ಟಿಸಿವೆ. ಈ ಎಲ್ಲ ಕ್ರೌರ್ಯಗಳ ವಿರುದ್ಧ ಲೇಖನಿಯ ಮೂಲಕ ಸಹೃದಯರೊಂದಿಗೆ ಸಂವಾದಗೈಯಲು ಅವರು ಹೊರಟಿದ್ದಾರೆ. ವ್ಯವಸ್ಥೆಯ ವಿರುದ್ಧದ ವೇದನೆ, ತಳಮಳ, ಆಕ್ರೋಶಗಳು ಇಲ್ಲಿ ಪ್ರಾಮಾಣಿಕವಾಗಿ ಕಂಡರಿಸಲ್ಪಟ್ಟಿವೆ.

ಜೈ ಶ್ರೀರಾಮ್ ಎಂದು
ಮಸೀದಿ ಕೆಡವಿದ
ಕ್ಷಣದಿಂದ ಅಳುತ್ತಿದ್ದಾನೆ ರಾಮ
ಅಯ್ಯೋ ನನ್ನ ಮುಖಕ್ಕೆ
ಮಸಿ ಬಳಿದರಲ್ಲಾ ಎಂದು....

‘ರಾಮ ಅಳುತ್ತಿದ್ದಾನೆ’ ಎಂಬ ಶೀರ್ಷಿಕೆ ಹೊಂದಿರುವ ಇಂಥ ಹತ್ತಾರು ಕವನಗಳು ಇಲ್ಲಿ ಎಡೆ ಪಡೆದುಕೊಂಡಿವೆ. ವರ್ತಮಾನದ ಕ್ಷಣಗಳಲ್ಲಿ ದೇಶವನ್ನು ತಿಕ್ಕಿಮುಕ್ಕುತ್ತಿರುವ ಕೋಮುವಾದ ಮತ್ತು ಭಯೋತ್ಪಾದನೆ ಈ ಎರಡು ಸಂಗತಿಗಳು ಕವಿಯಲ್ಲಿ ಅಸದಳ ತಲ್ಲಣಗಳನ್ನು ಹುಟ್ಟಿಸಿವೆ. ಇವೆರಡೂ ಒಂದರ ಮರಿ ಮತ್ತೊಂದು ಎಂಬಂತೆ ಜನ್ಮ ತಾಳಿರುವುದರಿಂದಲೇ ಇವೆರಡರ ನಿಯಂತ್ರಣವು ಸಮಾಜವಾದಿ, ಪ್ರಗತಿಪರ ಶಕ್ತಿಗಳಿಗೆ ಬಹುದೊಡ್ಡ ತಲೆ ನೋವಾಗಿ ಪರಿಣಮಿಸುತ್ತಿದೆ. ಜಾತ್ಯಾತೀತ, ಪ್ರಜಾಸತ್ತಾತ್ಮಕ ಚಳುವಳಿಗಳ ನಿರಂತರ ಪರಿಶ್ರಮ ಮತ್ತು ಸಂಘಟಿತ ಹೋರಾಟ ಮಾತ್ರವೇ ಈ ಸಮಸ್ಯೆಗಳನ್ನು ಇಲ್ಲವಾಗಿಸಬಲ್ಲವು ಎಂಬ ಸಂದೇಶವನ್ನು ‘ಅವ್ವ ಹಚ್ಚಿದ ದೀಪ’ ಸಂಕಲನ ತುಂಬಾ ಸಮರ್ಥವಾಗಿ ನೀಡಿದೆ. ಚನ್ನಬಸಪ್ಪನವರ ಅಕ್ಷರದ ಕಂಗಳಲ್ಲಿ ಕಾಲೂರಿನಿಂತ ಭರವಸೆ ಇದೆಯಲ್ಲ, ಇದುವೇ ಈ ಹೊತ್ತಿನ ಜರೂರಿಯು ಹೌದು. ಇದುವೇ ಸಂಕಲನದ ಯಶಸ್ಸು ಹೌದು.

– ಡಾ: ಮೀನಾಕ್ಷಿ ಬಾಳಿ

ಬಜೆಟ್ ಎಂದರೆ.....

ಪುಟ 11 ರಿಂದ...

ಬಜೆಟ್‌ನಲ್ಲಿ ಈ ಯೋಜನೆಗಳಲ್ಲಾಗಿರುವ ಪ್ರಗತಿಯನ್ನು ಅಗತ್ಯವಾಗಿ ನಮೂದಿಸಬೇಕು. ಹಾಗೂ 2009ರೊಳಗೆ ಪೂರ್ಣಗೊಳ್ಳುವಂತೆ ಗುರಿ ನಿಗದಿಮಾಡಬೇಕು.

ಅಸಂಘಟಿತರು

18. ಕಂಪನಿ ಮತ್ತು ಅಸಂಘಟಿತ ವಲಯದ ರಾಷ್ಟ್ರೀಯ ಆಯೋಗದ ಸಲಹೆಯಂತೆ ಸಮಗ್ರ ಸಾಮಾಜಿಕ ಭದ್ರತೆ ಒದಗಿಸುವ ಬಯಕೆ ಸರ್ಕಾರಕ್ಕೆ ಇಲ್ಲದಿರುವುದರಿಂದಲೇ ಈ ಯೋಜನೆಗೆ ಅಗತ್ಯ ಹಣ ಒದಗಿಸದಿರುವುದಕ್ಕೆ ಸ್ಪಷ್ಟ ಕಾರಣವಾಗಿದೆ. ಇದು ಸಿಎಂಪಿಯಲ್ಲಿ ನೀಡಿರುವ ಭರವಸೆಯ ಉಲ್ಲಂಘನೆಯಾಗಿದೆ. ಅಸಂಘಟಿತ ವಲಯದ ಕಾರ್ಮಿಕರಿಗೆ ಸಮಗ್ರ ಸಾಮಾಜಿಕ ಭದ್ರತಾ ಯೋಜನೆ ಒದಗಿಸಲು ಈ ಬಜೆಟ್‌ನಲ್ಲಿ ಅಗತ್ಯವಾದಷ್ಟು ಹಣವನ್ನು ಮೀಸಲಿಡಬೇಕು.

19. ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ರೆಗ)ಯನ್ನು ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಬೇಕು ಮತ್ತು ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಳ್ಳುವಂತೆ ಕ್ರಮಗಳನ್ನು ಕೈಗೊಳ್ಳಬೇಕು. ಇದಕ್ಕೆ ಅಗತ್ಯವಾದಷ್ಟು ಹಣವನ್ನು ಈ ಬಜೆಟ್‌ನಲ್ಲಿ ಮೀಸಲಿಡುವುದರೊಂದಿಗೆ ಸಿಎಂಪಿಯಲ್ಲಿ ಭರವಸೆ ನೀಡಿರುವಂತೆ ನಗರ ಪ್ರದೇಶಗಳಿಗೂ ಈ ಯೋಜನೆ ವಿಸ್ತರಣೆಗೆ ಹಣ ನೀಡುವುದನ್ನು ಆರಂಭಿಸಬೇಕು.

20. ಅಂಗನವಾಡಿ ಯೋಜನೆಯನ್ನು ಸಾರ್ವತ್ರೀಕರಣಗೊಳಿಸುವುದಾಗಿ ಸಿಎಂಪಿಯಲ್ಲಿ ಭರವಸೆ ನೀಡಿರುವುದರಿಮದ 2008-09ನೆ ಸಾಲಿನ ಬಜೆಟ್‌ನಲ್ಲಿ ಈ ಯೋಜನೆಗೆ ನೀಡುವ ಹಣದಲ್ಲಿ ಮೂರು ಪಟ್ಟು ಹೆಚ್ಚಿಸಬೇಕು. ಇದರಲ್ಲಿ ಅಂಗನವಾಡಿ ಕಾರ್ಯಕರ್ತರ ಗೌರವಧನಕ್ಕಾಗಿ ಪ್ರತ್ಯೇಕ ನಿಧಿಯನ್ನು ಮೀಸಲಿಡಬೇಕು. ಮಹಿಳೆಯರಲ್ಲಿ ಪೌಷ್ಠಿಕಾಂಶ ಕಡಿಮೆಯಾಗಿದೆ ಎಂದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಹೇಳಿರುವುದರಿಂದ ಇದಕ್ಕೆ ಅಗತ್ಯವಾದಷ್ಟು ನಿಧಿ ಮೀಸಲಿಡುವುದರೊಂದಿಗೆ ರಾಷ್ಟ್ರೀಯ ಪೌಷ್ಠಿಕಾಂಶ ಯೋಜನೆಯನ್ನು ಈ ಬಜೆಟ್‌ನಲ್ಲಿ ಆರಂಭಿಸಬೇಕು. ಮಹಿಳೆಯರಿಗಾಗಿ ವಿಶೇಷವಾಗಿ ರೂಪಿಸಿರುವ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣ ಒದಗಿಸಬೇಕು.

ಅಲ್ಪಸಂಖ್ಯಾತರತ್ತ

21. ಸಾಚರ್ ಸಮಿತಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ಈ ಬಜೆಟ್‌ನಲ್ಲಿ ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳಬೇಕು. ಶೈಕ್ಷಣಿ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ಕೊಡುವ ನಿಟ್ಟಿನಲ್ಲಿ ಅಲ್ಪಸಂಖ್ಯಾತರು ಹೆಚ್ಚಾಗಿರುವ ಎಲ್ಲ ಜಿಲ್ಲೆಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಬೇಕು. ಅಲ್ಪಸಂಖ್ಯಾತರು ಹೆಚ್ಚಾಗಿರುವ ಎಲ್ಲ ತಾಲೂಕುಗಳಲ್ಲಿ ಬಾಲಕಿಯರ ಸನಿವಾಸ ಶಾಲೆಗಳನ್ನು ಆರಂಭಿಸಬೇಕು. ಮದ್ರಾಸ ಶಾಲೆಗಳ ಆಧುನೀಕರಣ ಯೋಜನೆಯನ್ನು ಗಣನೀಯವಾಗಿ ಹೆಚ್ಚಿಸಬೇಕು.

ಪರಿಶಿಷ್ಠ ಜಾತಿ, ವರ್ಗ

22. ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭಿವೃದ್ಧಿ ಯೋಜನೆಗಳಿಗೆ ಶೇಕಡ 100ರಷ್ಟು ಅನುದಾನ ನೀಡಬೇಕು. ದಲಿತರು ಮತ್ತು ಆದಿವಾಸಿಗಳು ಹೊಂದಿರುವ ಎಲ್ಲ ಭೂಮಿಗೆ ಸಮಗ್ರವಾದ ಸಣ್ಣ ನೀರಾವರಿ ಯೋಜನೆಗಳನ್ನು ರೂಪಿಸಬೇಕು. ಭೂಮಿತಿ ಮತ್ತು ಭೂ ಮರುಮಂಜೂರಾತಿ ಶಾಸನದ ಮೂಲಕ ಭೂಮಿ ಇಲ್ಲದ ಎಲ್ಲ ಕುಟುಂಬಗಳಿಗೆ ಭೂಮಿ ನೀಡಬೇಕು. ಈ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಳ್ಳುವ ಹಾದಿಯಲ್ಲಿ ಈಗ ಮಂಡಿಸಲಿರುವ ಬಜೆಟ್ ಇರಬೇಕು. ದೂರದ ಗ್ರಾಮಗಳಲ್ಲಿರುವ ಆದಿವಾಸಿಗಳಿಗೆ ಸೌರವಿದ್ಯುತ್ ಒದಗಿಸಲು ಅಸಾಂಪ್ರದಾಯಿಕ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಕ್ರಮಗಳನ್ನು ಕೈಗೊಳ್ಳಬೇಕು.

23. ನಗರ ಪ್ರದೇಶಗಳಲ್ಲಿರುವ ಬಡವರಿಗೆ ಮನೆ ನಿರ್ಮಾಣ ಮಾಡಿಕೊಳ್ಳಲು ನೀಡುವ ಯೋಜನೆ ಹಲವಾರು ವರ್ಷಗಳಿಂದ ದೋಷಪೂರಿತವಾಗಿದೆ. ಈ ಬಜೆಟ್‌ನಲ್ಲಿ ಈ ಯೋಜನೆಗೆ ಹೆಚ್ಚು ಹಣ ನಿಗದಿಪಡಿಸಬೇಕು. ಹುಡ್ಕೋಗೆ ನೀಡುತ್ತಿರುವ ಹಣ ನಗರ ಪ್ರದೇಶದಲ್ಲಿನ ಬಡವರಿಗೆ ಅಗತ್ಯವಾದ ಬೇಡಿಕೆಗೆ ಹೋಲಿಸಿದರೆ ತೀರಾ ಕಡಿಮೆ ಇದೆ. ಬಜೆಟ್‌ನಲ್ಲಿ ಮಂಜೂರು ಮಾಡುವ ಮೂಲಕ ಈ ಪ್ರಮಾಣವನ್ನು ಹೆಚ್ಚಿಸಬೇಕು.

24. ಹೆಚ್ಚು ಕೈಗಾರಿಕಾ ಉದ್ಯೋಗಗಳನ್ನು ಕಲ್ಪಿಸುವ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಕೇಂದ್ರದಿಂದ ಇದುವರೆಗೂ ಸಮರ್ಪಕವಾದ ಬೆಂಬಲ ದೊರೆತಿಲ್ಲ. ಸಣ್ಣ ಕೈಗಾರಿಕಾ ಇಲಾಖೆ ಹಲವಾರು ಯೋಜನೆಗಳನ್ನು ರದ್ದು ಮಾಡುವುದರೊಂದಿಗೆ ಬಜೆಟ್ ಮಂಜೂರಾತಿ ಸಹ ತುಂಬಾ ಕಡಿಮೆ ಇದೆ. ಈ ಬಜೆಟ್‌ನಲ್ಲಿ ಈ ವಲಯಕ್ಕೆ ಹೆಚ್ಚಿನ ಮಂಜೂರಾತಿ ಕಲ್ಪಿಸಲಿಡಬೇಕು. ಸಾಲ ನೆರವು, ತಂತ್ರಜ್ಞಾನ ನೆರವು ಮತ್ತು ಸಮಗ್ರ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕು.

25. ರಾಜ್ಯದ ಯೋಜನೆಗಳಿಗೆ ಕೇಂದ್ರ ಅನುದಾನವನ್ನು ಗಣನೀಯವಾಗಿ ಹೆಚ್ಚಿಸಬೇಕು. ಸಿಎಂಪಿಗೆ ಬದ್ಧತೆಯನ್ನು ತೋರಿಸುವುದರೊಂದಿಗೆ ರಾಜ್ಯಗಳು ಎದುರಿಸುತ್ತಿರುವ ಸಾಲದ ಸಮಸ್ಯೆಯನ್ನು ನಿವಾರಿಸಲು ನೆರವಾಗಬೇಕು ಮತ್ತು ತಕ್ಕಮಟ್ಟಿಗೆ ಪರಿಹಾರವನ್ನು ಒದಗಿಸಬೇಕು.

ರಾಜ್ಯ ಸರ್ಕಾರಗಳ ಸಣ್ಣ ಉಳಿತಾಯದ ಮೇಲಿನ ಬಡ್ಡಿದರಗಳನ್ನು ಕಡಿಮೆ ಮಾಡಬೇಕು. ಹಾಗೂ ರಾಜ್ಯ ಸಂಬಂಧಪಟ್ಟ ವಿಷಯಗಳಿಗೆ ಬಜೆಟ್ ಅನುದಾನ ನೀಡಿ ಅವರಿಗೇ ವರ್ಗಾಯಿಸಬೇಕು.

26. ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳು ನೀಡುವ ಸಾಲದ ಮೇಲಿನ ಬಡ್ಡಿ ಪ್ರಮಾಣವನ್ನು ಕಡಿತಗೊಳಿಸಬೇಕು. ಬ್ಯಾಂಕ್‌ಗಳು ನೀಡುವ ಸಾಲಗಳಿಗೆ ಸಂಬಂಧಿಸಿದಂತೆ ಅಂತರರಾಜ್ಯಗಳ ನಡುವೆ ಇರುವ ಬಾಕಿಗೆ ಖಾತರಿ ನೀಡಬೇಕು. ಈ ಬಜೆಟ್‌ನಲ್ಲಿ ಸ್ವಸಹಾಯ ಸಂಘಗಳಿಗೆ ಸಬ್ಸಿಡಿ ಸಾಲಗಳನ್ನು ನೀಡಬೇಕು.

JANASHAKTHI KANNADA VARA PATRIKE FEB, 17, 2008 Price : Rs. 5/- No. KARKAN /2006/17926 Postal Reg. No. RNP/KA/BGS/2070/2007-09



ನಕುಲ


'ಅವ್ವ' - ಮನಕ್ಕಿಳಿಯದ ಆಶಯ

ಗ್ರಾಮಗಳಲ್ಲಿನ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳನ್ನು ಅನಾವರಣಗೊಳಿಸುತ್ತಲೇ ಒಬ್ಬ ವಿಧವೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ತೋರುವ ದಿಟ್ಟತನ ಮತ್ತು ಒಂದು ಗ್ರಾಮದಲ್ಲಿ ನಡೆಯಬಹುದಾದಂತಹ ಎಲ್ಲಾ ರೀತಿಯ ಘಟನಾವಳಿಗಳನ್ನು ಕಟ್ಟಿಕೊಡುವ ಚಿತ್ರ 'ಅವ್ವ'. ಇಲ್ಲಿ ಜಾತಿ ಪ್ರಶ್ನೆ, ಹರೆಯದ ಪ್ರಣಯ, ಅನೈತಿಕತೆ, ರಾಜಕೀಯ ಮತ್ತು ಅಜ್ಞಾನಗಳ ಚಿತ್ರಣ ಇಲ್ಲಿದೆ.

ಸಾಕವ್ವ ಒಬ್ಬ ವಿಧವೆ. ಹಾಲು ಮಾರಿ, ಅದರಿಂದ ಬಂದ ಹಣದಿಂದ ಬಡ್ಡಿ ವ್ಯವಹಾರ ನಡೆಸುತ್ತಾ ಬದುಕುವ, ಛಾತಿಯುಳ್ಳ ಹೆಣ್ಣು. ಅವಳಿಗೊಬ್ಬಳು ಮಗಳು, ಸಾವಂತ್ರಿ. ಊರವರ ಕಣ್ಣು ಅವರ ಮೇಲೆ, ಅವಳ ಮನಸ್ಸು ಬ್ಯಾಡ್ರ ಮಂಜನ ಮೇಲೆ. ಮಂಜನಿಗೂ ಅವಳೆಂದ್ರೆ ಪ್ರಾಣ. ಇವರ ಕದ್ದು ಮುಚ್ಚಿದ ಪ್ರಣಯ ಊರವರ ಬಾಯಿಗೆ ಆಹಾರ. ಜಾತಿಯಿಂದ ಇವರು ಬೇರೆಯಾಗಿರುವುದು, ಇದನ್ನೇ ನೆಪವಾಗಿಸಿ ಸಾಕವ್ವನನ್ನು ಊರು ಬಿಡಿಸುವ ಪ್ರಯತ್ನ ಕೆಲವರದ್ದು. ಕಾರಣ ಅವಳಿಂದ ಬಡ್ಡಿಗೆ ಹಣ ಪಡೆದು ಹಿಂದಿರುಗಿಸಲಾಗದೆ ಮತ್ತು ಆಕೆ 'ಚಡ್ಡಿ ಬಿಚ್ಚಿ ಮೆರವಣಿಗೆ ಮಾಡಿಸುವ' ಬೆದರಿಕೆಯ ನಿರರ್ಗಳ ಬೈಗುಳಕ್ಕೆ ಹೆದರಿ ಈ ತೀರ್ಮಾನಕ್ಕೆ ಬಂದಿರುತ್ತಾರೆ. ಇದರಲ್ಲಿ ರಾಜಕೀಯ ಮೇಲಾಟವೂ ಸೇರಿರುತ್ತದೆ. ಮುಂದಿನ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಆಕೆ ನಿಂತು, ಗೆದ್ದೇ ಬಿಡುವ ಸಾಧ್ಯತೆಯಿರುವುದರಿಂದ, ಒಂದು ಹೆಣ್ಣಿನ ಏಳ್ಗೆ ಮತ್ತು ಆಕೆಯ ಅಡಿಯಾಳುಗಳಾಗಿ ಬದುಕಬೇಕಾಗುತ್ತದೆಂದು, ಆದ್ದರಿಂದ ಹೇಗಾದರೂ ಮಾಡಿ ಆಕೆಯನ್ನು ಅದುಮಬೇಕೆಂಬುದು ಅವರ ಹಠ.

> ವಿಧವೆಯಾಗಿ ಸಮಾಜಲ್ಲಿ ಎಲ್ಲವನ್ನೂ ಎದುರಿಸುವ ಧೈರ್ಯ ತೋರುವ ಹೆಣ್ಣಿನ ಆತ್ಮಸ್ಥೈರ್ಯವಾಗಲೀ ಮತ್ತು ಜಾತಿ - ಜಾತಿಗಳ ಮಧ್ಯದ ಗೋಡೆಯನ್ನು ಒಡೆಯುವ ಉದಾತ್ತ ಆಶಯ ಸಾಮಾನ್ಯ ಪ್ರೇಕ್ಷಕನ ಅರಿವಿಗೇ ಬರುವುದಿಲ್ಲ.

ಕೊನೆಗೆ ಮಂಜ-ಸಾವಂತ್ರಿಯ ಸಂಬಂಧವನ್ನೇ ಬಳಸಿ, ಜಾತಿ ಪ್ರಶ್ನೆ ಎತ್ತಿ ಅವರನ್ನು ಊರು ಬಿಡಿಸಲು ಯತ್ನಿಸುತ್ತಾರೆ. ಆದರೆ ನಿಂಗವ್ವ ಊರವರ ಮುಂದೆಯೇ ಮಂಜನಿಂದ ಸಾವಂತ್ರಿಗೆ ತಾಳಿ ಕಟ್ಟಿಸಿ, ಊರವರ ಬೆದರಿಕೆಯನ್ನು ಮೆಟ್ಟಿ ನಿಲ್ಲುತ್ತಾಳೆ. ಆಕೆಯೇನೂ ಜಾತ್ಯಾತೀತಳಲ್ಲದಿದ್ದರೂ, ಆಕೆಯ ಅಸ್ತಿತ್ವದ ಪ್ರಶ್ನೆಯಿರುವುದರಿಂದ ಮತ್ತು ಸ್ವಜಾತಿ ಬಾಂಧವರೇ ಆಕೆಯ ಮೇಲೆ ದಂಡೆತ್ತಿ ಬಂದದ್ದರಿಂದ ಇಂತಹ ದಿಟ್ಟ ನಿರ್ಧಾರ ಕೈಗೊಳ್ಳುತ್ತಾಳೆ. ಗಂಡು-ಹೆಣ್ಣನ್ನು ಮನೆಯೊಳಗೆ ಕಳಿಸಿ 'ಯಾರು ಬತ್ತಿರೋ ಬನ್ನಿ, ಏನ್ ಮಾಡ್ತಿರೋ ನೋಡ್ತೀನಿ' ಎಂದು ಕೈಯಲ್ಲಿ ಮಚ್ಚು ಹಿಡಿದು ಅವರನ್ನು ಕಾಯುತ್ತಾ ಕೂರುವುದರೊಂದಿಗೆ ಚಿತ್ರ ಮುಗಿಯುತ್ತದೆ.



ಚಿತ್ರದ ಪ್ರಮುಖ ಆಕರ್ಷಣೆ ಪಿ.ಲಂಕೇಶ್ ಮತ್ತು ಚಂದ್ರೇಗೌಡರ ಸಂಭಾಷಣೆ. ಬಯಲುಸೀಮೆಯ ತುಸು ಅಶ್ಲೀಲವೇ ಎನಿಸುವಂತಹ ಆಡುಭಾಷೆಯನ್ನು ಯಥಾವತ್ತಾಗಿ ಬಳಿಸಿರುವುದು ಚಿತ್ರಕ್ಕೆ ಮೆರುಗು ನೀಡಿದರೂ ನಾಗರೀಕ ಪ್ರೇಕ್ಷಕರಿಗೆ ಅದೇ ಅಪಥ್ಯವಾಗುವ ಸಾಧ್ಯತೆಯೂ ಇದೆ. 'ಕದ್ದು ಮುಚ್ಚಿ ಲವ್ ಮಾಡೋದ್ರಲ್ಲಿ ಇರೋ ಮಜ ಬೇರೇನೇ' ಅನ್ನೋದು ನಿಜವಾದರೂ ಕವಿತಾರು ಅದನ್ನು ಇಷ್ಟೊಂದು ಬಹಿರಂಗ ಪ್ರದರ್ಶನಕ್ಕಿಡಬಾರದಾಗಿತ್ತೇನೋ. ಪ್ರಣಯ ಪ್ರಸಂಗಗಳ ವಿವರಣೆ ಬರವಣಿಗೆ ಮಾಧ್ಯಮದಲ್ಲಿ ಸಹಜ ವೆನಿಸಿದರೂ ದೃಶ್ಯಮಾಧ್ಯಮದಲ್ಲಿ ಅದನ್ನು ಯಥಾರೀತಿಯಲ್ಲಿ ಚಿತ್ರಿಸುವುದು ಸಮಂಜಸವೇ? ಹೆಣ್ಣು ಮಾರುಕಟ್ಟೆಯ ಸರಕಾಗುತ್ತಿದ್ದಾಳೆ ಎನ್ನುವ ಕೂಗು ಕೇಳಿಬರುತ್ತಿರುವ ಸಂದರ್ಭದಲ್ಲೇ, ತುಸು ಮುಜುಗರವೇ ಎನಿಸುವಂತಹ ಪ್ರಣಯ ದೃಶ್ಯಗಳ ಚಿತ್ರಣ ಲಂಕೇಶರ ಕಲ್ಪನೆಗೆ ಚ್ಯುತಿ ಬಾರದಿರಲಿ ಎಂಬುದೋ ಅಥವಾ ಸಿನಿಮಾ ಮಾರುಕಟ್ಟೆಯ ದೃಷ್ಟಿಕೋನವೋ ಎಂಬುದನ್ನು ಮಹಿಳಾ ನಿರ್ದೇಶಕಿಯಾಗಿ ಕವಿತಾರೇ ಸ್ಪಷ್ಟಪಡಿಸಬೇಕು. ಚಿತ್ರಕ್ಕೆ 'ಎ' ಸರ್ಟಿಫಿಕೇಟ್ ದೊರೆತಿರುವುದು ಅವರಿಗೆ ಹೆಮ್ಮೆಯ ವಿಷಯವೇ?

'ದುನಿಯಾ'ದ ವಿಜಯ್ ಇದ್ದಾರೆಂಬ ಕಾರಣಕ್ಕೆ ಮತ್ತು 'ಮುತ್ತು - ಮತ್ತಿನ' ವಿಚಾರ ಪತ್ರಿಕೆಗಳಲ್ಲಿ ಸುದ್ದಿಯಾಗಿ, ಬೇರೇನೋ ನಿರೀಕ್ಷಿಸಿ ಬರುವ ಸಾಮಾನ್ಯ ಪ್ರಕ್ಷೇಕನಿಗೆ ಸ್ವಲ್ಪ ನಿರಾಶೆ ಸಹಜ. ಲಂಕೇಶ್ ಗೊತ್ತಿದ್ದವರಿಗೆ ಮತ್ತು ಅಲ್ಪಸ್ವಲ್ಪ ಸಾಹಿತ್ಯದ ಅರಿವಿದ್ದವರಿಗೆ ಚಿತ್ರದ ಮೂಲ ತಿರುಳು ಅರಿವಾಗುತ್ತದೆ. ವಿಧವೆಯಾಗಿ ಸಮಾಜಲ್ಲಿ ಎಲ್ಲವನ್ನೂ ಎದುರಿಸುವ ಧೈರ್ಯ ತೋರುವ ಹೆಣ್ಣಿನ ಆತ್ಮಸ್ಥೈರ್ಯವಾಗಲೀ ಮತ್ತು ಜಾತಿ - ಜಾತಿಗಳ ಮಧ್ಯದ ಗೋಡೆಯನ್ನು ಒಡೆಯುವ ಉದಾತ್ತ ಆಶಯ ಸಾಮಾನ್ಯ ಪ್ರೇಕ್ಷಕನ ಅರಿವಿಗೇ ಬರುವುದಿಲ್ಲ. ಗ್ರಾಮೀಣ ಬದುಕನ್ನು ಸಮರ್ಥವಾಗಿ ಕಟ್ಟಿಕೊಡುವ ಕವಿತಾ, ಗಂಭೀರವಾದ ಸಂದರ್ಭದಲ್ಲೂ ಅವರ ಹಾಸ್ಯದ ಒಗ್ಗರಣೆ ತುಸು ಹೆಚ್ಚಾಗಿ ಅಂತಹ ಸನ್ನಿವೇಶ ಬೀರುವ ಪ್ರಭಾವ ಕಡಿಮೆಯಾಗಿದೆ.

ಬ್ಯಾಡ್ರ ಮಂಜನಾಗಿ ವಿಜಯ್ ಮತ್ತು ಸಾವಂತ್ರಿಯಾಗಿ ರಶ್ಮಿಯ ಅಭಿನಯ ಚಿತ್ರಕ್ಕೊಂದು ಕಳೆ ಕೊಟ್ಟಿದೆ. ಆದರೆ ಪ್ರಮುಖ ಪಾತ್ರಧಾರಿ ಸಾಕವ್ವನಾಗಿ ಶೃತಿಯವರ ಅಂಗಿಕ ಅಭಿನಯ (Bodylanguage) ಗ್ರಾಮೀಣ ಮಹಿಳೆಯಂತಿಲ್ಲ. ಚುರುಕು ಸಂಭಾಷಣೆಯಿಂದಾಗಿ ಈ ಅಂಶ ಮರೆಯಾಗಿ, ಪರವಾಗಿಲ್ಲ ವೆನಿಸುತ್ತದೆ. ಪ್ರಭಾವ ಬೀರುವ ಇಂತಹ ಪಾತ್ರಕ್ಕೆ ಶೃತಿ ಸೂಕ್ತ ಆಯ್ಕೆ ಅಲ್ಲ. ಸಾಕವ್ವನ ಮೇಲೆ ಮಸಲತ್ತು ನಡೆಸುವ ಭರಮಣ್ಣನಾಗಿ ರಂಗಾಯಣ ರಘು ಮತ್ತು ಕರಿಯನಾಗಿ ಬಾಲನಟನೊಬ್ಬನ ಅಭಿನಯ ಗಮನಾರ್ಹ. ಮಧು ಅಂಬಟ್ ಅವರ ಛಾಯಾಗ್ರಹಣ ಚೆನ್ನಾಗಿದ್ದರೂ ಗ್ರಾಮೀಣ ಪರಿಸರವನ್ನು ಇನ್ನೂ ಸಮರ್ಥವಾಗಿ ಕಟ್ಟಿಕೊಡಬಹುದಿತ್ತು.

ಚಿತ್ರಮಂದಿರದಿಂದ ಹೊರಬಂದ ಮೇಲೆ ಚಿತ್ರದ ಒರಟು ಸಂಭಾಷಣೆ ಮತ್ತು ಬ್ಯಾಡ್ರ ಮಂಜ-ಸಾವಂತ್ರಿಯ 'ಕದ್ದು ಮುಚ್ಚಿ ಲವ್ ಮಾಡೋದ್ರಲ್ಲಿರೋ ಮಜಾ' ಮಾತ್ರ ನೆನಪಿನಲ್ಲಿಯುತ್ತದೆಯೇ ಹೊರತು ಚಿತ್ರ ನಿಜವಾದ ಆಶಯ ಮನಸ್ಸಿಗಿಳಿಯದಿರುವುದೇ ಚಿತ್ರದ ವೈಫಲ್ಯತೆ. ❍



ಎರಡನೇ ಮಹಾಯುದ್ಧದಲ್ಲಿ ವಿನಾಶದ ನಡುವೆಯೂ ನಾಶವಾಗದ ಬದುಕಿನ ಆಶೆ.

ಖ್ಯಾತ ಕಲಾವಿದ ಪ್ಯಾಬ್ಲೋ ಪಿಕಾಸೋ ಚಿತ್ರ

ಪಾಕ್‌ನ ಸಹೋದರಿಯ ಮನೆಯಲ್ಲಿ



ನೆರಮನೆ ಪಾಕಿಸ್ತಾನದ
ಸಹೋದರಿಯ ಮನೆಯಲ್ಲಿ
ದೀಪಾವಳಿಯ ಬೆಳಕಿಲ್ಲ
ರಮಜಾನಿನ ಸೊಗಸೂ ಇಲ್ಲ.

ಮಕ್ಕಳ ಕೈಗಳಲಿ
ಸಿಡಿದರೂ ಸಾಕು ಪಟಾಕಿ
ಭುಗಿಲೇಳುವುದು
ಬೆಳಕಲ್ಲವದು
ಕೆಂಡದುಂಡೆಗಳ ಬೆಂಕಿ!

ಮಕ್ಕಳ ಕೈಗಳಲಿ
ಆಡಲು ಆಟಿಕೆಗಳಲ್ಲ
ಕೈ ತುಂಬಾ ಆಯುಧಗಳು
ಕೊಟ್ಟವರಾರು....?

ಮನದ ತುಂಬಾ
ಇಲ್ಲವೇ ಇಲ್ಲ
ಲೆಕ್ಕ-ಬುಕ್ಕದ ಕನಸು
ಅಲ್ಲೀಗ ಜಿಹಾದಿ ಮನಸು

ಕಾಣಿಸುತ್ತಿಲ್ಲ
ಶಾಲೆಯ ಹಾದಿ

ಎದೆ ಹಾಲು ಕುಡಿದು
ಬೆಳೆದ ಮಕ್ಕಳಿಗೆ
ಧರ್ಮದ ಫೀಮು
ಕುಡಿಸಿದವರಾರು....?

ಪಶ್ಚಿಮದ 'ಆ' ಮನೆಯ
ಬಿಳಿ ಮಾಮ ಕೊಟ್ಟನೆ...?
ಇದು ಪೂರ್ವದ ಪ್ರಶ್ನೆ

ಪೂರ್ವಕ್ಕೂ-ಪಶ್ಚಿಮಕ್ಕೂ
ಬರುವ ಸೂರ್ಯ
ಒಬ್ಬನೇ ಅಲ್ಲವೇ....?
ಇದು ಎಲ್ಲರ ಪ್ರಶ್ನೆ.

ಬಿ.ಶ್ರೀನಿವಾಸ, ಹಾವೇರಿ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH